# ತಂದೆಯ ಪ್ರೀತಿ



ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**

ಪ್ರಥಮ ಪ್ರತಿ - ಡಿಜಿಟಲ್ ಬಿಡುಗಡೆ : ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA
Phone: +91-80-25452617
Email: contact@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಹಣಕಾಸಿನ ಪಾಲುಗಾರಿಕೆ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ದಯವಿಟ್ಟು apcwo.org/give ಅನ್ನು ಸಂಪರ್ಕಿಸಿ ಅಥವಾ ಈ ಪುಸ್ತಕದ ಕೊನೆಯ ಭಾಗದಲ್ಲಿರುವ ''ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ'' ಎಂಬ ಪುಟ ನೋಡಿರಿ. ವಂದನೆಗಳು!


**ಮೇಲಿಂಗ್ ಪಟ್ಟಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ದಯವಿಟ್ಟು ಇ-ಮೇಲ್ ಕಳುಹಿಸಿರಿ. bookrequest@apcwo.org

**ಭಾರತದೊಳಗೆ ದೊಡ್ಡ ಗಾತ್ರದ ಉಚಿತ ವಿತರಣೆ**

ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ. ದಯವಿಟ್ಟು ಇ-ಮೇಲ್ ಕಳುಹಿಸಿರಿ. bookrequest@apcwo.org

(Kannada Book - The Father's Love)


ತಂದೆಯ
ಪ್ರೀತಿ

# ವಿಷಯಸೂಚಿ


ಪೀಠಿಕೆ 1

1 ಅನಂತ ದೇವರು, ನಮ್ಮ ಪರಲೋಕದ ತಂದೆಯೇ 3

2 ಅಗಾಧವಾದ ಪ್ರೀತಿ 21

3 ನಮ್ಮ ಪರಲೋಕ ತಂದೆಯ ನಿಜ ಚಿತ್ರಣ 34

4 ತಂದೆಯ ಪ್ರೀತಿಯನ್ನು ಪಡೆದುಕೊಳ್ಳುವುದು 47

5 ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದು 66

6 ಶಿಸ್ತುಗೊಳಿಸುವ ಪ್ರೀತಿ 81

7 ನಮ್ಮ ಪರಲೋಕದ ತಂದೆಯನ್ನು ಅನುಕರಣೆ ಮಾಡುವುದು 90

# ಪೀಠಿಕೆ

ದೇವರ ನಿಮ್ಮ ಪ್ರಕಟನೆಯು ದೇವರೊಂದಿಗಿನ ನಿಮ್ಮ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ. ನಿಮ್ಮ ದೇವರೊಂದಿಗಿನ ಸಂಬಂಧವು ಇತರರೊಂದಿಗೆ ನಿಮ್ಮ ಸಂಬಂಧದ ಮೇಲೂ ಪ್ರಭಾವ ಬೀರುತ್ತದೆ.

ಸತ್ಯವೇದವು ದೇವರ ಅನೇಕ ಮುಖಗಳನ್ನು ಅನಾವರಣಗೊಳಿಸುತ್ತದೆ. ದೇವರ ಒಂದು ಬಲಿಷ್ಠವಾದ ಪ್ರಕಟನೆಯು ದೇವರು ಒಬ್ಬ ತಂದೆಯಾಗಿದ್ದಾನೆ ಎಂಬುದಾಗಿದೆ. ದೇವರು ಪರಲೋಕದ ತಂದೆಯಾಗಿದ್ದಾನೆ. ದೇವರನ್ನು ''ನಮ್ಮ ತಂದೆಯೇ'' ಎಂಬುದಾಗಿ ಕರೆಯುವಂತೆ ಕರ್ತನಾದ ಯೇಸು ನಮಗೆ ಉಪದೇಶಿಸಿದ್ದಾನೆ. ಸತ್ಯವೇದವು ತಂದೆಯ ಪ್ರೀತಿಯ ಮೇಲಿನ ಒಂದು ಅಧ್ಯಯನವಾಗಿದೆ. ದೇವರ ಪ್ರೀತಿಯ ನಮ್ಮ ತಿಳುವಳಿಕೆಯು, ನಾವು ದೇವರನ್ನು ಹೇಗೆ ಪ್ರೀತಿಸುತ್ತೇವೆ, ನಮ್ಮನ್ನು ನಾವು ಹೇಗೆ ಪ್ರೀತಿಸಿಕೊಳ್ಳುತ್ತೇವೆ ಮತ್ತು ಇತರರನ್ನು ಹೇಗೆ ಪ್ರೀತಿಸುತ್ತೇವೆಂಬುದರ ಮೇಲೆ ಪರಿಣಾಮ ಬೀರುತ್ತದೆ. ನಮಗಿರುವಂತದ್ದೆಲ್ಲರಲ್ಲಿ ದೇವರನ್ನು ಪ್ರೀತಿಸಬೇಕೆಂಬುದು ಮೊದಲ ಆಜ್ಞೆಯಾಗಿದೆ. ನಮ್ಮನ್ನು ನಾವು ಪ್ರೀತಿಸಿಕೊಳ್ಳುವಂತೆ ಇತರರನ್ನು ಪ್ರೀತಿಸುವುದು ಎರಡನೆಯದಾಗಿದೆ. ನಾವು ಆತನನ್ನು ಪ್ರೀತಿಸುತ್ತೇವೆ. ಯಾಕೆಂದರೆ, ಆತನು ನಮ್ಮನ್ನು ಮೊದಲು ಪ್ರೀತಿಸಿದ್ದಾನೆ. ಆತನು ನಮ್ಮನ್ನು ಎಷ್ಟು ಪ್ರೀತಿಸಿದ್ದಾನೆಂಬುದನ್ನು ನಾವು ಅರ್ಥ ಮಾಡಿಕೊಂಡಾಗ ದೇವರಿಗಾಗಿರುವುದು ನಮ್ಮ ಪ್ರೀತಿಯ ಆಳವಾಗಿರುತ್ತದೆ. ಆತನು ನಮ್ಮನ್ನು ಎಷ್ಟು ಪ್ರೀತಿಸಿದ್ದಾನೆಂಬುದನ್ನು ಅರ್ಥ ಮಾಡಿಕೊಳ್ಳುವಾಗ ನಮ್ಮನ್ನು ನಾವೇ ಪ್ರೀತಿಸಿಕೊಳ್ಳುವುದನ್ನು ಕಲಿಯುತ್ತೇವೆ. ನಮ್ಮನ್ನು ನಾವೇ ಪ್ರೀತಿಸಿಕೊಳ್ಳುವಾಗ ಇತರರನ್ನು ನಾವು ಪ್ರೀತಿಸಲು ಶಕ್ತರಾಗುತ್ತೇವೆ. ನಮ್ಮನ್ನು ದೇವರು ಎಷ್ಟು ಬೆಲೆಯುಳ್ಳವರೆಂದು ಎಣಿಸುತ್ತಾನೆಂಬುದನ್ನು ಅರ್ಥ ಮಾಡಿಕೊಂಡರೆ, ನಮ್ಮನ್ನು ಬೆಲೆಯುಳ್ಳವರೆಂದು ಎಣಿಸಲು ಪ್ರಾರಂಭಿಸುತ್ತೇವೆ. ನಮ್ಮನ್ನು ಬೆಲೆಯುಳ್ಳವರೆಂದು ಎಣಿಸುವಾಗ ಇತರರನ್ನು ಸಹ ಬೆಲೆಯುಳ್ಳವರೆಂದು ಎಣಿಸುತ್ತೇವೆ.

ವಾಸ್ತವವಾಗಿ ನಮ್ಮನ್ನು ನಾವೇ ಸಂಬಂಧಿಸಿಕೊಳ್ಳುವಂತಹ ರೀತಿಯಲ್ಲಿ ನಾವು ಇತರರೊಂದಿಗೆ ಸಂಬಂಧಿಸಿಕೊಳ್ಳುತ್ತೇವೆ. ನಮ್ಮನ್ನು ನಾವೇ ಸಂಬಂಧಿಸಿಕೊಳ್ಳುತ್ತೇವೆ. ನಮ್ಮನ್ನು ನಾವೇ ಖಂಡಿಸಿಕೊಂಡರೆ, ನಮ್ಮಲ್ಲಿ ನಾವೇ ತಪ್ಪು ಹುಡುಕಿಕೊಂಡರೆ ಇತರರಿಗೂ ಸಹ ನಾವು ಅದನ್ನೇ ಮಾಡುತ್ತೇವೆ. ನಮ್ಮ ಕಡೆಗೂ ಮತ್ತು ಇತರರ ಕಡೆಗೂ ಇರುವಂತಹ

ನಕಾರಾತ್ಮಕತೆಗಳಿಂದ ದೇವರ ಪ್ರೀತಿಯು ನಮ್ಮ ಸ್ವತಂತ್ರಗೊಳಿಸುತ್ತದೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ದೇವರು, ಪರಲೋಕದಲ್ಲಿನ ನಮ್ಮ ತಂದೆಯು, ಯಾವ ಷರತ್ತೂ ಇಲ್ಲದೆ ಮತ್ತು ಅಗಾಧವಾಗಿ ನಮ್ಮನ್ನು ಪ್ರೀತಿಸುತ್ತಾನೆ. ತಂದೆಯ ಪ್ರೀತಿಯ ತೋರ್ಪಡಿಸುವಿಕೆಯ ಒಂದು ದೊಡ್ಡದಾದ ಅಭಿವ್ಯಕ್ತತೆಯು ಯೇಸುಕ್ರಿಸ್ತನ ಶಿಲುಬೆಯಾಗಿದೆ. ನಮಗಾಗಿರುವ ತಂದೆಯ ಪ್ರೀತಿಯಲ್ಲಿ ನಾವು ತಿಳಿಯುವಾಗ, ನಂಬುವಾಗ, ಪಡೆದುಕೊಳ್ಳುವಾಗ, ನೆಲೆಗೊಳ್ಳುವಾಗ ಎಲ್ಲವೂ ಬದಲಾಗುತ್ತದೆ. ನಾವು ಸ್ವಸ್ಥತೆ ಹೊಂದಿದ್ದೇವೆ ಮತ್ತು ನಮ್ಮ ಎಲ್ಲಾ ಬಂಧನಗಳು ಮತ್ತು ವಿಚ್ಛಿನ್ನತೆಯಿಂದ ಸ್ವತಂತ್ರಗೊಂಡಿದ್ದೇವೆ. ನಾವು ತಂದೆಯ ಪ್ರೀತಿಯಲ್ಲಿ ಬದುಕುವಾಗ ನಾವು ಪ್ರೀತಿಸಿದಂತೆಯೇ, ಪ್ರೀತಿಸುತ್ತೇವೆ. ನಾವು ಸ್ವತಂತ್ರವಾಗಿ ದೇವರನ್ನು ಪ್ರೀತಿಸುತ್ತೇವೆ. ಇತರರನ್ನು ಉಚಿತವಾಗಿ ಪ್ರೀತಿಸುತ್ತೇವೆ. ಒಡೆಯಲಾಗದಂತಹ ದೇವರ ಪ್ರೀತಿಯ ಮೂಲಕವಾಗಿ ಅಂಧಕಾರದ ಬಲಗಳನ್ನು ಮತ್ತು ಜೀವಿತದ ಸವಾಲುಗಳನ್ನು ಅಧಿಕವಾಗಿ ಸೋಲಿಸುವಂತಹ ವಿಜಯಶಾಲಿಗಳಾಗಿ ಜೀವಿಸುತ್ತೇವೆ.

ವೈಯುಕ್ತಿಕವಾಗಿ ತಂದೆಯ ಪ್ರೀತಿಯನ್ನು ತಿಳಿಯುವುದು ಮತ್ತು ಅನುಭವಿಸುವುದರ ಒಂದು ಪ್ರಯಾಣದಲ್ಲಿ ಈ ಪುಸ್ತಕವು ನಮ್ಮನ್ನು ನಡೆಸುತ್ತದೆ. ಮಿತಿಯಿಲ್ಲದ ದೇವರ ಪ್ರೀತಿಯ ಆಳಕ್ಕೆ ನೀವು ಎಂದಾದರೂ ಪ್ರಯಾಣದಲ್ಲಿದ್ದೀರಾ ಎಂಬುದರ ಅತ್ಯಾಕರ್ಷಕ ಕ್ಷಿಪ್ರತೆಗೆ ಸಿದ್ಧವಾಗಿರಿ.

ದೇವರು ನಿಮ್ಮನ್ನು ಆಶೀರ್ವದಿಸಲಿ!
ಆಶಿಷ್ ರಾಯ್‌ಚೂರ್

ಈ ಪುಸ್ತಕವು ನಿಮ್ಮ ವೈಯುಕ್ತಿಕ ಮತ್ತು ಚಿಕ್ಕ ಗುಂಪುಗಳ ಸತ್ಯವೇದದ ಅಧ್ಯಯನದಲ್ಲಿ ಉಪಯೋಗಿಸಿರಿ. ನೀವು ಸಭಾಪಾಲಕರಾಗಿದ್ದರೆ ನಿಮ್ಮ ಸಭಿಕರಿಗೆ ಈ ಸತ್ಯಗಳನ್ನು ಪ್ರಸಂಗಿಸಲು ಈ ಪುಸ್ತಕ ಉಪಯೋಗಿಸಬಹುದು.

# 1

# ಅನಂತ ದೇವರು, ನಮ್ಮ ಪರಲೋಕದ ತಂದೆಯೇ

## ನಮ್ಮ ತಂದೆಯು ಪರಲೋಕದಲ್ಲಿದ್ದಾರೆ

**ಮತ್ತಾಯ 6:9**
**ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು – ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.**

ಸತ್ಯವೇದವು ದೇವರ ಅನೇಕ ಮುಖಗಳನ್ನು ಅನಾವರಣಗೊಳಿಸುತ್ತದೆ. ದೇವರು ತಂದೆಯಾಗಿದ್ದಾನೆಂಬುದು ಒಂದು ಮುಖ್ಯವಾದ ಅತ್ಯದ್ಭುತಕರವಾದ ಅಂಶವಾಗಿದೆ. ಪರಲೋಕದಲ್ಲಿರುವ ನಮ್ಮ ತಂದೆ ಅಥವಾ ನಮ್ಮ ಪರಲೋಕದ ತಂದೆ ಎಂಬುದಾಗಿ ದೇವರವನ್ನು ಕರೆಯುವ ಮೂಲಕ ಪ್ರಾರ್ಥಿಸಬೇಕೆಂಬುದಾಗಿ ಕರ್ತನಾದ ಯೇಸು ಬೋಧಿಸಿದ್ದಾನೆ. ತಂದೆಯಾದ ದೇವರನ್ನು ಉಲ್ಲೇಖಿಸಲೂ ಕರ್ತನಾದ ಯೇಸು "ಪರಲೋಕದ ತಂದೆ". "ಪರಲೋಕದಲ್ಲಿರುವ ತಂದೆ" ಎಂಬ ಪದವನ್ನು ಆಗಾಗ್ಗೆ ಉಪಯೋಗಿಸಿದ್ದಾನೆ.

ಇಂತಹ ಮಿತಿಯಿಲ್ಲದ, ಎಲ್ಲಾ ಬಲವುಳ್ಳ, ಎಲ್ಲಾ ತಿಳಿದ, ಎಲ್ಲಾ ಕಡೆಯಲ್ಲಿರುವ, ಸ್ವಯಂ ಅಸ್ತಿತ್ವವುಳ್ಳ, ನಿತ್ಯತ್ವವುಳ್ಳ ದೇವರು ನಮ್ಮ ತಂದೆಯಾಗಲು ಬಯಸುವುದು ಅದ್ಭುತಕರವಾದದು ಮತ್ತು ಆಶ್ಚರ್ಯಕರವಾದುದಾಗಿದೆ. ತಂದೆಯಾಗಿ, ಆತನು ಪರಲೋಕದಲ್ಲಿ ಭಾಗವಾಗಿರುವವರು ಮತ್ತು ಭೂಮಿಯ ಮೇಲೆ ಭಾಗವಾಗಿರುವಂತಹ ಇತರರಾದ, ಒಂದು ಕುಟುಂಬದ ಪುತ್ರರು ಮತ್ತು ಪುತ್ರಿಯರನ್ನು ಹೊಂದಿದ್ದಾನೆ. ಈ ಕುಟುಂಬವು ಆತನಿಂದ ಇದರ ಗುರುತಾಗಿರುವ ಇದರ ಹೆಸರನ್ನು ಗುರುತಿಸಿಕೊಂಡಿದೆ. ಹೀಗಿರಲಾಗಿ ಯಾವ ತಂದೆಯಿಂದ ಭೂ ಪರಲೋಕಗಳಲ್ಲಿರುವ ಪ್ರತಿ ಜನವೂ ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ನಾವು ಮೊಣಕಾಲೂರಿಕೊಂಡು –"(ಎಫೆಸದವರಿಗೆ 3:4) ಎಂಬುದಾಗಿ ಬರೆದಿದ್ದಾನೆ.

ದೇವರು ಸ್ವ-ಅಸ್ತಿತ್ವವುಳ್ಳವನು ಮತ್ತು ಸ್ವ-ತೃಪ್ತನು. ದೇವರಿಗೆ ಜನರ ಅವಶ್ಯಕತೆಯಿಲ್ಲ. ಆದಾಗ್ಯೂ ಆತನ "ಪುತ್ರರು ಮತ್ತು ಪುತ್ರಿಯರು" ಆಗಿರುವಂತಹ ಅವರಲ್ಲಿ ಆತನು ತಂದೆಯಾಗಿರುವಂತಹ ಜನರನ್ನು ಸೃಷ್ಟಿಸಲೂ ಆತನು ತೀರ್ಮಾನಿಸಿದವನು. ಆತನ ಸ್ವಂತ ಚಿತ್ತದಿಂದ ಸೃಷ್ಟಿಸಿದನು ಮತ್ತು ಆರಿಸಿಕೊಂಡನು. ನಮ್ಮನ್ನು ಪುತ್ರರು ಮತ್ತು ಪುತ್ರಿಯರು ಆದಂತಹ ನಮಗೆ ಆತನು ತಂದೆಯಾಗಿ ಹಾತೊರೆಯುವಂತಹ ಒಂದು ಸ್ಥಿತಿಯಲ್ಲಿ ತನ್ನನ್ನು ಇರಿಸಿಕೊಳ್ಳಲೂ ಆರಿಸಿಕೊಂಡನು. ಈ ಒಂದು ಪ್ರಜ್ಞೆಯಲ್ಲಿ ಆತನಿಗೆ ನಮ್ಮ "ಅಗತ್ಯತೆಯಿದೆ". ತಂದೆಯಂತೆ ಆತನನ್ನು ನಾವು ತಿಳಿಯಬೇಕು ಮತ್ತು ಸಂತೋಷಿಸಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ.

**1 ಯೋಹಾನ 4:8**
**.....ದೇವರು ಪ್ರೀತಿಸ್ವರೂಪಿ.....**

ದೇವರು ಪ್ರೀತಿ ಸ್ವರೂಪಿಯು ಎಂಬುದಾಗಿ ಸತ್ಯವೇದ ಪ್ರಕಟಿಸುತ್ತದೆ. ಪರಲೋಕದ ನಮ್ಮ ತಂದೆ ಪ್ರೀತಿಯಾಗಿದ್ದಾನೆ. ಈ ಒಂದು ಅಧ್ಯಯನದ ಮೂಲಕವಾಗಿ ದೇವರ ಪ್ರೀತಿಯು ಮಿತಿಯಿಲ್ಲದ್ದು ಎಂಬುದನ್ನು ನಾವು ಗುರುತಿಸುತ್ತೇವೆ. ದೇವರ ಪ್ರೀತಿಯು ಹತೋಟಿಯಿಲ್ಲದ್ದು ಆತನ ಪ್ರೀತಿಯು ಅನಂತವಾದುದು. ಈ ರೀತಿಯಾಗಿ ದೇವರು ಪ್ರೀತಿಸುತ್ತಾನೆ.

ಆಗಾಗ್ಗೆ "ತಂದೆ" ಎಂಬ ಪದವನ್ನು ನಾವು ಆಲೋಚಿಸುವಾಗ, ನಮ್ಮ ಸ್ವಾಭಾವಿಕ ತಂದೆ-ತಾಯಂದಿರು ಹೇಗೆ ನಮ್ಮನ್ನು ಸತ್ಕರಿಸಿದರು ಎಂಬುದರ ನಮ್ಮ ಅನುಭವದೊಡನೆ ಸಂಯೋಜಿಸಿಕೊಳ್ಳುತ್ತೇವೆ. ನಮ್ಮಲ್ಲಿ ಅನೇಕರು ತಮ್ಮ ತಂದೆತಾಯಂದಿರು/ ತಂದೆಯೊಂದಿಗೆ ಅತ್ಯದ್ಭುತಕರವಾದ ಅನುಭವ ಹೊಂದಿರಬಹುದು. ಆದ್ದರಿಂದ "ತಂದೆ" ಎಂಬ ಪದವನ್ನು ಉತ್ತಮವಾಗಿ ತೆಗೆದುಕೊಳ್ಳುತ್ತಾರೆ. ಇನ್ನೊಂದೆಡೆಯಲ್ಲಿ, "ತಂದೆ" ಎಂಬ ಪದವೂ ನಮ್ಮಲ್ಲಿ ಹಲವರಿಗೆ ಎದುರುಬೀಳುವಂತೆ ಮಾಡಬಹುದು. ನಮ್ಮ ಸ್ವಾಭಾವಿಕ ತಂದೆತಾಯಿ/ತಂದೆಯೊಂದಿಗಿನ ನಮ್ಮ ಅನುಭವವು ನೋವಿನಿಂದ ಕೂಡಿರಬಹುದು. ಆದ್ದರಿಂದ ಅಂತಹ ಆಲೋಚನೆಗಳು ಮತ್ತು ಜ್ಞಾಪಕಗಳನ್ನು ಪ್ರಚೋದಿಸುವಂತದ್ದನ್ನು ನಾವು ದ್ವೇಷಿಸುತ್ತೇವೆ.

ಈ ಒಂದು ಪುಸ್ತಕವು ಯಾವುದೇ ಭೂಲೋಕದ ತಂದೆಗಿಂತ ವಿಭಿನ್ನವಾದ ಮತ್ತು ಅತ್ಯುನ್ನತವಾದ, ಎಲ್ಲರಿಗಿಂತ ಉನ್ನತವಾದಂತಹ ನಮ್ಮ ಪರಲೋಕದ ತಂದೆಯ ಕುರಿತಾಗಿದೆ. ದೇವರು ಇಹಲೋಕದ ಕೆಟ್ಟದಾದ ತಂದೆಯಂತಿಲ್ಲ. ಆದ್ದರಿಂದ ಆ ದೇವರನ್ನು ಇಹಲೋಕದ ತಂದೆಯ ದೃಷ್ಟಿಕೋನದಿಂದ ನೋಡಬಾರದು.

ನಿಮ್ಮ ಇಹಲೋಕದ ತಂದೆತಾಯಿ/ತಂದೆಯ ನಕಾರಾತ್ಮಕ ಅನುಭವಗಳು, ನೀವು ಪರಲೋಕದ ತಂದೆಯನ್ನು ತಿಳಿಯುವ ಮತ್ತು ಆತನಿಂದ ಪಡೆದುಕೊಳ್ಳಲೂ ಬರುವಂತಹ ಸ್ಥಿತಿಯಿಂದ ದೂರವಿರಿಸದಿರಲಿ. ನಮ್ಮ ಪರಲೋಕದ ತಂದೆಯ ಪ್ರೀತಿಯನ್ನು ತಿಳಿಯುವುದು ಮತ್ತು ಅನುಭವಿಸುವುದು ಈ ಅಧ್ಯಯನದ ಗುರಿಯಾಗಿದೆ. ಇದು ಜೀವಿತವನ್ನು ಮಾರ್ಪಡಿಸುವುದಾಗಿದೆ.

ತಂದೆಯ ಪ್ರೀತಿಯನ್ನು ಅರಿಯಲು ಮತ್ತು ಅನುಭವಿಸಲೂ ಬೇರೆ ಯಾವ ಸಂಗತಿಗಳು ನಿಮ್ಮನ್ನು ಹಿಡಿದಿಟ್ಟುಕೊಳ್ಳದಿರಲಿ.

## ದೇವರು ಸಂಬಂಧಿತನಾದವನು

**ಯೋಹಾನ 17:24**

**ತಂದೆಯೇ ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛಿಸುತ್ತೇನೆ.**

ಲೋಕವು ಸೃಷ್ಟಿಯಾಗುವುದಕ್ಕೆ ಮುಂಚೆಯೇ ಲೋಕದ ಅಸ್ತಿವಾರಕ್ಕೆ ಮುಂಚೆಯೇ ತ್ರೈಯೇಕತ್ವದಲ್ಲಿ ಪ್ರೀತಿಯಿತ್ತು. ದೇವರ ಶೀರ್ಷಿಕೆಯಲ್ಲಿ ಪ್ರೀತಿಯಿತ್ತು. ದೇವರ ನಾಯಕತ್ವ ಇತ್ತು ಮತ್ತು ಪ್ರೀತಿಯಿತ್ತು. ಯಾಕೆದರೆ ದೇವರು ಪ್ರೀತಿ ಸ್ವರೂಪಿಯು. ಹಿಂದಿನ–ನಿತ್ಯತ್ವದ ಹಿಂದೆ, ದಿನಾಂಕವಿಲ್ಲದರಲ್ಲಿ ತಂದೆಯು, ವಾಕ್ಯ ಮತ್ತು ಆತ್ಮನ ನಡುವೆ ಒಂದು ಪ್ರೀತಿಯಿತ್ತು.

ಇದು ನಮಗೆ ದೇವರು ಸಂಬಂಧಾತ್ಮಕವುಳ್ಳವನೆಂದು ಬೋಧಿಸುತ್ತದೆ. ದೇವರು ಪ್ರೀತಿಸುತ್ತಾನೆ ಮತ್ತು ಪ್ರೀತಿಸಬಹುದು.

**ಮಾರ್ಕ 12:29–31**

**ಯೇಸು – ಇಸ್ರಾಯೇಲ್ ಜನವೇ ಕೇಳು ನಮ್ಮ ದೇವರಾದ ಕರ್ತನು ಒಬ್ಬನೇ. ದೇವರು ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ ಎರಡನೆಯ ಆಜ್ಞೆ. ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರ ಕೊಟ್ಟನು.**

ನಾವು ಹೊಂದಿರುವಂತಹ ಎಲ್ಲವುಗಳಾದ – ಹೃದಯ, ಆತ್ಮ, ಪ್ರಾಣ ಮತ್ತು ಶಕ್ತಿಯಿಂದ ದೇವರನ್ನು ಪ್ರೀತಿಸಬೇಕೆಂಬುದು ಕರ್ತನಾದ ಯೇಸುವಿನಿಂದ ನಮಗೆ

ಕೊಡಲ್ಪಟ್ಟ ಮೊದಲ ಆಜ್ಞೆಯಾಗಿದೆ. ದೇವರು ಸಹ ಪ್ರೀತಿಸಲ್ಪಡುತ್ತಾನೆಂಬುದನ್ನು ಇದು ಸೂಚಿಸುತ್ತದೆ. ಆತನಿಗಾಗಿ ಇರುವ ನಮ್ಮ ಪ್ರೀತಿಯನ್ನು ಆತನು ಆನಂದಿಸುತ್ತಾನೆ. ನಮ್ಮ ಪ್ರೀತಿಯನ್ನು ಆತನು ಪಡೆದುಕೊಳ್ಳುತ್ತಾನೆ. ನಮ್ಮ ಪ್ರೀತಿಯನ್ನು ಆತನು ಮುಟ್ಟುತ್ತಾನೆ. ಆತನಿಗಾಗಿರುವ ಪ್ರೀತಿಯನ್ನು ಆತನು ಅನುಭವಿಸುತ್ತಾನೆ. ನಾವು ಆತನನ್ನು ದೃಷ್ಟಿಸಿ ನೋಡುವಾಗ, ಮತ್ತು ನಮ್ಮ ಹೃದಯದ ಯಥಾರ್ಥತೆಯಿಂದ "ತಂದೆಯೇ ನಾನು ನಿನ್ನನ್ನು ಪ್ರೀತಿಸುತ್ತೇನೆ" "ಕರ್ತನಾದ ಯೇಸು, ನಾನು ನಿನ್ನನ್ನು ಪ್ರೀತಿಸುತ್ತೇನೆ" "ಪವಿತ್ರಾತ್ಮನೆ ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂಬುದಾಗಿ ಆತನಿಗೆ ಹೇಳುವಾಗ – ಆತನು ಅದರ ಅನುಭವ ಹೊಂದುತ್ತಾನೆ.

ಆತನ ಸ್ವಾರೂಪ್ಯದಲ್ಲಿ ನಾವು ಸೃಷ್ಟಿಸಲ್ಪಟ್ಟಿದ್ದೇವೆ. ನಾವು ಸಂಬಂಧಿತರಾದವರು. ನಾವು ಪ್ರೀತಿಸಲ್ಪಟ್ಟಿದ್ದೇವೆ ಮತ್ತು ಪ್ರೀತಿಸಬಹುದು. ನಾವು ದೇವರನ್ನು ಪ್ರೀತಿಸಲು ಮತ್ತು ಜನರನ್ನು ಪ್ರೀತಿಸಲೂ ಸೃಷ್ಟಿಸಲ್ಪಟ್ಟಿದ್ದೇವೆ. ನಾವು ಪ್ರೀತಿ ಪಾತ್ರರಾಗಲೂ ಮತ್ತು ಪ್ರೀತಿಯನ್ನು ಸ್ವೀಕರಿಸಲೂ ಸೃಷ್ಟಿಸಲ್ಪಟ್ಟಿದ್ದೇವೆ. ನಾವು ಸಂಬಂಧಾತ್ಮಕರಾಗಿರುವುದರ ಭಾಗವಾಗಿ ಮತ್ತು ಒಬ್ಬ ತಂದೆತಾಯಿ – ಒಬ್ಬ ತಂದೆ ಅಥವಾ ಒಬ್ಬ ತಾಯಿಯ ದೃಢೀಕರಣ ಪ್ರೋತ್ಸಾಹ, ಪೋಷಣೆ, ವಾತ್ಸಲ್ಯ, ಪ್ರೀತಿಗಾಗಿ ಹಾತೊರೆಯುವಂತ ಮಕ್ಕಳಾಗಿ, ಕುಟುಂಬಗಳಲ್ಲಿ ಜನಿಸಿದವರಾಗಿದ್ದೇವೆ.

## ಆತನ ಅಪರಿಮಿತ, ಷರತ್ತು ಬದ್ಧವಲ್ಲದ ಪ್ರೀತಿಯನ್ನು ದೃಷ್ಟಿಸಲೂ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ.

**ಎಫೆಸದವರಿಗೆ 1:45**

**ಹೇಗಂದರೆ, ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು.**

**ಎಫೆಸದವರಿಗೆ 1:4–5**

**ಭೂಮಿಯ ಅಸ್ತಿವಾರಗಳನ್ನು ಹಾಕುವ ಮೊದಲೇ, ಆತನು ನಮ್ಮನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು, ಆತನ ಪ್ರೀತಿಯಿಂದ ಪವಿತ್ರರೂ ಮತ್ತು ಸಂಪೂರ್ಣರಾಗಿ ನಿರ್ಮಿತರಾಗಿದ್ದೆವು. ಬಹಳ ಹಿಂದೆಯೇ, ಯೇಸುಕ್ರಿಸ್ತನ ಮೂಲಕವಾಗಿ ಆತನ ಕುಟುಂಬಕ್ಕೆ ಸ್ವೀಕರಿಸುವದಕ್ಕೆ ಆತನು ತೀರ್ಮಾನಿಸಿದ್ದನು (ಇದನ್ನು ಯೋಜಿಸುವುದರಲ್ಲಿ ಆತನು ಯಾವ ಸಂತೋಷವನ್ನು ಪಡೆದನು)**

ದೇವರು ಈ ಲೋಕವನ್ನು ಸೃಷ್ಟಿಸುವುದಕ್ಕೆ ಮೊದಲೇ, ಆತನ ಪ್ರೀತಿಯೊಡನೆ ಆವರಿಸಲ್ಪಟ್ಟ ದೋಷವಿಲ್ಲದ್ದಂತಹ ಮತ್ತು ಪವಿತ್ರರಾಗಿ ಕ್ರಿಸ್ತನಲ್ಲಿ ಆರಿಸಲ್ಪಟ್ಟಂತಹ ಜನರನ್ನು ಆತನು ಹೊಂದಿರಬೇಕೆಂಬುದಾಗಿ ಆತನು ನಿಶ್ಚಯಪಡಿಸಿಕೊಂಡಿದ್ದನು. ಆತನ ಸ್ವಂತ ಹೆಸರಿನಿಂದ ಅವರು ಕರೆಯಲ್ಪಡಬೇಕೆಂದು ಮತ್ತು ಅವರಿಗೆ ಆತನು ಒಬ್ಬ ತಂದೆಯಾಗಿರಬೇಕೆಂದು ಆತನ ಸ್ವಂತ ಕುಟುಂಬಕ್ಕೆ ಅವರನ್ನು ಪುತ್ರರು ಮತ್ತು ಪುತ್ರಿಯರಾಗಿ ಸ್ವೀಕರಿಸಬೇಕೆಂಬುದಾಗಿ ಆತನು ತೀರ್ಮಾನಿಸಿದ್ದನು. ಇದು ಆತನ ಚಿತ್ತಾನುಸಾರವಾಗಿ ಇರುವುದಾಗಿದೆ. ಇದನ್ನು ಆತನು ಉತ್ಸುಕನಾಗಿ ಮಾಡಬೇಕು ಮತ್ತು ಮಾಡಲೂ ಅಪೇಕ್ಷಿಸಿದ್ದನು.

ದೇವರ ಹೃದಯವು ಪುತ್ರರು ಮತ್ತು ಪುತ್ರಿಯರನ್ನು ಹೊಂದಿರಬೇಕೆಂಬುದಾಗಿ ಅಪೇಕ್ಷಿಸುತ್ತಾನೆಂಬುದನ್ನು ಇದು ಪ್ರಕಟಿಸುತ್ತದೆ. ನಮ್ಮ ಪರಲೋಕದ ತಂದೆಯಾಗಿ ನಾವು ಆತನೊಂದಿಗೆ ಪುತ್ರರು ಮತ್ತು ಪುತ್ರಿಯರ ನಿಕಟ ಅನ್ಯೋನ್ಯತೆ ಮತ್ತು ಸಂಬಂಧ ಹೊಂದಬೇಕೆಂದು ಆತನು ಇಷ್ಟಪಡುತ್ತಾನೆ. ಇದು ಪ್ರಪಂಚದ ಅಸ್ತಿವಾರವನ್ನು ಹಾಕುವುದಕ್ಕೆ ಮೊದಲೇ, ಇದು ಆತನ ಹೃದಯದ ಅಪೇಕ್ಷೆಯಾಗಿತ್ತು. ನಮ್ಮ ಸೃಷ್ಟಿಗೆ ಇದು ಕಾರಣವಾಗಿದೆ. ನಾವು ಆತನ ಪುತ್ರರು ಮತ್ತು ಪುತ್ರಿಯರು ಆಗಿರಲು ಮತ್ತು ಆತನ ಅಪರಿಮಿತ, ಹತೋಟಿಯಿಲ್ಲದ ಪ್ರೀತಿಯಲ್ಲಿ ದೃಷ್ಠಿಯನ್ನಿಟ್ಟವರಾಗಬೇಕೆಂದು ದೇವರು ನಮ್ಮನ್ನು ಸೃಷ್ಟಿಸಿದ್ದಾನೆ.

ಸೃಷ್ಟಿಗೆ ಮೊದಲೇ ಪ್ರೀತಿಯಿತ್ತು ಮತ್ತು ಪ್ರೀತಿಯ ನಿಮಿತ್ತ ಸೃಷ್ಟಿ ಉಂಟಾಯಿತು.

## ಪ್ರೀತಿಸಬೇಕಾದ ನಮ್ಮ ಸಾಮರ್ಥ್ಯವನ್ನು ಪುನಃ ಸ್ಥಾಪಿಸುವುದು

ಆದರೆ ಪಾಪದಿಂದ ನಾವು ಜಜ್ಜಲ್ಪಟ್ಟವರಾಗಿದ್ದೇವೆ. ನಾವು ಪ್ರೀತಿಸುವಂತಹ ಸಾಮರ್ಥ್ಯವು ಹಾಳಾಗಿದೆ. ಇತರರನ್ನು ಪ್ರೀತಿಸುವಂತಹ ನಮ್ಮ ಸಾಮರ್ಥ್ಯವು ಭಗ್ನವಾಗಿದೆ.

ಯಾಕೆಂದರೆ, ಪ್ರೀತಿಸಲು ಮತ್ತು ಪ್ರೀತಿಸಲ್ಪಡಲು ಇರುವ ನಮ್ಮ ಸಾಮರ್ಥ್ಯವು ಮುರಿದು ಬಿದ್ದಿದೆ. ನಮ್ಮ ಭಾವನೆಗಳ ವ್ಯಕ್ತಿತ್ವದ ಸುತ್ತಲೂ ಸಾಮಾನ್ಯವಾಗಿ ಅಡ್ಡಗೋಡೆಗಳಾಗಿ ಕಂಡುಬರುವಂತಹ ಅನೇಕ ವಿಷಯಗಳನ್ನು, ಪ್ರಜ್ಞೆ ಇಲ್ಲದವರಾಗಿ ಮಾಡುತ್ತೇವೆ. ಪ್ರೀತಿಯಿಲ್ಲದೆ ನಾನು ಬದುಕುತ್ತೇನೆಂಬುದಾಗಿ ನಮಗೆ ನಾವೇ ಹೇಳಿಕೊಳ್ಳುತ್ತೇವೆ. ಜನರಿಂದ ನಮ್ಮನ್ನು ದೂರ ಮಾಡಿಕೊಳ್ಳುತ್ತೇವೆ. ನಾವು ಜನರನ್ನು

ಮುಚ್ಚುತ್ತೇವೆ. ನಾವು ಯಾರಿಗೂ ಹತ್ತಿರವಾಗಿ ಇರುವುದಿಲ್ಲ. ಭಾವನೆಗಳಲ್ಲಿ ನಮ್ಮನ್ನು ನಾವೇ ಇತರರಿಂದ ಪ್ರತ್ಯೇಕಿಸಿಕೊಳ್ಳುತ್ತೇವೆ.

ಇದು ನಮ್ಮ ಮದುವೆಗಳಿಗೂ ಕೊಂಡೊಯ್ಯಲ್ಪಟ್ಟರೆ ನಮ್ಮ ಸಂಗಾತಿಯೊಂದಿಗೆ ನಿಕಟವಾಗಿ ಭಾವನೆಗಳಲ್ಲಿ ಹೊಂದಿಕೊಳ್ಳಲು ಶಕ್ತವಾಗುವುದಿಲ್ಲ. ಭಾವನೆಗಳ ನಿಕಟತೆಯು ತುಂಬಾ ಕಠಿಣವಾಗಿ ಕಂಡುಬರುತ್ತದೆ. ಯಾಕಂದರೆ ನಾವು ಅಡ್ಡಗೊಡೆಗಳು ಅಥವಾ ರಕ್ಷಣಾ ಮಾಡಿಕೊಂಡಿರುವುದರಿಂದ ಕಠಿಣವಾಗಿದೆ. ಆಮೇಲೆ ತಂದೆ-ತಾಯಂದಿರಾಗಿ (ತಂದೆ) ನಮ್ಮ ಮಕ್ಕಳಿಗೆ ಭೌತಿಕ ವಿಷಯಗಳನ್ನು ಬಹಳ ಉತ್ತಮವಾಗಿ ಕೊಡುತ್ತೇವೆ. ಆದರೆ ಒಬ್ಬ ಪ್ರೀತಿಯ ತಂದೆತಾಯಿ (ತಂದೆಯಾಗಿ) ವಾತ್ಸಲ್ಯ ಮತ್ತು ಎದೆ ತುಂಬಿದ ಅನಿಸಿಕೆಯನ್ನು ವ್ಯಕ್ತಪಡಿಸಲು ಶಕ್ತರಾಗಿರುವುದಿಲ್ಲ. ನಮ್ಮ ಮಕ್ಕಳು ಯಥಾರ್ಥ ಅಪರಿಮಿತ ಪ್ರೀತಿ ಮತ್ತು ವಾತ್ಸಲ್ಯವನ್ನು ತಪ್ಪಿಸಿಕೊಂಡಿದ್ದಾರೆ.

ನಮ್ಮ ಮುರಿದ ಪ್ರೀತಿಯ ಸಾಮರ್ಥ್ಯ ಮತ್ತು ಪ್ರೀತಿಸಬೇಕೆಂಬುದು ಜೀವಿತದಲ್ಲಿ ಎಲ್ಲಾ ಕೆಟ್ಟ ಸಂಗತಿಗಳೊಡನೆ ''ಭಾವನೆಗಳ ಸಂಪರ್ಕ'' ಅಥವಾ ''ಬಂಧವಿರುವುದು'' ಅಪರಿಚಿತ ಸಂಗತಿಯಾಗಿದೆ. ನಾವು ಭಾವನಾತ್ಮಕವಾಗಿ ನಮ್ಮ ಕೆಲಸ, ಜನ, ಹೆಸರು, ಪ್ರಖ್ಯಾತಿ, ಗೌರವ, ವೃತ್ತಿ, ಚಪ್ಪಾಳೆ, ಗಮನ, ಹಣ, ವಸ್ತುಗಳು ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

## ಒಬ್ಬ ಪ್ರೀತಿಸುವ ತಂದೆಯ ಮುಂದೆ ತಪ್ಪು ಭಾವಭಂಗಿ

ಆಮೇಲೆ ನಮ್ಮ ವಿಚ್ಛಿನ್ನತೆಯಿದ ದೇವರಿಗೆ ಸಂಬಂಧಿಸಲು ಪ್ರಯತ್ನಿಸುತ್ತೇವೆ. ಆದಾಗ್ಯೂ ತಪ್ಪಾದ ವಿಚಾರಗಳು ಮತ್ತು ತಪ್ಪು-ಕಲ್ಪನೆಗಳನ್ನು ನಮ್ಮೊಳಗೆ ತೆಗೆದುಕೊಳ್ಳುತ್ತೇವೆ ಮತ್ತು ಇಂತಹವು ದೇವರೊಂದಿಗೆ ನಮ್ಮ ಸಂಬಂಧ ಹಾಳು ಮಾಡುತ್ತವೆ. ಇಂತಹ ತಪ್ಪು ಮಾದರಿಗಳೊಂದಿಗೆ ನಾವು ದೇವರೊಂದಿಗೆ ಸಂಬಂಧಿಸಿಕೊಳ್ಳಲೂ ಪ್ರಯತ್ನಿಸುತ್ತೇವೆ. ಇಂತಹ ತಪ್ಪು-ಕಲ್ಪನೆಗಳು ಮತ್ತು ಕೆಟ್ಟ ಆಲೋಚನೆಗಳ ಮಾದರಿಗಳು ದೇವರು ನಿಜವಾಗಿ ಏನಾಗಿದ್ದಾನೆಂಬುದರ ಪ್ರಕಟನೆಯನ್ನು ವಿಕೃತಗೊಳಿಸುತ್ತದೆ. ದೇವರ ನಮ್ಮ ಚಿತ್ರಣ (ಗ್ರಹಿಕೆ, ಪ್ರಜ್ಞೆ) ಹಾಳು ಮಾಡುತ್ತದೆ. ದೋಷಿತಗೊಳಿಸುತ್ತದೆ ಮತ್ತು ತಪ್ಪಾಗಿಸುತ್ತದೆ. ನಮ್ಮ ಪರಲೋಕದ ತಂದೆಯ ಅಪರಿಮಿತ ಮತ್ತು ಅಗಾಧವಾದ ಪ್ರೀತಿಯನ್ನು ಅಂಗೀಕರಿಸಲು, ಪಡೆದುಕೊಳ್ಳಲೂ ಮತ್ತು ಹೊಂದಿಕೊಂಡಿರಲೂ ಸಾಧ್ಯವಾಗುವುದಿಲ್ಲ. ಇದು ದೇವರೊಂದಿಗೆ ನಮ್ಮ ಸಂಬಂದಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ. ದೇವರ ಅಪರಿಮಿತ

ಮತ್ತು ಷರತ್ತು ಇಲ್ಲದ ಪ್ರೀತಿಯನ್ನು ಅರ್ಥ ಮಾಡಿಕೊಳ್ಳುವುದರಿಂದ ನಮ್ಮನ್ನು ದೂರವಿರಿಸುವ ಕೆಲವು ತಪ್ಪಾದ ಮನೋಭಾವಗಳನ್ನು (ತಪ್ಪಾದ ಕಲ್ಪನೆಗಳನು) ನೋಡೋಣ.

**1. ತಪ್ಪಿ ಹೋಗುವುದು (ಹಾಳು ಮಾಡುವುದು)**

ಇಂತಹ ಮನಸ್ಥಿತಿ ಅಥವಾ ಯೋಚನೆಯ ಮಾದರಿಯಲ್ಲಿ ಜನರು ಯಾವಾಗಲೂ ತಮ್ಮನ್ನೇ ಅನರ್ಹರು, ಅಯೋಗ್ಯರೂ, ಯಾರಿಗೂ ಸಾಕಾಗುವಷ್ಟು ಒಳ್ಳೆಯವನಲ್ಲ, ಮತ್ತು ಖಚಿತವಾಗಿ ದೇವರಿಂದ ಪ್ರೀತಿಸಲು ಯೋಗ್ಯನಲ್ಲ ಎಂಬುದಾಗಿ ಅಂದುಕೊಳ್ಳುತ್ತಾರೆ. ಆದ್ದರಿಂದ ಅವರು ದೇವರೊಂಗಿಹೆ ಸಂಬಂಧಿಸಿಕೊಳ್ಳುವಾಗ, ದೇವರು ಕ್ಷಮಿಸುವ ಮತ್ತು ಪ್ರೀತಿಸುವ ತಂದೆಯಾಗಿದ್ದಾನೆಂಬುದನ್ನು ಗ್ರಹಿಸುವಂತದ್ದು ಅವರಿಗೆ ಕಷ್ಟವಾಗುತ್ತದೆ.

"... ನಾನು ನಿನ್ನ ಮಗನೆನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ. ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು," (ಲೂಕ 15:19). ತಪ್ಪಿ ಹೋದ ಮಗನು ತಿರುಗಿ ಅವನ ಬಳಿಗೆ ಹೋಗಿ ಈ ರೀತಿಯಾಗಿ ಹೇಳಿದ್ದಂತೆ ಅವರು ಯಾವಾಗಲೂ ಆಲೋಚಿಸುತ್ತಾರೆ.

ತಪ್ಪು ಮಾಡಿದಾಗ ಪಶ್ಚಾತ್ತಾಪ ಪಡುವುದು ಒಳ್ಳೆಯದು ಮತ್ತು ಪ್ರಾಮುಖ್ಯವಾದದ್ದು, ನಾವು ಯಾವಾಗಲೂ ಇಂತಹ ಮನಸ್ಥಿತಿಯಲ್ಲಿರಬೇಕೆಂಬುದಾಗಿ ದೇವರು ಯಾವಾಗಲೂ ಬಯಸುವಂತಹ ಸ್ಥಿತಿಯಲ್ಲ. ಮಗನು ತಿರುಗಿ ಬಂದಾಗ ತಂದೆಯು, ಅವನಿಗೆ ಶ್ರೇಷ್ಟವಾದ ನಿಲುವಂಗಿಯನು, ಕೈಗೆ ಉಂಗುರವನ್ನು ಮತ್ತು ಹಬ್ಬವನ್ನು ಮಾಡುವುದರೊಡನೆ ಉಲ್ಲಾಸಪಟ್ಟನು ಮತ್ತು ಅವನ ಮಗನು, ಅವನು ಮಗನೇ ಆಗಿರಲು ಬಯಸಿದನು!

ನಮ್ಮ ಪಾಪಗಳು ಏನನ್ನುಂಟು ಮಾಡಿವೆ ಎಂಬುದನ್ನು ಮತ್ತು ನಾವು ಪಡೆದುಕೊಂಡಂತಹ ಕ್ಷಮಾಪಣೆಯು ಹೇಗೆ ಮಹತ್ವವುಳ್ಳದ್ದೆಂದು ಅರಿತುಕೊಂಡಾಗ, ಪ್ರತಿಯಾಗಿ ಅನಿಯಂತ್ರಿತವಾಗಿ ಆತನನ್ನು ಪ್ರೀತಿಸುತ್ತೇವೆ. ಕರ್ತನಾದ ಯೇಸುವಿನ ಬಳಿಗೆ ದುರಾಚಾರಿಯಾದ ಸ್ತ್ರೀಯು ಕಣ್ಣೀರಿನಿಂದ ಬಂದಾಗ: "ಹೀಗಿರಲು ನಾನು ಹೇಳುವ ಮಾತೇನೆಂದರೆ – ಇವಳ ಪಾಪಗಳು ಬಹಳವಾಗಿದ್ದರೂ ಅವು ಕ್ಷಮಿಸಲ್ಪಟ್ಟಿವೆ. ಇದಕ್ಕೆ ಪ್ರಮಾಣವೇನೆಂದರೆ ಇವಳು ತೋರಿಸಿದ ಪ್ರೀತಿ ಬಹಳ. ಆದರೆ ಯಾವನಿಗೆ ಸ್ವಲ್ಪ ಮಾತ್ರ ಕ್ಷಮಿಸಲ್ಪಟ್ಟಿವೆಯೋ ಅವನು ತೋರಿಸುವ ಪ್ರೀತಿಯು ಸ್ವಲ್ಪವೇ" (ಲೂಕ

7:47) ಎಂಬುದಾಗಿ ಹೇಳಿದ್ದಾನೆ. ನಾವು ಮಾಡಿದಂತಹ ನಮ್ಮ ಪಾಪಗಳ ಸಂಖ್ಯೆ ಅಥವಾ ದೊಡ್ಡ ಪ್ರಮಾಣದ ಪಾಪಗಳು ಎಂಬುದು ಅಗತ್ಯವಾದುದಲ್ಲ. ಆದರೆ ನಮ್ಮ ಪಾಪವು ಯಾವ ಪರಿಣಾಮ ಉಂಟು ಮಾಡಿದೆ ಮತ್ತು ಆತನನ್ನು ಅನಿಯಂತ್ರಿತವಾಗಿ, ಧಾರಾಳವಾಗಿ ಪ್ರೀತಿಸುವ ಪ್ರತಿಕ್ರಿಯೆಯೊಂದಿಗೆ ನಾವು ಎಷ್ಟು ಕ್ಷಮಿಸಲ್ಪಟ್ಟಿದ್ದೇವೆ ಎಂಬುದನ್ನು ಆಹ್ವಾನಿಸುತ್ತದೆ. ಅಧಿಕವಾಗಿ ನಾವು ಕ್ಷಮಿಸಲ್ಪಟ್ಟಿರುವುದರಿಂದ ನಮ್ಮ ಪರಲೋಕದ ತಂದೆಯ ಕಡೆಗೆ ನಮ್ಮ ಪ್ರೀತಿಯನ್ನು ಸುರಿಸಬೇಕು. ಇದನ್ನೇ ಆತನು ಅಪೇಕ್ಷಿಸುತ್ತಾನೆ ಮತ್ತು ಹೊಂದಲೂ ಅರ್ಹನಾಗಿರುತ್ತಾನೆ.

## 2. ಆಳು (ಗುಲಾಮ)

ಇಂತಹ ಯೋಚನಾ ಮಾದರಿಯಲ್ಲಿ, ಜನರು ಯಾವಾಗಲೂ ಒಬ್ಬ ಆಳಿನ ಮನಸ್ಥಿತಿಯನ್ನು ಹೊಂದಿದ್ದಾರೆ. ಅವರು ಎಲ್ಲವನ್ನು ಸಂಪಾದಿಸಿಕೊಳ್ಳಬೇಕು ಎಂಬುದಾಗಿ ಅಂದುಕೊಳ್ಳುತ್ತಾರೆ. ದೊಡ್ಡದಾದ ಸಂಗತಿಗಳಿಗೆ ಅನರ್ಹರು ಅಂದುಕೊಳ್ಳುತ್ತಾರೆ, ಈ ವಿಷಯಗಳಿಗಾಗಿ ಅವರು ಅಯೋಗ್ಯರು ಎಂಬುದಾಗಿ ಅಂದುಕೊಳ್ಳುತ್ತಾರೆ. ಆದ್ದರಿಂದ ಅವರು ದೇವರಿಗೆ ಸಂಬಂಧಿಸಿಕೊಳ್ಳುವಾಗ, ನಮ್ಮನ್ನು ಪುತ್ರರು ಮತ್ತು ಪುತ್ರಿಯರಾಗಿ ದತ್ತು ಸ್ವೀಕರಿಸಿದ, ಪಿತ್ರಾರ್ಜಿತತೆಯನ್ನು ಆನಂದಿಸಲೂ ಮತ್ತು ಆತನ ವಾರಸುದಾರರು ಅಥವಾ ಕ್ರಿಸ್ತನೊಡನೆ – ಜಂಟಿ – ವಾರಸುದಾರರಾಗಿ ನಮ್ಮನ್ನು ಅರ್ಹಗೊಳಿಸಿದಂತದ್ದನ್ನು ಗ್ರಹಿಸಿಕೊಳ್ಳಲೂ ತುಂಬಾ ಕಷ್ಟಕರವಾಗುತ್ತದೆ.

ನಾವು ಆಳುಗಳಂತೆ ವರ್ತಿಸಬೇಕೆಂಬುದಾಗಿ ದೇವರು ಅಪೇಕ್ಷಿಸುವುದಿಲ್ಲ ಎಂಬುದಾಗಿ ನಿಖರವಾಗಿ ಸತ್ಯವೇದ ಬೋಧಿಸುತ್ತದೆ.

**ರೋಮಾಪುರದವರಿಗೆ 8:15**
**ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ.**

**ರೋಮಾಪುರದವರಿಗೆ 8:15 (ಕಾಂಟೆಂಪರರಿ ಇಂಗ್ಲೀಷ್ ವರ್ಶನ್)**
**ದೇವರು ಆತ್ಮನು, ಆತನಿಗೆ ಭಯಪಡುವಂತಹ ಆಳುಗಳಾಗಿ ನಮ್ಮನ್ನು ಮಾಡುವುದಿಲ್ಲ, ಬದಲಿಗೆ ನಾವು ಆತನ ಮಕ್ಕಳಾಗಿದ್ದೇವೆ ಮತ್ತು ನಮ್ಮ ತಂದೆಯೇ ಎಂಬುದಾಗಿ ಕರೆಯುತ್ತೇವೆ.**

**ರೋಮಾಪುರದವರಿಗೆ 8:15 (ಗುಡ್ ನ್ಯೂಸ್ ಬೈಬಲ್)**
**ನಿಮಗೆ ಕೊಡಲ್ಪಟ್ಟಂತಹ ದೇವರ ಆತ್ಮನು ನಿಮ್ಮನ್ನು ಗುಲಾಮರನ್ನಾಗಿ ಮಾಡುವುದಿಲ್ಲ ಮತ್ತು ಭಯ ಪಡಿಸುವುದಿಲ್ಲ. ಬದಲಿಗೆ ಆತ್ಮನು ದೇವರ ಮಕ್ಕಳಾಗಿ ಮಾಡುತ್ತಾನೆ. ನಾವು ಆತ್ಮನ ಬಲದಿಂದ ದೇವರನ್ನು "ತಂದೆ! ನನ್ನ ತಂದೆ! ಎಂಬುದಾಗಿ ಕರೆಯಬಹುದು"!**

**ಗಲಾತ್ಯದವರಿಗೆ 4:4-7**
**ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮ ಶಾಸ್ತ್ರಾಧೀನನಾಗಿಯೂ ಬಂದನು. ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮವನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. ಹೀಗಿರುವಲ್ಲಿ ಇನ್ನು ನೀನು ದಾಸನಲ್ಲಿ ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ!**

### 3. ಅನಾಥರು

ಇಂತಹ ಮನೋಸ್ಥಿತಿಯುಳ್ಳವರು, ತಂದೆಯಿಲ್ಲದವರು, ಕೈ ಬಿಡಲ್ಪಟ್ಟವರು, ಎಂದಿಗೂ ಪ್ರೀತಿಸದವರೂ ಮತ್ತು ಎಂದಿಗೂ ಪ್ರೀತಿಸಲ್ಪಡುವುದಿಲ್ಲ, ಅವರು ಅದಕ್ಕೆ ಸೇರಿದವರು ಎಂದು ಎಂದಿಗೂ ಭಾವಿಸದವರು, ಅವರಿಗಾಗಿ ಯಾರೂ ಸಹ ಕಾಳಜಿ ವಹಿಸುವುದಿಲ್ಲ ಎಂಬುದಾಗಿ ಅಂದುಕೊಳ್ಳುತ್ತಾರೆ. ಆದ್ದರಿಂದ ಅವರು ದೇವರೊಂದಿಗೆ ಸಂಬಂಧಿಸಿಕೊಳ್ಳುವಾಗ, ದೇವರು ಒಬ್ಬ ಪ್ರೀತಿಸುವ, ಕಾಳಜಿ ವಹಿಸುವ ತಂದೆಯಾಗಿದ್ದಾನೆಂಬುದಾಗಿ ಗ್ರಹಿಸಲೂ ಅವರಿಗೆ ಕಷ್ಟಕರವಾಗುತ್ತದೆ.

ರೋಮಾಪುರದವರಿಗೆ 8:25 ಮತ್ತು ಗಲಾತ್ಯದವರಿಗೆ 4:4-7ರಲ್ಲಿರುವ ವಾಕ್ಯಗಳು ಹೇಳುವುದೇನೆಂದರೆ, ನಾವು ಪುತ್ರರು ಮತ್ತು ಪುತ್ರಿಯರಾಗಿ ಆತನೊಂದಿಗೆ ಸಂಬಂಧಿಸಿಕೊಳ್ಳಬೇಕೆ ಮತ್ತು ಆತನನ್ನು "ತಂದೆ" ಎಂಬುದಾಗಿ ಕರೆಯಬೇಕು ಎಂಬುದಾಗಿ ದೇವರು ಅಪೇಕ್ಷಿಸುತ್ತಾನೆಂಬುದಾಗಿ ಪುನರುಚ್ಚರಿಸುತ್ತೇವೆ. ನಾವು "ಆತ್ಮಿಕ ಅನಾಥರಾಗಿ" ಜೀವಿಸಬೇಕೆಂಬುದಾಗಿ ದೇವರು ಬಯಸುವುದಿಲ್ಲ. ಆದರೆ ಆತನ ಪುತ್ರರು ಮತ್ತು ಪುತ್ರಿಯರು ಆಗಿ ಜೀವಿಸಬೇಕೆಂಬುದಾಗಿ ಬಯಸುತ್ತಾನೆ.

### 4. ಬಹಿಷ್ಕಾರ

ಈ ಒಂದು ಮನಸ್ಥಿತಿಯಲ್ಲಿ ಜನರು ಒಂದು ಆಳವಾದ ತಿರಸ್ಕಾರದ ಪ್ರಜ್ಞೆಯಲ್ಲಿರುತ್ತಾರೆ. ಯಾವಾಗಲೂ ಅತೀ ದೂರವಾಗಿರಲು ಬಯಸುತ್ತಾರೆ, ಪ್ರತ್ಯೇಕಿಸಿಕೊಂಡಿರುತ್ತಾರೆ, ಹೊರಗುಳಿಯುತ್ತಾರೆ. ಬಹಿಷ್ಕರಿಸಿಕೊಂಡಿರುತ್ತಾರೆ. ಇಂತಹವರು ದೇವರೊಂದಿಗೆ ಸಂಬಂಧಿಸಿಕೊಳ್ಳುವಾಗ, ದೇವರು ನಮ್ಮನ್ನು ಆತನ ಪ್ರಸನ್ನತೆ ಆಹ್ವಾನಿಸುವವನಾಗಿದ್ದಾನೆ. ಆತನ ಬಳಿಗೆ ಧೈರ್ಯವಾಗಿ ಮತ್ತು ಉಚಿತವಾಗಿ ಬರಲೂ ಆತನು ಪ್ರೋತ್ಸಾಹಿಸುತ್ತಾನೆಂಬುದನ್ನು ಗ್ರಹಿಸಲೂ ಅವರಿಗೆ ತುಂಬಾ ಕಷ್ಟಕರವಾಗಿರುತ್ತದೆ.

**ಎಫೆಸದವರಿಗೆ 2:12-13,18**

**ನೀವು ಪೂರ್ವಕಾಲದಲ್ಲಿ ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ (ಅಬ್ರಹಾಮನಿಗೆ ಉಂಟಾದ) ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ, ದೇವರನ್ನರಿಯದವರೂ ಆಗಿದ್ದೀರೆಂದು ಜ್ಞಾಪಕ ಮಾಡಿಕೊಳ್ಳಿರಿ. ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ಮೂಲಕ ಸಮೀಪಸ್ಥರಾದಿರಿ. ಆತನ ಮೂಲಕ ನಾವೂ, ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು.**

ಯೇಸುಕ್ರಿಸ್ತನ ರಕ್ತದ ಮೂಲಕವಾಗಿ ದೇವರ ಸಮೀಪಸ್ಥರಾಗಿದ್ದೇವೆಂದು ಸತ್ಯವೇದವು ನಿಖರವಾಗಿ ಹೇಳುತ್ತದೆ. ಯೇಸುವಿನ ಮೂಲಕವಾಗಿ ಆತನ ಪ್ರಸನ್ನತೆಗೆ ಉಚಿತವಾಗಿ ಪ್ರವೇಸಿಸಬಹುದು. ನಾವು ಬಹಿಷ್ಕಾರ ಹೊಂದಿದವರಲ್ಲ. ಆತನ ಪ್ರಸನ್ನತೆಗೆ ನಾವು ಆಹ್ವಾನಿಸಲ್ಪಟ್ಟಿದ್ದೇವೆ. ದೇವರ ಕೃಪಾ ಸಿಂಹಾಸನದ ಬಳಿಗೆ ಧೈರ್ಯವಾಗಿ ಬರಬಹುದು (ಇಬ್ರಿಯರಿಗೆ 4:16)

### 5. ಗರ್ವವುಳ್ಳ ಹಿರಿಯ ಸಹೋದರ/ಸಹೋದರಿ

ಇಂತಹ ಆಲೋಚನೆ ಮಾದರಿ ಹೊಂದಿರುವವರು ಗರ್ವದ ಪ್ರಜ್ಞೆ ಹೊಂದಿರುತ್ತಾರೆ. ಅವರು "ನಾನು ಪ್ರೀತಿಸಬೇಕೆಂಬುದಾಗಿ ನನಗೆ ಅನ್ನಿಸಲಿಲ್ಲ, ನನಗೆ ಪ್ರೀತಿ ಬೇಕಾಗಿಲ್ಲ" ಎಂಬುದಾಗಿ ಆಲೋಚಿಸುತ್ತಾರೆ. ಅವರು ಮಾಡುವಂತಹ ಕೆಲಸದಲ್ಲಿ ಗರ್ವಪಡುತ್ತಾರೆ. "ನಾನು ನಂಬಿಗಸ್ತನು. ನನ್ನ ಕೆಲಸ ಮಾಡುತ್ತೇನೆ" – ಮುಂತಾದವು ಪ್ರತಿಯೊಂದು ಕೆಲಸ ಮತ್ತು ಕಾರ್ಯದ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತದೆ. ಆದ್ದರಿಂದ ಅವರ ದೇವರೊಂದಿಗೆ ಸಂಬಂಧಿಸಿಕೊಳ್ಳುವಾಗ, ಆತನ ಪ್ರೀತಿಯಲ್ಲಿ ವಿಶ್ರಮಿಸಲೂ, ಆತನಲ್ಲಿ ಸಂತೋಷಿಸಲೂ ಮತ್ತು ಆತನು ಸಹ ನಮ್ಮಲ್ಲಿ ಆನಂದಿಸುತ್ತಾನೆಂಬುದನ್ನು ತಿಳಿಯಲೂ ನಮ್ಮನ್ನು ಆತನು ಕರೆದಿದ್ದಾನೆಂಬುದನ್ನು ಅವರು ಗ್ರಹಿಸಲೂ ತುಂಬಾ ಕಷ್ಟಕರವಾಗುತ್ತದೆ.

ತಪ್ಪಿ ಹೋದ ಮಗನ ದೃಷ್ಟಾಂತದಲ್ಲಿ ಗರ್ವದ ಹಿರಿಯ ಸಹೋದರರು, ತನ್ನ ತಂದೆಯ ಪೋಲಿ ಹೋದ ಮಗನ ಹಿಂತಿರುಗುವಿಕೆಯನ್ನು ಆಚರಿಸುತ್ತಿದ್ದಾನೆಂಬುದನ್ನು ಕೇಳಿದಾಗ ಅವನು ಸಹಿಸಿಕೊಳ್ಳಲೂ ಆಗಲಿಲ್ಲ. ಒಬ್ಬ ಒಳ್ಳೆಯ ಮಗನಾಗಿ ಎಲ್ಲಾ ಕರ್ತವ್ಯಗಳನ್ನು ನೆರವೇರಿಸಿದ ಅವನ ನಿಷ್ಪಾಪ ದಾಖಲೆಗಳ ದೂರು ಹೇಳಿದ್ದನು. ಆದಾಗ್ಯೂ ತಂದೆಗಿರುವುದೆಲ್ಲವು ಅವನದ್ದಾಗಿತ್ತು. ಮೇಕೆ, ಹಬ್ಬಗಳು ಮತ್ತು ಉತ್ತಮ ಆಹಾರ ಯಾವಾಗಲೂ ಅಲ್ಲಿತ್ತು, ಆದಾಗ್ಯೂ ಹಿರಿಯ ಮಗನು ಇದನ್ನು ಆನಂದಿಸುವ ಪ್ರಯತ್ನವನ್ನು ಮಾಡಲಿಲ್ಲ. ಒಬ್ಬ ಮಗನಾಗಿ ಮನೆಯಲ್ಲಿರುವುದರ ಅವಕಾಶಗಳು,

ಕುಟುಂಬ, ಸಂಬಂಧವನ್ನು ಆನಂದಿಸುವ ಯಾವುದೇ ಪ್ರಜ್ಞೆಯಿಲ್ಲದೆ ಸಂಪೂರ್ಣವಾಗಿ ಕೆಲಸದ ಮೇಲೆ ಅವನ, ಮತ್ತು ಅವನ ತಂದೆ ಮತ್ತು ಕುಟುಂಬದ ಸಂಬಂಧವು ಕೇಂದ್ರೀಕರಿಸಲ್ಪಟ್ಟಿತ್ತು.

**ಲೂಕ 15:24-30**
**ಆದರೆ ಅವನು ನನ್ನ ತಂದೆಗೆ ನೋಡು ಇಷ್ಟು ವರುಷ ನಿನಗೆ ಸೇವೆ ಮಾಡಿದ್ದೇನೆ ಮತ್ತು ನಾನು ನಿನ್ನ ಒಂದಪ್ಪಣೆಯನ್ನಾದರೂ ಎಂದೂ ಮೀರಲಿಲ್ಲ. ಆದರೂ ನಾನು ನಿನ್ನ ಸ್ನೇಹಿತರ ಸಂಗಡ ಉಲ್ಲಾಸ ಪಡುವದಕ್ಕಾಗಿ ನೀನು ಎಂದೂ ನನಗೆ ಒಂದು ಆಡನ್ನಾದರೂ ಕೊಡಲಿಲ್ಲ. ಆದರೆ ಸೂಳೆಯರನ್ನು ಕಟ್ಟಿಕೊಂಡು ನಿನ್ನ ಬದುಕನ್ನು ನುಂಗಿಬಿಟ್ಟ ಈ ನಿನ್ನ ಮಗನು ಬಂದಾಗ ಕರುವನ್ನು ಅವನಿಗೆ ಕೊಯ್ಸಿದಿ ಎಂದು ಉತ್ತರ ಕೊಟ್ಟನು.**

ಮರಿಯಳು ಮತ್ತು ಮಾರ್ಥಳನ್ನು ಯೇಸುವು ಸಂಧಿಸುವ ಘಟನೆಯು (ಲೂಕ 10:38-42) ಅದೇ ರೀತಿಯ ಅರ್ಥವನ್ನು ತರುತ್ತದೆ. ಮಾರ್ಥಳು ಗುರುವಿಗೆ ಸೇವೆ ಮಾಡುವುದರಲ್ಲಿ ನಿರತಳಾಗಿದ್ದಳು. ಗುರುವಿನ ಬೋಧನೆಗಳನ್ನು ಕೇಳಿಸಿಕೊಳ್ಳುವುದು ಮತ್ತು ಆತನ ಪ್ರಸನ್ನತೆಯನ್ನು ಆನಂದಿಸುವುದನ್ನು ತಿರಸ್ಕರಿಸಿದ್ದಳು. ಗುರುವಿನ ಮಾತುಗಳನ್ನು ಮತ್ತು ಅವರ ಮನೆಯಲ್ಲಿ ಆತನ ಪ್ರಸನ್ನತೆಯನ್ನು ಪಡೆದುಕೊಳ್ಳುತ್ತಿದ್ದಂತಹ ಮರಿಯಳ ಕುರಿತು ಮಾರ್ಥಳು ದೂರು ಹೇಳಿದಳು. ಇಂತಹ ತಪ್ಪಾದ ಮನೋಭಾವನೆಯು ಆಗಾಗ್ಗೆ ತೀರ್ಪು ಮಾಡುವವರಾಗಿಯೂ, ಫರಿಸಾಯರಂತೆ ಆಗಾಗ್ಗೆ ಆತನ ಪ್ರಸನ್ನತೆಯನ್ನು ಆನಂದಿಸುವ ಇತರರಲ್ಲಿ ತಪ್ಪು ಹುಡುಕುವವರಾಗಿರುತ್ತಾರೆ.

**ಮಾರ್ಕ 14:3-5**
**ಆತನು ಬೇಥಾನ್ಯದಲ್ಲಿ ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಇದ್ದು ಊಟಕ್ಕೆ ಕೂತಿದ್ದಾಗ ಒಬ್ಬ ಸ್ತ್ರೀಯು ಬಹು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲದ ಭರಣಿಯನ್ನು ತೆಗೆದುಕೊಂಡು ಬಂದು ಆ ಭರಣಿಯನ್ನು ಒಡೆದು ತೈಲವನ್ನು ಆತನ ತಲೆಯ ಮೇಲೆ ಹೊಯಿದಳು. ಆದರೆ ಕೆಲವರು ತಮ್ಮೊಳಗೆ ಕೋಪಗೊಂಡು ಈ ತೈಲವನ್ನು ನಷ್ಟ ಮಾಡಿದ್ದೇಕೆ? ಇದನ್ನು ಮುನ್ನೂರು ಹಣಕ್ಕಿಂತ ಹೆಚ್ಚು ಬೆಲೆಗೆ ಮಾರಿ ಬಡವರಿಗೆ ಕೊಡಬಹುದಾಗಿತ್ತಲ್ಲಾ ಎಂದು ಹೇಳಿ ಆಕೆಗೆ ಛೀ ಹಾಕಿದರು.**

### 6. ಗಾಯಗೊಂಡವರು

ಇಂತಹ ಜನರು ಬಹುಶಃ ಒಂದು ಬಾರಿಗಿಂತ ಅಧಿಕವಾಗಿ ನೋವನ್ನು ಅನುಭವಿಸಿದವರು ಮತ್ತು ಆದ್ದರಿಂದ ಅವರೊಳಗೆ ಗಾಯಗಳನ್ನು ಮತ್ತು ನೋವನ್ನು ಹೊಂದಿಕೊಂಡಿರುತ್ತಾರೆ. ಅವರು ಯಾರನ್ನು ಪ್ರೀತಿಸುವುದಿಲ್ಲ ಮತ್ತು ಯಾರು ಸಹ ಅವರನ್ನು ಪ್ರೀತಿಸಲೂ ಅವಕಾಶ ನೀಡುವುದಿಲ್ಲ. ಭಯದ ನಿಮಿತ್ತವಾಗಿ ಮತ್ತೊಮ್ಮೆ

ದುಃಖ ತರಬಹುದೆಂಬುದಾಗಿ ಭೀತಿಗೊಳಗಾಗಿರುತ್ತಾರೆ. ಕೆಲವು ಸಮಯಗಳಲ್ಲಿ, ದ್ವೇಷ, ಜನರ ಕಡೆಗೆ ಕೋಪ, ಅವರನ್ನು ನೋಯಿಸಿದವರನ್ನು ಹೋಲುವವರ ಕಡೆಗೆ ಕೋಪ, ಕ್ಷಮಿಸದಿರುವಿಕೆಯನ್ನು ಹೊಂದಿರುವವರಾಗಿರುತ್ತಾರೆ. ಆದ್ದರಿಂದ ಅವರು ದೇವರೊಂದಿಗೆ ಸಂಬಂಧಿಸಿಕೊಳ್ಳುವಾಗ, ದೇವರು ಯಾರಿಗೂ ನೋವನ್ನು ಅಥವಾ ಗಾಯವನ್ನು ಮಾಡುವವನಲ್ಲ ಮತ್ತು ಹಗೆತನವಿಲ್ಲದೆ, ಜನರನ್ನು ಯಥಾರ್ಥವಾಗಿ ಪ್ರೀತಿಸುವವನಾಗಿದ್ದಾನೆಂಬುದನ್ನು ಅವರ ಗ್ರಹಿಸಲೂ ಕಷ್ಟಕರವಾಗುತ್ತದೆ. ನಮ್ಮ ಪರಲೋಕದ ತಂದೆಯ ಪ್ರೀತಿಯಲ್ಲಿ ಭರವಸೆಯಿಡಲೂ ಅವರಿಗೆ ಕಷ್ಟವಾಗುತ್ತದೆ.

ಆದರೆ ಅವರ ನಿರಂತರ ಸೋಲುಗಳ ಮಧ್ಯದಲ್ಲಿ ಆತನ ಜನರಿಗಾಗಿ ಆತನ ವಿಫಲವಾಗದ ಪ್ರೀತಿಯನ್ನು ದೇವರು ತೋರಿಸುತ್ತಾನೆ.

**ಯೆರೆಮೀಯ 31:3**
**ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ. ಆದ ಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ.**

ಆತನ ಪ್ರೀತಿಯು ಎಲ್ಲವನ್ನು ಮೀರಿಸುತ್ತದೆ ಮತ್ತು ಆತನ ಪ್ರೀತಿಯಿಂದ ಯಾವುದು ನಮ್ಮ ಅಗಲಿಸಲಾರದು ಎಂಬುದನ್ನು ನಾವು ಅರಿಯಬೇಕೆಂದು ದೇವರು ಬಯಸುತ್ತಾನೆ.

## 7. ಸ್ವಯಂ-ತಪ್ಪು ಹುಡುಕುವವರು - ಆತ್ಮ ವಿಮರ್ಶಕರು

ಸ್ವ-ವಿಮರ್ಶಕರು ಸ್ವತಃ ತಮ್ಮಲ್ಲಿ ಮತ್ತು ಇತರರಲ್ಲಿ ತುಂಬಾ ವಿಮರ್ಶೆ ಮಾಡುವವರಾಗಿರುತ್ತಾರೆ. ''ನಾನು ಒಳ್ಳೆಯವನಲ್ಲ, ನನಗಾಗಿ ಎಂದಿಗೂ ಒಳ್ಳೆಯವನಲ್ಲ, ಇತರರಿಗೂ, ದೇವರಿಗಾಗಿಯೂ ಒಳ್ಳೆಯವನಲ್ಲ'' ಎಂಬುದಾಗಿ ಅವರು ಯೋಚಿಸುತ್ತಾರೆ. ಅವರು ತಮ್ಮನ್ನು ತಾವೇ ಸಂಪೂರ್ಣ ಅಂಗೀಕಾರ ಮತ್ತು ಗುರ್ತಿಸುವಿಕೆ ಮುಂತಾದವುಗಳ ಕಡೆಗೆ ತಳ್ಳಿಕೊಳ್ಳುತ್ತಾರೆ ಮತ್ತು ನಿರ್ವಹಿಸುತ್ತಾರೆ. ಕೆಲವು ಸಮಯಗಳಲ್ಲಿ ಇದು ಭಯದಿಂದ ಪ್ರೇರಿತವಾಗಿರುತ್ತದೆ ಮತ್ತು ಇದು ಅತಿಯಾಗಿ ಹತೋಟಿಯಲ್ಲಿಡುವುದು, ಮುಂದೆ ಹೋಗುವ ಕ್ರಮದಲ್ಲಿ ಇತರರನ್ನು ಯುಕ್ತಿಯಿಂದ ಬಳಸಿಕೊಳ್ಳುತ್ತಾರೆ. ತಮ್ಮ ಬಗ್ಗೆ ಮತ್ತು ಇತರರ ಬಗ್ಗೆ ಕಹಿಯಾದ ಬೇರುಳ್ಳ ನ್ಯಾಯತೀರ್ಪುಗಳನ್ನು (ತಪ್ಪು ಹುಡುಕುವವರಾಗಿರುವುದು) ಪರಿಣಾಮವಾಗಿ ಹೊಂದಿರುತ್ತಾರೆ. ಆದ್ದರಿಂದ ದೇವರೊಂದಿಗೆ ಅವರು ಸಂಬಂಧಿಸಿಕೊಳ್ಳುವಾಗ, ಆತನ ಮಹತ್ವವುಳ್ಳ ಪ್ರೀತಿಯಿಂದ, ಸಮೃದ್ಧಿಯಿಂದ ಕೃಪೆಯಲ್ಲಿ ತುಂಬಿರುವಾತನೆಂಬುದಾಗಿ

ದೇವರನ್ನು ಗ್ರಹಿಸಲು ಅವರಿಗೆ ಕಷ್ಟಕರವಾಗುತ್ತದೆ. ನಾವಿರುವ ರೀತಿಯಲ್ಲಿ ದೇವರು ಪ್ರೀತಿಸುತ್ತಾನೆ ಮತ್ತು ನಾವು ಹೊಂದಲೂ ಅರ್ಹರಾಗದಿದ್ದರೂ ಪ್ರೀತಿಯಿಂದ ನಮಗೆ ಕೊಡುತ್ತಾನೆಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿರುತ್ತವೆ. ಇದು ಅವರಿಗೆ ಎಣಿಕೆಯಾಗುವುದಿಲ್ಲ!

ಆದಾಗ್ಯೂ ವಚನಭಾಗಗಳು ಕೃಪೆಯಲ್ಲಿ ಮತ್ತು ಕರುಣೆಯಲ್ಲಿ ಸಮೃದ್ಧಿಯಾಗಿರುವಾತನಾದ ದೇವರ ಕಡೆಗೆ ನಾವು ದೃಷ್ಟಿಸುವಂತೆ ಮಾಡುತ್ತದೆ. ಯಾಕೆಂದರೆ ನಮಗಾಗಿರುವ ಆತನ ಮಹತ್ತಾದ, ಅಪರಿಮಿತ ಮತ್ತು ಅಗಾಧವಾದಂತಹ ಪ್ರೀತಿಯು ದೃಷ್ಟಿಸುವಂತೆ ಮಾಡುತ್ತದೆ.

**ಎಫೆಸದವರಿಗೆ 2:4–5**
**ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ.)**

## ನಾವು ದೇವರ ಪ್ರೀತಿಯನ್ನು ಪಡೆದುಕೊಳ್ಳದಂತೆ ನಿಲ್ಲಿಸುತ್ತಿರುವುದೇನು?

ಆತನನ್ನು ಒಬ್ಬ ಪ್ರೀತಿಯುಳ್ಳ ಪರಲೋಕದ ತಂದೆ ಎಂಬುದನ್ನು ಗುರ್ತಿಸುವುದನ್ನು ಮತ್ತು ನಮಗಾಗಿರುವ ಆತನ ಅಪರಿಮಿತ ಮತ್ತು ಅಗಾಧವಾದ ಪ್ರೀತಿಯನ್ನು ಪಡೆದುಕೊಳ್ಳುವುದನ್ನು ತಡೆಯುತ್ತಿರುವಂತಹ ಇತರ ತಪ್ಪಾದ ಮನೋಭಾವನೆಗಳು (ದೇವರ ಕುರಿತ ತಪ್ಪು ಕಲ್ಪನೆಗಳು) ಅಥವಾ ಇವಗಳಲ್ಲಿ ಯಾವುದಾದರೂ ನಮ್ಮನ್ನು ಹಿಡಿದುಕೊಂಡಿದೆಯಾ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು.

1. ದಾರಿ ತಪ್ಪಿ ಹೋಗುವುದು: ನೀನು ಇನ್ನೂ ಒಬ್ಬ ಪಾಪಿಯಾಗಿದ್ದಾಗಲೂ ನಾನು ನಿನ್ನನ್ನು ಪ್ರೀತಿಸಿದ್ದೇನೆ ಎಂಬುದಾಗಿ ಆತನು ತಪ್ಪಿ ಹೋದವರಿಗೆ ಹೇಳುತ್ತಾನೆ.
2. ಗುಲಾಮರಿಗೆ: ಈ ಲೋಕವು ಉಂಟಾಗುವುದಕ್ಕೆ ಮೊದಲೇ ನಿನ್ನನ್ನು ನನ್ನ ಮಗನು ಅಥವಾ ಮಗಳು ಎಂಬುದಾಗಿ ಹೊಂದಲೂ ಯೋಜನೆ ಮಾಡಿದ್ದೇನು ಎಂಬುದಾಗಿ ಆಳಿಗೆ ಆತನು ಹೇಳುತ್ತಾನೆ.
3. ಅನಾಥರಿಗೆ: ನಿಮ್ಮನ್ನು ಸೃಷ್ಟಿಸುವುದಕ್ಕೆ ಮೊದಲು, ನೀವು ಹುಟ್ಟುವುದಕ್ಕೆ ಮೊದಲೇ ನನ್ನ ಕುಟುಂಬಕ್ಕೆ ನಿಮ್ಮನ್ನು ದತ್ತು ತೆಗೆದುಕೊಂಡಿದ್ದೆನೆಂಬುದಾಗಿ ಅನಾಥರಿಗೆ ಆತನು ಹೇಳುತ್ತಾನೆ.

4. ಬಹಿಷ್ಕಾರಗೊಂಡವರಿಗೆ: ನಾನು ನಿಮ್ಮನ್ನು ಅಧಿಕವಾಗಿ ಪ್ರೀತಿಸುತ್ತೇನೆ ಮತ್ತು ನನಗೆ ಸಮೀಪದಲ್ಲಿರಬೇಕೆಂದು ಬಯಸುತ್ತೇನೆ. ನನ್ನ ಪಕ್ಕದಲ್ಲಿ, ಬಲಗಡೆಯಲ್ಲಿ ಕುಳಿತುಕೊಳ್ಳಬೇಕೆಂಬುದಾಗಿ ನಿಮ್ಮನ್ನು ತಂದಿದ್ದೇನೆ ಎಂಬುದಾಗಿ ಬಹಿಷ್ಕಾರಗೊಂಡವರಿಗೆ ಆತನು ಹೇಳುತ್ತಾನೆ.

5. ಗರ್ವವುಳ್ಳ ಹಿರಿಯ ಸಹೋದರ: ನನ್ನ ಪ್ರೀತಿಯನ್ನು ಪಡೆದುಕೊ. ಇದು ಯಾವಾಗಲೂ ಇರುತ್ತದೆ ಎಂಬುದಾಗಿ ಗರ್ವವುಳ್ಳ ಸ್ವ ನೀತಿವಂತಿಕೆಯುಳ್ಳ ಹಿರಿಯ ಸಹೋದರನಿಗೆ ಆತನು ಹೇಳುತ್ತಾನೆ.

6. ಗಾಯಗೊಂಡವರಿಗೆ: ಇತರರು ನೋವುಂಟು ಮಾಡಿರಬಹುದು. ಆದನೆ ನಾನು ತುಂಬಾ ಒಳ್ಳೆಯವನು, ನಿಮಗೆ ಕೆಟ್ಟದ್ದನ್ನು ಮಾಡುವುದಿಲ್ಲ. ನಿಮಗೆ ನೋವು ಮಾಡುವುದರಲ್ಲಿ ತುಂಬಾ ಮೃದುವಾದವನೆಂಬುದಾಗಿ ಮನನೊಂದವರಿಗೆ ಆತನು ಹೇಳುತ್ತಾನೆ.

7. ಸ್ವ-ವಿಮರ್ಶಕರು: ನಾನು ಪ್ರೀತಿಯಾಗಿರುವುದರಿಂದ ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮನ್ನು ನೀವೇ ಖಂಡಿಸಿಕೊಳ್ಳಬೇಡಿರಿ. ಯಾಕೆಂದರೆ, ನಾನು ನಿಮ್ಮ ಮೇಲೆ ತಪ್ಪು ಹೊರಿಸುವುದಿಲ್ಲ ಎಂಬುದಾಗಿ ಸ್ವಯಂ-ಖಂಡಿಸುವವರಿಗೆ ಆತನು ಹೇಳುತ್ತಾನೆ.

ಆತನು ನಮ್ಮನ್ನು ಸ್ವಸ್ಥ ಮಾಡುವಂತೆ ಕೇಳೋಣ ಮತ್ತು ಆತನಿಂದ ಪ್ರೀತಿಸಲ್ಪಟ್ಟವರಾಗಿ ಆತನ ಅಪರಿಮಿತ ಮತ್ತು ಅಗಾಧವಾದ ಪ್ರೀತಿಯನ್ನು ಪಡೆದುಕೊಳ್ಳುವ ನಮ್ಮ ಸಾಮರ್ಥ್ಯವನ್ನು ಪುನಃ ಸ್ಥಾಪಿಸಿಕೊಳ್ಳೋಣ.

ಆತನ ಅಪರಿಮಿತ ಮತ್ತು ಅಗಾಧವಾದ ಪ್ರೀತಿಯ ಕೇಂದ್ರಬಿಂದುವಾಗಿ ನಮ್ಮನ್ನು ಸೃಷ್ಟಿಸಿದ್ದಾನೆ.

ಆತನ ಪುತ್ರರು ಮತ್ತು ಪುತ್ರಿಯರು ಆಗಿರುವಂತಹ ಸ್ಥಾನಕ್ಕೆ ಆತನ ಪ್ರೀತಿಯು ನಮ್ಮನ್ನು ತಂದಿದೆ.

ದೇವರು ನಮ್ಮ ತಂದೆ. ನಾವು ಆತನವರು.

**1 ಯೋಹಾನನು 3:1-2**
**ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ. ನಾವು ಆತನ ಮಕ್ಕಳಾಗಿದ್ದೇವೆ.**

**1 ಯೋಹಾನನು 3:1-2 (ಮೆಸೇಜ್ ಬೈಬಲ್)**
**ದೇವರು ನಮಗೆ ನೀಡಿದಂತಹ ಪ್ರೀತಿಯು ಎಷ್ಟು ಅದ್ಭುತವಾದದು! ಅದನ್ನು ನೋಡಿರಿ - ನಾವು ದೇವರ ಮಕ್ಕಳು ಎಂಬುದಾಗಿ ಕರೆಯಲ್ಪಟ್ಟಿದ್ದೇವೆ! ನಾವು ನಿಜವಾಗಿಯೂ ಯಾರಾಗಿದ್ದೇವೆಂಬುದು ಇದಾಗಿದೆ...''**

## ಪ್ರತಿಫಲನ

1. ದೇವರು ಒಬ್ಬ ಸಂಬಂಧಾತ್ಮಕ ದೇವರಾಗಿದ್ದಾನೆ - ಸೃಷ್ಟಿಗಿಂತ ಮೊದಲೇ ಪ್ರೀತಿಯಿತ್ತು ಮತ್ತು ಪ್ರೀತಿಯ ನಿಮಿತ್ತದಿಂದ ಸೃಷ್ಟಿಯು ಉಂಟಾಯಿತು ಎಂಬುದರ ಕುರಿತಾದ ಸತ್ಯವನ್ನು ಪ್ರತಿಬಿಂಬಿಸಿರಿ.

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

2. ನಾವು ಹೊಂದುವಂತಹ ಏಳು ತಪ್ಪು ಮನೋಭಾವನೆಗಳೇನು (ತಪ್ಪು-ಕಲ್ಪನೆಗಳು) ಮತ್ತು ನಾವು ಹಾಗೆ ದೇವರೊಂದಿಗೆ ಸಂಬಂಧಿಸಿಕೊಳ್ಳುತ್ತೇವೆಂಬುದರ ಮೇಲೆ ಅವು ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಸಮೀಕ್ಷೆ ಮಾಡಿರಿ.

..................................................................................

..................................................................................

..................................................................................

..................................................................................

..................................................................................

..................................................................................

..................................................................................

..................................................................................

..................................................................................

..................................................................................

3. ಏಳು ತಪ್ಪಾದ ಮನೋಭಾವನೆಗಳನ್ನು ಯಾವುದಾದರೂ ನಿಮ್ಮೊಡನೆ ಪ್ರತಿಧ್ವನಿಸುತ್ತಿದೆಯಾ (ನಿಮ್ಮಲ್ಲಿ ಗುರ್ತಿಸಿರುವುದು)? ಸ್ವಲ್ಪ ಸಮಯ ಪ್ರಾರ್ಥನೆ ಮಾಡಿರಿ ಮತ್ತು ಆತನ ವಚನದ ಸತ್ಯದೊಡನೆ ಅವುಗಳನ್ನು ಅದಲು ಬದಲು ಮಾಡಲೂ ಮತ್ತು ಇಂತಹವುಗಳನ್ನು ಹೊರದೂಡಲೂ ದೇವರನ್ನು ಆಹ್ವಾನಿಸಿರಿ. ಆದ್ದರಿಂದ ಉಚಿತವಾಗಿ, ನಿಮ್ಮ ಪರಲೋಕದ ತಂದೆಯಾದ ದೇವರೊಂದಿಗೆ ಸಂಬಂಧ ಹೊಂದಿಕೊಳ್ಳಬಹುದು.

4. ಆತನ ಅಪರಿಮಿತ ಮತ್ತು ಅಗಾಧವಾದ ಪ್ರೀತಿಯ ಮೇಲೆ ದೃಷ್ಟಿಯನ್ನಿಟ್ಟಿರುವಂತಹ ಒಬ್ಬ ದೇವರ ಮಗನು ಮತ್ತು ಮಗಳಾಗಿ ನಿಮ್ಮನ್ನು ನೀವೇ ನೋಡಿಕೊಳ್ಳುವಂತಹ ಯೋಚನೆಗಳನ್ನು / ಅನುಭವಗಳನ್ನು ಬರೆದಿಟ್ಟುಕೊಳ್ಳಿರಿ.

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

5. "ಪರಲೋಕದ ತಂದೆ" (ಮತ್ತಾಯ 6:14, 26, 32; ಮತ್ತಾಯ 15:13; ಮತ್ತಾಯ 18:35; ಲೂಕನು 11:13) ಮತ್ತು "ಪರಲೋಕದಲ್ಲಿರುವ ತಂದೆ" (ಮತ್ತಾಯ 5:16, 45,48; ಮತ್ತಾಯ 6:1,9; ಮತ್ತಾಯ 7:21; ಮತ್ತಾಯ 15:20; ಮತ್ತಾಯ 18:19; ಮಾರ್ಕ 11:25–26) ಕರ್ತನಾದ" ಯೇಸುವು ಸುವಾರ್ತೆಗಳ ಪುಸ್ತಕದಲ್ಲಿ ಉಪಯೋಗಿಸಿರುವಂತಹ ಈ ವಚನಗಳ ಉದಾಹರಣೆಗಳನ್ನು ಓದಿರಿ. ಸನ್ನಿವೇಶಗಳ ಮೇಲೆ ವಿಚಾರ ಮಾಡಿರಿ ಮತ್ತು ಜೀವಿತದ ದಿನನಿತ್ಯದ ಸನ್ನಿವೇಶದಲ್ಲಿ ಇಂತಹವುಗಳನ್ನು ಮಧ್ಯದಲ್ಲಿ ಪರಲೋಕದ

ತಂದೆಯಾಗಿ ದೇವರೊಂದಿಗೆ ಹೇಗೆ ಸಂಬಂಧಿಸಿಕೊಳ್ಳಬೇಕೆಂಬುದನ್ನು ಪ್ರತಿಬಿಂಬಿಸಿರಿ.

................................................................................

................................................................................

................................................................................

................................................................................

................................................................................

................................................................................

................................................................................

................................................................................

................................................................................

................................................................................

# 2

# ಅಗಾಧವಾದ ಪ್ರೀತಿ

## ಆತನ ಪ್ರೀತಿಯ ಅಗಾಧ ಶ್ರೇಷ್ಠತೆ

**ಎಫೆಸದವರಿಗೆ 3:1719**
**ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸ ಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ. ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ, ಉದ್ದ, ಎತ್ತರ, ಆಳ ಎಷ್ಟೆಂಬುದನ್ನು ದೇವ ಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿದುಕೊಳ್ಳಲೂ ಪೂರ್ಣ ಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ, ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.**

**ಎಫೆಸದವರಿಗೆ 3:17-19 (ಆ್ಯಂಪ್ಲಿಫೈಡ್ ಬೈಬಲ್)**
**ಆದ್ದರಿಂದ ನಿಮ್ಮ ನಂಬಿಕೆಯ ಮೂಲಕವಾಗಿ ಕ್ರಿಸ್ತನು ನಮ್ಮ ಹೃದಯಗಳಲ್ಲಿ ವಾಸಿಸಲಿ ಮತ್ತು ನೀವು ಪ್ರೀತಿಯಲ್ಲಿ (ಆಳವಾಗಿ) ಬೇರೂರಿರಿ ಮತ್ತು ನೆಲೆಗೊಂಡಿರಿ (ಸುರಕ್ಷತವಾಗಿ). ಎಲ್ಲಾ ವಿಶ್ವಾಸಿಗಳು (ದೇವ ಜನರ) ಗ್ರಹಿಸಲೂ, ಜ್ಞಾನ ಮೀರುವ ಆತನ ಪ್ರೀತಿಯ, ಉದ್ದ, ಅಗಲ, ಎತ್ತರ, ಆಳವನ್ನು ತಿಳಿದುಕೊಳ್ಳಿರಿ (ಕೊನೆಯಿಲ್ಲದ, ಅದ್ಭುತ ಪ್ರೀತಿಯನ್ನು ಪೂರ್ವವಾಗಿ ಅನುಭವಿಸುವುದು) ಮತ್ತು ಆದ್ದರಿಂದ ಜ್ಞಾನಕ್ಕೆ (ಅನುಭವವಿಲ್ಲದ) ಮೀರುವ (ಮಾತ್ರ) ಕ್ರಿಸ್ತನ ಪ್ರೀತಿಯನ್ನು ನೀವು ತಿಳಿಯುತ್ತೀರಿ (ಪ್ರಾಯೋಗಿಕವಾಗಿ, ವೈಯುಕ್ತಿಕ ಅನುಭವಗಳ ಮೂಲಕವಾಗಿ). ಅದರಿಂದ ದೇವರ ಸಂಪೂರ್ಣತೆಯ ಮಟ್ಟಿಗೂ (ಆದ್ದರಿಂದ ಸ್ವತಃ ದೇವರೊಡನೆ ತುಂಬಿದ ಮತ್ತು ಹೊರ ಹರಿಯುವ ಸಂಪೂರ್ಣವಾದ ದೇವರ ಪ್ರಸನ್ನತೆಯನ್ನು ನಿಮ್ಮ ಜೀವಿತದಲ್ಲಿ ಸಮೃದ್ಧಿಯಾಗಿ ನೀವು ಅನುಭವಿಸುತ್ತೀರಿ) ನೀವು ತುಂಬಿಸಲ್ಪಟ್ಟವರಾಗುತ್ತೀರಿ. (ನಿಮ್ಮ ಅಸ್ತಿತ್ವದಾದ್ಯಂತ).**

ಈ ವಚನಗಳಲ್ಲಿ ಅಪೊಸ್ತಲನಾದ ಪೌಲನು ವ್ಯಕ್ತಪಡಿಸಿದಂತೆಯೇ, ನಮ್ಮ ಪರಲೋಕದ ತಂದೆಯಾದ ದೇವರು, ನಮಗಾಗಿ ಹೊಂದಿರುವ ಪ್ರೀತಿಯ ಆತನ ಅಪರಿಮಿತೆಯಲ್ಲಿ ಸುರಕ್ಷಿತವಾಗಿ ನೆಲೆಗೊಂಡು (ಒಂದು ಬಲಿಷ್ಠ ಅಸ್ತಿವಾರವುಳ್ಳ ಕಟ್ಟಡದಂತೆ) ಆಳವಾಗಿ ಬೇರೂರಿರುವ (ಮರದ ಹಾಗೆ) ಸ್ಥಳಕ್ಕೆ ಬರಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ.

ಮೇಲಿನ 18-19ನೇ ವಚನದಲ್ಲಿ, ಸಂಪೂರ್ಣವಾಗಿ ಬುದ್ಧಿಶಕ್ತಿಯಿಲ್ಲದ ವೈಯುಕ್ತಿಕವಾದ ಮತ್ತು ಅನುಭವಿಯಾದಂತಹ ತಂದೆಯ ಪ್ರೀತಿಯನ್ನು "ಗ್ರಹಿಸಲೂ" ಮತ್ತು "ತಿಳಿದುಕೊಳ್ಳಲೂ" ಎಂಬುದಾಗಿ ಅಪೊಸ್ತಲನಾದ ಪೌಲನು ವ್ಯಾಖ್ಯಾನಿಸುತ್ತಾನೆ. "ಗ್ರಹಿಸಲೂ" ಎಂಬ ಪದವು ಗ್ರೀಕ್‌ನಲ್ಲಿ, ಕುತೂಹಲದಿಂದ ತೆಗೆದುಕೋ, ವಶಪಡಿಸಿಕೋ, ಹೊಂದಿಕೋ, ಗ್ರಹಿಸಿಕೋ ಮತ್ತು ವೈಯಕ್ತಿಕ ಅನುಭವದಿಂದ ತಿಳಿಯುವುದು. ಎಂಬ ಅರ್ಥವನ್ನು ಹೊಂದಿದೆ - ನಮಗಾಗಿ ಇರುವ ಆತನ ಅಪರಿಮಿತವಾದ ಮತ್ತು ಅಗಾಧವಾದ ಶ್ರೇಷ್ಠತೆಯ ಪ್ರೀತಿಯನ್ನು ವೈಯಕ್ತಿಕ ಅನುಭವದ ಮೂಲಕವಾಗಿ ಪ್ರಾಯೋಗಿಕವಾಗಿ ತಿಳುಕೊಳ್ಳಬೇಕೆಂಬುದಾಗಿ ಪರಲೋಕದ ತಂದೆಯಾದ ನಮ್ಮ ದೇವರು ಅಪೇಕ್ಷಿಸುತ್ತಾನೆ.

ತಂದೆಯ ಪ್ರೀತಿಯು ಅದಕ್ಕೆ ಉದ್ದ, ಎತ್ತರ, ಅಗಲ, ಆಳದಲ್ಲಿ ಅಗಾಧವಾಗಿದೆ (ವಚನ 18).

- ಪ್ರಪಂಚದಂತೆಯೇ ಆತನ ಪ್ರೀತಿಯು ಅಗಲವಾಗಿದೆ: "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು" (ಯೋಹಾನ 3:16).
- ಆತನ ಪ್ರೀತಿಯ ಉದ್ದವು, ನಮ್ಮಲ್ಲಿ ಒಬ್ಬನು ಬಹಳ ದೂರವಾಗಿ ಅಲೆದಾಡಿದಂತಹ ಉದ್ದಕ್ಕಿಂತಲೂ ಉದ್ದವಾಗಿದೆ. "ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು" (ಯೆಶಾಯ 53:6).
- ಆತನ ಪ್ರೀತಿಯ ಆಳವು, ಅತ್ಯಂತದ ದೂರದ, ನಮ್ಮನ್ನು ನಾವು ಇರಿಸಿಕೊಂಡ ಅತ್ಯಂತ ಕೆಳ ನರಕದ ಆಳಕ್ಕಿಂತಲೂ ಆಳವಾಗಿದೆ. "ಆದ ಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ" (ಇಬ್ರಿಯರಿಗೆ 7:25).
- ಆತನ ಪ್ರೀತಿಯು, ಮೇಲಿರುವ ಪರಲೋಕಗಳಿಗಿಂತಲೂ ಎತ್ತರವಾಗಿದೆ. "ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ" (ಎಫೆಸದವರಿಗೆ 2:6-7).
- ಆತನ ಪ್ರೀತಿಯು ಸಮಯರಹಿತ, ನಿರಂತರ, ಸುಸ್ತಾಗದು. "ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ" (ಯೆರೆಮೀಯ 31:3).

## ಯೇಸುಕ್ರಿಸ್ತನ ಶಿಲುಬೆ - ದೇವರ ಅಗಾಧ ಪ್ರೀತಿಯ ಶ್ರೇಷ್ಟವಾದ ಅಭಿವ್ಯಕ್ತತೆ

**ಯೋಹಾನ 3:16-17**
**ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವದಕ್ಕಾಗಿ ಕಳುಹಿಸಲಿಲ್ಲ.**

**ರೋಮಾಪುರದವರಿಗೆ 5:8**
**ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.**

**1 ಯೋಹಾನ 4:9-10**
**ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ. ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತದೆ.**

ಯೇಸುಕ್ರಿಸ್ತನ ಶಿಲುಬೆಯು, ನಮಗಾಗಿ ಇರುವ ತಂದೆಯ ಶ್ರೇಷ್ಟವಾದ ಪ್ರೀತಿ, ಅಭಿವ್ಯಕ್ತತೆ ಮತ್ತು ತೋರಿಸುವಿಕೆ ಎಂಬುದಾಗಿ ಸತ್ಯವೇದವು ತಿಳಿಸುತ್ತದೆ. ಆಗಾಗ್ಗೆ ದೇವರು ನಮ್ಮನ್ನು ಎಷ್ಟು ಪ್ರೀತಿಸುತ್ತಾನೆಂಬುದನ್ನು ಮೌಲೀಕರಿಸಲು ಮತ್ತು ಸೂಚಿಸಲೂ ತಾತ್ಕಾಲಿಕವಾದ ವಿಷಯಗಳನ್ನು ನಾವು ನೋಡುತ್ತೇವೆ. ನಾವು ನಮ್ಮ ಶೈಕ್ಷಣಿಕ ಅಥವಾ ವೃತ್ತಿಪರ ಜೀವಿತದಲ್ಲಿ ಉತ್ತಮವಾಗಿ ಮಾಡಿದರೆ, ಇದನ್ನು ದೇವರು ನಮ್ಮನ್ನು ಪ್ರೀತಿಸುತ್ತಾನೆಂಬುದರ ಸೂಚನೆಯಾಗಿ ತೆಗೆದುಕೊಳ್ಳುತ್ತೇವೆ. ನಾವು ಉತ್ತಮವಾಗಿ ಮಾಡದಿದ್ದರೆ, ಅದೇ ರೀತಿಯಾಗಿ ನಾವು ದೇವರು ಕೋಪಗೊಂಡಿದ್ದಾನೆ ಅಥವಾ ಅಸಂತೋಷಗೊಂಡಿದ್ದಾನೆಂಬುದಾಗಿ ಸೂಚಿಸಲೂ ಇದನ್ನು ತೆಗೆದುಕೊಳ್ಳುತ್ತೇವೆ. ಹೇಗಾದರೂ ಯೇಸುಕ್ರಿಸ್ತನನ್ನು ನಮಗಾಗಿ ಪ್ರಾಣ ಕೊಡಲೂ ಕಳುಹಿಸುವ ಮೂಲಕವಾಗಿ ದೇವರು ಪ್ರೀತಿಯನ್ನು ನಮ್ಮ ಕಡೆಗೆ ತೋರಿಸಿದ್ದಾನೆಂದು ಸತ್ಯವೇದವು ಬೋಧಿಸುತ್ತದೆ. ಆದ್ದರಿಂದ ನಾವು ಯಾವುದೇ ಸಮಯದಲ್ಲಿ ತಂದೆಯ ಪ್ರೀತಿಯ ಸೂಚನೆ ಅಥವಾ ತೋರಿಕೆಯನ್ನು ಬಯಸಿದರೆ ಶಿಲುಬೆಯ ಮೇಲೆ ನಮಗೋಸ್ಕರವಾಗಿ ತ್ಯಾಗ ಮಾಡಿದಂತಹ ಯೇಸುವನ್ನು ನೋಡಬೇಕು.

ನಾವು ಪಾಪಿಗಳಾಗಿದ್ದೇವು. ನಮ್ಮ ಪಾಪಗಳು ದೇವರಿಂದ ನಮ್ಮನ್ನು ದೂರ ಮಾಡಿದವು. ದೇವರಿಂದ ನಿತ್ಯತ್ವಕ್ಕೂ ಪ್ರತ್ಯೇಕಿಸಲ್ಪಟ್ಟು ನಮ್ಮನ್ನು ನರಕಕ್ಕೆ ನಮ್ಮ ಪಾಪಗಳು ತೆಗೆದುಕೊಂಡು ಹೋಗುತ್ತವೆ. ನಾವು ಸೈತಾನನ ಅಧೀನದಲ್ಲಿದ್ದೆವು. ಕರ್ತನಾದ ಯೇಸುವು ಶಿಲುಬೆಯ ಮೇಲೆ ಸತ್ತನು. ಸಂಪೂರ್ಣ ಮಾನವ ಜನಾಂಗದ ಪಾಪಗಳಿಗಾಗಿ ದಂಡ ತೆತ್ತನು, ಪಾಪ, ಸೈತಾನ, ನರಕ ಮತ್ತು ಸಮಾಧಿಯನ್ನು ಜಯಿಸಿದನು. ಆತನು ವಿಜಯಿಯಾಗಿ ಎಬ್ಬಿಸಲ್ಪಟ್ಟನು. ತಂದೆಯ ಬಳಿಗೆ ಏರಿಸಲ್ಪಟ್ಟನು. ಪ್ರತಿಯೊಬ್ಬ ವ್ಯಕ್ತಿಯು ಕ್ಷಮಿಸಲ್ಪಡುವುದಕ್ಕೆ ಮಾಡಬೇಕಾದದ್ದನ್ನು ಪಾಪದಿಂದ ಮತ್ತು ಸೈತಾನನಿಂದ ಸ್ವತಂತ್ರಗೊಳಿಸಲೂ ಮತ್ತು ದೇವರ ಕುಟುಂಬಕ್ಕೆ ಕರೆತರುವಂತಹ ಕಾರ್ಯವನ್ನು ಆತನು ಮಾಡಿ ಮುಗಿಸಿದನು. ಕೆಲಸವು ಸಂಪೂರ್ಣಗೊಂಡಿತು. ದೇವರು ಸ್ವತಃ ನಮಗಾಗಿ ಮಾಡಿದಂತಹ ಪ್ರೀತಿಯ ಕೆಲಸವು ಇದಾಗಿದೆ. ಯೇಸುಕ್ರಿಸ್ತನ ಶಿಲುಬೆಯು ನಮಗಾಗಿ ಇರುವ ತಂದೆಯ ಅಪರಿಮಿತ ಶ್ರೇಷ್ಟವಾದ ಪ್ರೀತಿಯ ಎತ್ತರ, ಆಳ, ಉದ್ದ ಮತ್ತು ಸಂಪೂರ್ಣ ಅಗಲವನ್ನು ತೋರಿಸುತ್ತದೆ. ಕ್ರಿಸ್ತನು ಮಾಡಿದಂತದ್ದನ್ನು ನಂಬಿಕೆಯಿಂದ ವೈಯಕ್ತಿಕವಾಗಿ ಪ್ರತಿಯೊಬ್ಬನು ಪಡೆದುಕೊಳ್ಳಬೇಕೆಂಬುದು ಉಳಿದ ಒಂದು ಸಂಗತಿಯಾಗಿದೆ ಮತ್ತು ಆತನು ಮುಗಿಸಿದ ಕಾರ್ಯದಲ್ಲಿ ಜೀವಿಸಿರಿ.

- ದೇವರ ಪ್ರೀತಿಯು ತುಂಬಾ ಅಗಲವಾಗಿದೆ. ಇದು ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಂಡಿದೆ.
- ದೇವರ ಪ್ರೀತಿಯು ತುಂಬಾ ಉದ್ದವಾಗಿದೆ. ಇದು ಅತೀ ದೂರದಲ್ಲಿರುವ ಪಾಪಿಗಳಿಗೂ ತಲುಪುತ್ತದೆ.
- ದೇವರ ಪ್ರೀತಿಯು ಅತೀ ಆಳವಾಗಿದೆ. ಕೆಳಗಿನ ಅತ್ಯಂತ ದೂರದ ಸ್ಥಳವನ್ನು ಇದು ತಲುಪುತ್ತದೆ.
- ದೇವರ ಪ್ರೀತಿಯು ಬಹಳ ಎತ್ತರವಾಗಿದೆ. ಸ್ವತಃ ದೇವರಿಗೆ, ಆತನ ಸ್ವಂತ ಬಲಗೈಗೆ ನಮ್ಮನ್ನು ಎತ್ತುತ್ತದೆ.

## ಪರಿಪೂರ್ಣ ಪ್ರೀತಿಗಾಗಿ ನಮ್ಮ ಸಾಮರ್ಥ್ಯವನ್ನು ಶಿಲುಬೆಯು ಮರುಸ್ಥಾಪಿಸುತ್ತದೆ.

ಕರ್ತನಾದ ಯೇಸುವು ನಮಗಾಗಿರುವ ತಂದೆಯ ಅಗಾಧ ಪ್ರೀತಿಯನ್ನು ತೋರಿಸಲೂ ಶಿಲುಬೆಯ ಮೇಲೆ ಪ್ರಾಣ ಕೊಡುವುದು ಮಾತ್ರವಲ್ಲದೆ ನಮ್ಮನ್ನು ಸಂಪೂರ್ಣವಾಗಿ ಮಾಡಬೇಕೆಂದು ಪ್ರಾಣ ಕೊಟ್ಟನು.

**ಯೆಶಾಯ 53:5**
**ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು.**

ನಮ್ಮ ಎಲ್ಲಾ ಪಾಪಗಳಿಗಾಗಿ ಆತನು ದಂಡನೆಯನ್ನು ಪಾವತಿಸಿದನು. ನಮಗೆ ಶಾಂತಿಯನ್ನುಂಟು ಮಾಡಲೂ ಜಜ್ಜಲ್ಪಟ್ಟನು (ದಂಡನೆ). ಶಾಂತಿ ಎಂಬುದು ಇಬ್ರಿಯ ಭಾಷೆಯಲ್ಲಿ "ಶಾಲೋಮ್" – ಸಂಪೂರ್ಣತೆ ಮತ್ತು ಸಂಪೂರ್ಣವಾಗಿ – ಸುಕ್ಷೇಮವಾಗಿರುವೆಂಬುದಾಗಿ ಅರ್ಥ ಹೊಂದಿದೆ. ಆತನು ಅನುಭವಿಸಿದ ಗಾಯಗಳ ದೆಸೆಯಿಂದ ಎಲ್ಲಾ ರೋಗಗಳಿಂದ ನಾವು ಗುಣವಾದೆವು (ಮತ್ತಾಯ 8:16–17)

ಶಿಲುಬೆಯ ಮೂಲಕವಾಗಿ ಆತನ ಪರಿಪೂರ್ಣ ಪ್ರೀತಿಯನ್ನು ನಮಗೆ ತೋರಿಸಿದ್ದಾನೆ. ಆತನು ನಮ್ಮನ್ನು ಪರಿಪೂರ್ಣರಾಗಿ ಮಾಡಿದ್ದಾನೆ. ಆದ್ದರಿಂದ ದೇವರ ಪರಿಪೂರ್ಣ ಪ್ರೀತಿ ಪಡೆದುಕೊಳ್ಳಬಹುದು ಮತ್ತು ದೇವರ ಪರಿಪೂರ್ಣ ಪ್ರೀತಿ ಕೊಡಬಹುದಾಗಿದೆ.

ಆತನ ಮಗನ ಮೂಲಕವಾಗಿ ನಮಗೆ ವ್ಯಕ್ತ ಪಡಿಸಲ್ಪಟ್ಟಂತಹ ದೇವರ ಅಗಾಧ ಪ್ರೀತಿಯನ್ನು ಪಡೆಯುವಾಗ ನಾವು ಪರಿಪೂರ್ಣರಾಗುತ್ತೇವೆ. ನಮಗಾಗಿ ಮತ್ತು ನಮ್ಮ ಸುತ್ತಲಿರುವವರಿಗಾಗಿ ದೇವರ ಶ್ರೇಷ್ಟ ಪ್ರೀತಿಯನ್ನು ನಾವು ಅರಿತುಕೊಳ್ಳುತ್ತೇವೆ.

## ಆತನ ಅಪಾರ ಪ್ರೀತಿಯಿಂದ ಸಮೃದ್ಧಿಯಾದ ಕರುಣೆ ಮತ್ತು ಅನುಗ್ರಹವಿದೆ.

**ಎಫೆಸದವರಿಗೆ 2:1–7**
**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನು, ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ. ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ, ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು. ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

ಆತನ ಅಪಾರವಾದ ಪ್ರೀತಿಯಿಂದ ನಮ್ಮ ಆತನು ಪ್ರೀತಿಸಿದ್ದರ ನಿಮಿತ್ತದಿಂದ ಆತನು ಕರುಣೆ ಮತ್ತು ಅನುಗ್ರಹದಲ್ಲಿ ಅಪಾರವಾಗಿರುವವನಾಗಿದ್ದಾನೆ. ಆತನ ಬಲಗಡೆಯಲ್ಲಿ ಕುಳಿತುಕೊಳ್ಳಲೂ ಆತನು ನಮ್ಮನ್ನು ಮೇಲೆಬ್ಬಿಸಿದ್ದಾನೆ.

ದೇವರ ಪ್ರೀತಿಗೆ ನಮ್ಮ ಸ್ಥಳವನ್ನು ನಾವು ಸಂಪಾದಿಸಿಕೊಳ್ಳಲಿಲ್ಲ. ಆತನ ಪ್ರೀತಿ, ಕೃಪೆ ಮತ್ತು ಕರುಣೆಯಿಂದ ನಾವು ಇದಕ್ಕೆ ತರಲ್ಪಟ್ಟಿದ್ದೇವೆ.

ಆತನ ಕರುಣೆ ಮತ್ತು ಕೃಪೆಯ ಮೂಲಕವಾಗಿ ದೇವರ ಪ್ರೀತಿಯು ವ್ಯಕ್ತವಾಗಿದೆ. ಯಾಕೆಂದರೆ ಆತನ ಅಗಾಧವಾದ ಪ್ರೀತಿಯ ನಿಮಿತ್ತದಿಂದ ನಮಗೆ ದೇವರು ಕೃಪೆ ಮತ್ತು ಕರುಣೆಯನ್ನು ನೀಡುತ್ತಾನೆ.

ದೇವರ ಕರುಣೆಯು ದೇವರ ಅನುಕಂಪ, ಒಳ್ಳೆಯತನ ಮತ್ತು ದಯೆಯು, ನಮ್ಮ ಹಳೆಯದನ್ನು, ನಮ್ಮ ತಪ್ಪುಗಳನ್ನು, ನಮ್ಮ ಅವ್ಯವಸ್ಥೆಯನ್ನು ಕಡೆಗಣಿಸಿ ನಮ್ಮ ಮೇಲೆ ಇರಿಸಲ್ಪಟ್ಟಿದೆ. ಕೃಪೆಯು ನಾವು ಅನುಭವಿಸಬೇಕಾದ ನ್ಯಾಯದಂಡನೆಯನ್ನು ಹಿಂದೆ ಹಿಡಿದಿಟ್ಟುಕೊಳ್ಳುತ್ತದೆ. ದೇವರು ಕರುಣೆಯಲ್ಲಿ ಅಪಾರವಾದವನು. ನಿಮ್ಮ ಆಳವಾದ ತಪ್ಪುಗಳಿಗಿಂತ ಆತನ ಕರುಣೆಯು ಶ್ರೇಷ್ಟವಾದುದು! ಪಾಪವು ಬಹಳ ಬೆಲೆಯುಳ್ಳದ್ದು, ಆದರೆ ದೇವರ ಕರುಣೆಯು ಶ್ರೀಮಂತವಾದದ್ದು.

ದೇವರ ಕೃಪೆಯು, ದೇವರು ಕೊಡುವಂತದ್ದು ಅಥವಾ ಮಾಡುವಂತದ್ದಾಗಿದೆ. ಇದು ದೇವರ ಸಂಪತ್ತು ನಮಗೆ ಕೊಡಲ್ಪಟ್ಟಿದೆ. ನಾವು ಹೊಂದಿಕೊಳ್ಳಲೂ ಅರ್ಹರಾಗದಿದ್ದರೂ ಮತ್ತು ನಮ್ಮಿಂದ ಸಂಪಾದಿಸಿಕೊಳ್ಳಲೂ ಅಥವಾ ಪಡೆದುಕೊಳ್ಳಲೂ ಆಗದಿದ್ದಂತಹವನ್ನು ಕೃಪೆಯು ನಮಗೆ ಕೊಟ್ಟಿದೆ.

## ತಪ್ಪಿಹೋದ ಮಗನ ದೃಷ್ಟಾಂತ – ಕೃಪೆ ಮತ್ತು ಕರುಣೆ ಕೊಡಲ್ಪಟ್ಟಿದೆ.

**ಲೂಕನು 15:11–32**

**ಇನ್ನೂ ಆತನು ಹೇಳಿದ್ದೇನೆಂದರೆ ಒಬ್ಬನೊಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಕಿರಿಯವನು ತಂದೆಗೆ ಅಪ್ಪಾ ಆಸ್ತಿಯಲ್ಲಿ ನನಗೆ ಬರತಕ್ಕ ಪಾಲನ್ನು ಕೊಡು ಎಂದು ಕೇಳಿಕೊಳ್ಳಲು ತಂದೆಯು ಬದುಕನ್ನು ಅವರಿಗೆ ಹಂಚಿಕೊಟ್ಟನು. ಸ್ವಲ್ಪ ದಿವಸದ ಮೇಲೆ ಆ ಕಿರೀ ಮಗನು ಎಲ್ಲಾ ಕೂಡಿಸಿಕೊಂಡು ದೂರ ದೇಶಕ್ಕೆ ಹೊರಟುಹೋಗಿ ಅಲ್ಲಿ ಪಟಿಂಗನಾಗಿ ಬದುಕಿ ತನ್ನ ಆಸ್ತಿಯನ್ನು ಸೂರೆ ಮಾಡಿಬಿಟ್ಟನು. ಹೀಗೆ ಅವನು ಎಲ್ಲಾ ಹಾಳು ಮಾಡಿಕೊಂಡ ಮೇಲೆ ಆ ದೇಶದಲ್ಲೆಲ್ಲಾ ಘೋರವಾದ ಬರ ಬಂದು ಏನೂ ಗತಿಯಿಲ್ಲದವನಾದನು. ಆಗ ಅವನು ಹೋಗಿ ಆ ದೇಶದ ನಿವಾಸಿಗಳೊಳಗೆ**

ಒಬ್ಬನಲ್ಲಿ ಸೇರಿಕೊಂಡನು. ಆ ಮನುಷ್ಯನು ಹಂದಿಗಳನ್ನು ಮೇಯಿಸುವುದಕ್ಕೆ ಅವನನ್ನು ತನ್ನ ಹೊಲಗಳಿಗೆ ಕಳುಹಿಸಿದನು. ಹೀಗಿರಲಾಗಿ ಅವನು ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ ತಿಂದು ಹಸಿವನ್ನು ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು. ಆದರೂ ಯಾರೂ ಅವನಿಗೆ ಕೊಡಲಿಲ್ಲ. ಆಗ ಅವನಿಗೆ ಬುದ್ಧಿ ಬಂದು ಅವನು ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವಿದೆ. ನಾನಾದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ. ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ ಅಪ್ಪಾ ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ. ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ. ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು. ಅವನು ಇನ್ನೂ ದೂರದಲ್ಲಿರುವಾಗ ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು. ಆದರೂ ಮಗನು ಅವನಿಗೆ ಅಪ್ಪಾ ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ. ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ ಎಂದು ಹೇಳಲು ತಂದೆಯು ತನ್ನ ಆಳುಗಳಿಗೆ ಶ್ರೇಷ್ಟವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ. ಇವನ ಕೈಗೆ ಉಂಗುರವನ್ನು ಇಡಿರಿ. ಕಾಲಿಗೆ ಜೋಡು ಮಡಿಸಿರಿ. ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ. ಹಬ್ಬ ಮಾಡೋಣ, ಉಲ್ಲಾಸ ಪಡೋಣ. ಈ ನನ್ನ ಮಗನು ಸತ್ತವನಾಗಿದ್ದನು. ತಿರುಗಿ ಬದುಕಿ ಬಂದನು. ಪೋಲಿ ಹೋಗಿದ್ದನು. ಸಿಕ್ಕಿದನು ಎಂದು ಹೇಳದನು. ಆಗ ಅವರು ಉಲ್ಲಾಸಪಡುವುದಕ್ಕಾಗಿ ತೊಡಗಿದರು.

ಆದರೆ ಅವನ ಹಿರೀಮಗನು ಹೊಲದಲ್ಲಿದ್ದನು. ಅವನು ಮನೆಯ ಹತ್ತಹತ್ತರಕ್ಕೆ ಬರುತ್ತಿರುವಾಗ ವಾದ್ಯ ನರ್ತನಗಳನ್ನು ಕೇಳಿ ಆಳುಗಳಲ್ಲಿ ಒಬ್ಬನನ್ನು ತನ್ನ ಬಳಿಗೆ ಕರೆದು ಇದೇನು ಎಂದು ವಿಚಾರಿಸಿದನು. ಆಳು ಅವನಿಗೆ ನಿನ್ನ ತಮ್ಮ ಬಂದಿದ್ದಾನೆ. ಇವನು ಸುರಕ್ಷಿತವಾಗಿ ಬಂದದ್ದರಿಂದ ನಿನ್ನ ತಂದೆಯು ಆ ಕೊಬ್ಬಿಸಿದ ಕರುವನ್ನು ಕೊಯ್ಸಿದ್ದಾನೆ ಎಂದು ಹೇಳಿದನು. ಇದನ್ನು ಕೇಳಿ ಅವನಿಗೆ ಸಿಟ್ಟು ಬಂದು ಒಳಕ್ಕೆ ಹೋಗಲೊಲ್ಲದೆ ಇದ್ದನು. ಆಗ ಅವನ ತಂದೆಯು ಹೊರಗೆ ಬಂದು ಅವನನ್ನು ಬೇಡಿಕೊಂಡನು. ಆದರೆ ಅವನು ತನ್ನ ತಂದೆಗೆ ನೋಡು ಇಷ್ಟು ವರುಷ ನಿನಗೆ ಸೇವೆ ಮಾಡಿದ್ದೇನೆ ಮತ್ತು ನಾನು ನಿನ್ನ ಒಂದಪ್ಪಣೆಯನ್ನಾದರೂ ಎಂದೂ ಮೀರಲಿಲ್ಲ. ಆದರೂ ನಾನು ನನ್ನ ಸ್ನೇಹಿತರ ಸಂಗಡ ಉಲ್ಲಾಸಪಡುವದಕ್ಕಾಗಿ ನೀನು ಎಂದೂ ನನಗೆ ಒಂದು ಆಡನ್ನಾದರೂ ಕೊಡಲಿಲ್ಲ. ಆದರೆ ಸೂಳೆಯರನ್ನು ಕಟ್ಟಿಕೊಂಡು ನಿನ್ನ ಬದುಕನ್ನು ನುಂಗಿಬಿಟ್ಟ ಈ ನಿನ್ನ ಮಗನು ಬಂದಾಗ ಕೊಬ್ಬಿಸಿದ ಕರುವನ್ನು ಅವನಿಗೆ ಕೊಯ್ಸಿದಿ ಎಂದು ಉತ್ತರ ಕೊಟ್ಟನು. ಅದಕ್ಕೆ ತಂದೆಯು, ಕಂದಾ! ನೀನು ಯಾವಾಗಲೂ ನನ್ನ ಸಂಗಡ ಇದ್ದಿ ಮತ್ತು ನನ್ನದೆಲ್ಲ ನಿನ್ನದೇ. ಆದರೆ ಉಲ್ಲಾಸ ಪಡುವದೂ, ಸಂತೋಷಗೊಳ್ಳುವದೂ, ನ್ಯಾಯವಾದದ್ದೇ. ಯಾಕೆಂದರೆ, ಈ ನಿನ್ನ ತಮ್ಮ ಸತ್ತವನಾಗಿದ್ದನು. ತಿರಿಗಿ ಬದುಕಿ ಬಂದನು ಪೋಲಿ ಹೋಗಿದ್ದನು. ಸಿಕ್ಕಿದನು ಎಂದು ಹೇಳಿದನು.

ಕರುಣೆ ಮತ್ತು ಕೃಪೆಯನ್ನು ತೋರಿಸುವ ಮೂಲಕವಾಗಿ ತನ್ನ ಮಗನಿಗೆ ತಂದೆಯು ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದನು.

ಕರುಣೆ(ಕನಿಕರ): ಸಂಪತ್ತನ್ನು ಹಾಳು ಮಾಡಿದ, ಕುಟುಂಬಕ್ಕೆ ಅಗೌರವವನ್ನು ಮತ್ತು ಅಪಕೀರ್ತಿಯನ್ನು ತಂದ, ತನ್ನ ಸ್ವಂತ ವೈಯಕ್ತಿಕ ಜೀವಿತವನ್ನು ಹಾಳು ಮಾಡಿಕೊಂಡಂತಹ ಮಗನು ಮಾಡಿದ ಎಲ್ಲಾ ತಪ್ಪುಗಳನ್ನು ತಂದೆಯು ಕ್ಷಮಿಸಿದನು.

ಕೃಪೆ: ಮಗನು ಹೊಂದಿಕೊಳ್ಳಲೂ ಅರ್ಹನಾಗಿಲ್ಲದ್ದಂತಹ – ಒಂದು ನಿಲುವಂಗಿ, ಒಂದು ಉಂಗುರ, ಕಾಲಿಗೆ ಜೋಡು, ಅಳತೆ ಮೀರಿದ ಹಬ್ಬ ಮತ್ತು ಮನೆಯಲ್ಲಿ ಬಾಧ್ಯಸ್ಥನಾಗಿರುವಂತಹ ಸ್ಥಾನವನ್ನು ತಂದೆಯು ಕೊಟ್ಟನು.

ನಾವು ಆತನ ಬಳಿಗೆ ಹಿಂತಿರುಗಿದರೆ, ಆತನ ಅಗಾಧವಾದ ಪ್ರೀತಿಯನ್ನು ಪ್ರತ್ಯಕ್ಷವಾಗಿ ನಾವು ಅನುಭವಿಸುತ್ತೇವೆ ಮತ್ತು ಆತನ ಅಪರಿಮಿತ ಕನಿಕರ ಮತ್ತು ಸಮೃದ್ಧಿಯಾದ ಕೃಪೆಯನ್ನು ಪಡೆದುಕೊಳ್ಳುತ್ತೇವೆ.

## ಆತನ ಅಗಾಧವಾದ ಪ್ರೀತಿಯ ಕುರಿತು ಇದು ನಮಗೆ ಯಾವುದನ್ನು ಪ್ರಕಟಿಸುತ್ತದೆ

- ನಾವು ದ್ರೋಹಿಗಳಾಗಿದ್ದಾಗಲೂ, ಆತನು ಇನ್ನೂ ನಮ್ಮನ್ನು ಪ್ರೀತಿಸಿದ್ದಾನೆ.
- ನಾವು ಹೊಲಸಿನೊಡನೆ ಆವರಿಸಿದಾಗ ಮತ್ತು ಪಾಪದಲ್ಲಿ ಮುಳುಗಿದಾಗ, ಆತನು ಇನ್ನೂ ನಮ್ಮನ್ನು ಪ್ರೀತಿಸುತ್ತಾನೆ.
- ನಾವು ಭರವಸೆಯಿಲ್ಲದವರಾದಾಗ, ಹಾಳು ಮಾಡಿದಾಗ ಮತ್ತು ವ್ಯರ್ಥ ಮಾಡಿದಾಗಲೂ ಆತನು ಇನ್ನೂ ಪ್ರೀತಿಸುತ್ತಾನೆ.
- ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವಾಗಲು ಇನ್ನೂ ಆತನು ನಮ್ಮನ್ನು ಪ್ರೀತಿಸುತ್ತಾನೆ.

ಸಮುದ್ರದಂತೆ ವಿಶಾಲವಾಗಿರುವ ಪ್ರೀತಿಯು ಇಲ್ಲಿದೆ! ನಮ್ಮ ಸಂಪೂರ್ಣ ದಾರಿತಪ್ಪಿರುವಿಕೆ, ನಮ್ಮ ಅಪನಂಬಿಕೆಯ ಅಚ್ಚರಿಗಳು, ನಮ್ಮ ಶ್ರೇಷ್ಠವಾದ ಸುತ್ತಾಟಗಳು, ನಮ್ಮ ಆಳವಾದ ದುಷ್ಟತನವನ್ನು ಆತನ ಪ್ರೀತಿಯು ಮೀರಿಸುತ್ತದೆ.

ತಂದೆಯು ನಮ್ಮನ್ನು ನಿರಂತರ ಮತ್ತು ಅಗಾಧವಾದ ಪ್ರೀತಿಯಿಂದ ಪ್ರೀತಿಸುತ್ತಾನೆ. ಆತನ ಮಗನಾದ ಯೇಸುಕ್ರಿಸ್ತನಲ್ಲಿ ನಮಗೆ ಪ್ರಕಟಗೊಂಡ ತಂದೆಯ ಪ್ರೀತಿಯು ಎಲ್ಲದ್ದಕ್ಕಿಂತ ಅಳತೆ ಮೀರಿರುವುದಾಗಿದೆ. ಆತನ ಅಗಾಧವಾದ ಪ್ರೀತಿಯಿಂದ ಆತನು ಕೃಪೆ ಮತ್ತು ಕನಿಕರವನ್ನು ನಮ್ಮ ಮೇಲೆ ಸುರಿಸುತ್ತಾನೆ.

**ರೋಮಾಪುರದವರಿಗೆ 8:32**
**ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿ ಕೊಟ್ಟನಲ್ಲಾ. ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?**

## ಆತನ ಕರುಣೆ ಮತ್ತು ಕೃಪೆಯನ್ನು ಪಡೆದುಕೊಳ್ಳಲು ಮತ್ತು ದೇವರ ಮಗುವಾಗಿ ಕಂಡು ಬರಲು ಪ್ರಾರ್ಥನೆ

ಯೇಸುಕ್ರಿಸ್ತನಲ್ಲಿ ನಂಬಿಕೆಯ ಮೂಲಕವಾಗಿ ಆತನ ಸ್ವಂತ ಮಕ್ಕಳಾಗಿ ಕಂಡು ಬರಲೂ ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸಲ್ಪಡುವಂತಹ ಇಂತಹ ಅದ್ಭುತಕರವಾದ ಅವಕಾಶವನ್ನು ದೇವರು ನಮಗೆ ಕೊಡುತ್ತಾನೆ. ವೈಯಕ್ತಿಕವಾಗಿ ನಮ್ಮಲ್ಲಿ ಪ್ರತಿಯೊಬ್ಬರು ಮಾಡಬೇಕಾದ ಒಂದು ತೀರ್ಮಾನವಾಗಿದೆ. ನಮಗೋಸ್ಕರ ಬೇರೆಯವರು ಇದನ್ನು ಮಾಡಲೂ ಸಾಧ್ಯವಿಲ್ಲ. ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವ ಮತ್ತು ಆತನನ್ನು ಮತ್ತು ಆತನೊಬ್ಬನನ್ನೇ ಹಿಂಬಾಲಿಸುವ ಒಂದು ವೈಯಕ್ತಿಕ ತೀರ್ಮಾನವನ್ನು ನಾವು ಮಾಡಬೇಕು. ನಮ್ಮ ಉಳಿದ ಜೀವಮಾನವೆಲ್ಲಾ "ಯಾರ್ಯಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ಮಕ್ಕಳಾಗುವ ಅಧಿಕಾರ ಕೊಟ್ಟನು" (ಯೋಹಾನ 1:12) ಎಂಬುದಾಗಿ ಸತ್ಯವೇದವು ಹೇಳುತ್ತದೆ.

ಯೇಸುಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನಾಗಿ ಮತ್ತು ಕರ್ತನಾಗಿ ಪಡೆಯುವ ತೀರ್ಮಾನವನ್ನು ಮತ್ತು ನಿಮ್ಮ ಪಾಪಗಳು ಕ್ಷಮಿಸಲ್ಪಡುವುದಕ್ಕಾಗಿ ಆತನಲ್ಲಿ ನಂಬಿಕೆಯನ್ನಿಡುವ ಮತ್ತು ದೇವರ ಮಕ್ಕಳಾಗಿ ಕಂಡು ಬರಲೂ ಒಂದು ತೀರ್ಮಾನವನ್ನು ನೀವು ಮಾಡಿರದಿದ್ದರೆ ಇದು ಸರಿಯಾದ ಸಮಯ. ನೀವು ಅದನ್ನು ಈಗಲೇ ಮಾಡಿರಿ.

ನಿಮ್ಮ ತೀರ್ಮಾನವನ್ನು ಮಾಡಲೂ ಈ ಸಾಮಾನ್ಯ ಪ್ರಾರ್ಥನೆಯನ್ನು ಉಪಯೋಗಿಸಿರಿ. ನಿಮ್ಮ ಸ್ವಂತ ಮಾತುಗಳಲ್ಲೂ ನೀವು ಪ್ರಾರ್ಥಿಸಬಹುದು.

ಪ್ರೀತಿಯ ಕರ್ತನಾದ ಯೇಸುವೇ, ನನ್ನ ಪಾಪಗಳಿಗಾಗಿ ಶಿಲುಬೆಯ ಮೇಲೆ ಸತ್ತು ನನಗಾಗಿ ತಂದೆಯ ಶ್ರೇಷ್ಠ ಪ್ರೀತಿಯನ್ನು ತೋರಿಸಿದ್ದಕ್ಕಾಗಿ ವಂದನೆಗಳು. ನೀನು ಶಿಲುಬೆಯ ಮೇಲೆ ಬಲಿಯಾದಾಗ ನನ್ನ ಎಲ್ಲಾ ಪಾಪಗಳಿಗಾಗಿ ಪ್ರಾಯಶ್ಚಿತ್ತ ತೆತ್ತೆ ಎಂಬುದಾಗಿ ನಾನು ನಂಬುತ್ತೇನೆ. ನೀನು ಸೈತಾನನನ್ನು ಸೋಲಿಸಿದೆ, ನರಕವನ್ನು ಮತ್ತು ಮರಣವನ್ನು ಜಯಿಸಿದೆ ಮತ್ತು ಮೂರನೇ ದಿನದಲ್ಲಿ ಎದ್ದು ಬಂದೆ ಎಂಬುದಾಗಿ ನಾನು

ನಂಬುತ್ತೇನೆ. ಇಂದು ನಿನ್ನನ್ನು ನನ್ನ ರಕ್ಷಕನಾಗಿ ಮತ್ತು ಕರ್ತನಾಗಿ ಅಂಗೀಕರಿಸುತ್ತೇನೆ. ನಾನು ನಿನ್ನನ್ನು ನಂಬುತ್ತೇನೆ. ನನ್ನನ್ನು ದೇವರ ಮಗುವಾಗಿ ಮಾಡು ಮತ್ತು ಉಳಿದ ನನ್ನ ಜೀವಮಾನವೆಲ್ಲಾ ನಿನ್ನನ್ನು ಹಿಂಬಾಲಿಸುವಂತೆ ಸಹಾಯ ಮಾಡು. ಯೇಸುವಿನ ನಾಮದಲ್ಲಿ. ಆಮೆನ್

## ಪ್ರೀತಿಯು ಇಲ್ಲಿದೆ (ವಿಲಿಯಂ ದೀಸ, 1900)

ಪ್ರೀತಿಯು ಇಲ್ಲಿದೆ. ಸಮುದ್ರದಂತೆ ವಿಶಾಲವಾಗಿದೆ,
ಪ್ರವಾಹದಂತೆ ಪ್ರೀತಿ–ಸತ್ಯತೆಯು ಇದೆ,
ಜೀವಿತದ ಯುವರಾಜನು, ನಮ್ಮ ಬಿಡುಗಡೆ ಕೊಟ್ಟಾತನು,
ಆತನ ಅತ್ಯಮೂಲ್ಯ ರಕ್ತ ನಮಗಾಗಿ ಸುರಿಸಿದನು.
ಆತನ ಪ್ರೀತಿಯನ್ನು ನೆನಸಿಕೊಳ್ಳದವನಾರು?
ಆತನ ಸ್ತೋತ್ರದ ಗೀತೆಗಳನ್ನು ಯಾರು ನಿಲ್ಲಿಸಬಹುದು?
ಆತನನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ,
ನಿತ್ಯತ್ವದ ದಿನಗಳು ಪರಲೋಕಗಳವರೆಗೂ.

ಶಿಲುಬೆಯ ಒಂದು ಪರ್ವತದ ಮೇಲೆ,
ಚಿಲುಮೆಗಳು ಆಳವಾಗಿ ಮತ್ತು ಅಗಲವಾಗಿ ತೆರೆದವು;
ದೇವರ ಕೃಪೆಯ ಪ್ರವಾಹದ್ವಾರದ ಮೂಲಕವಾಗಿ
ಒಂದು ವಿಸ್ತಾರವಾಗಿ ಮಹಿಮೆಯುಳ್ಳ ಉಬ್ಬರವಿಳಿತವು ಹರಿಯಿತು.
ಕೃಪೆ ಮತ್ತು ಪ್ರೀತಿ ಬಲವಾದ ನದಿಗಳಂತೆ,
ಮೇಲಿನಿಂದ ನಿರಂತರವಾಗಿ ಸುರಿಸಲ್ಪಡುತ್ತವೆ,
ಪರಲೋಕದ ಶಾಂತಿ ಮತ್ತು ಸಂಪೂರ್ಣ ನ್ಯಾಯ
ಒಂದು ತಪ್ಪಿತಸ್ಥ ಪ್ರಪಂಚಕ್ಕೆ ಪ್ರೀತಿಯಲ್ಲಿ ಮುದ್ದಿಟ್ಟಿವೆ.

ಎಲ್ಲಾ ನಿನ್ನ ಪ್ರೀತಿಯನ್ನು ನಾನು ಅಂಗೀಕರಿಸುವೆ,
ಎಲ್ಲಾ ದಿನವೂ ನಿನ್ನನ್ನು ಪ್ರೀತಿಸುತ್ತೇನೆ;
ನಾನು ನಿನ್ನ ರಾಜ್ಯವನ್ನು ಮಾತ್ರ ಹುಡುಕುವ,
ನನ್ನ ಜೀವಮಾನವೆಲ್ಲ ನಿನಗೆ ಸ್ತೋತ್ರ ಹೇಳುವೆ;

ನೀನೊಬ್ಬನೇ ನನ್ನ ಮಹಿಮೆಯು,
ಬೇರೆ ಯಾವುದನ್ನು ಈ ಲೋಕದಲ್ಲಿ ನೋಡಲಾರೆ;
ನೀನು ನನ್ನನ್ನು ತೊಳೆದು ಶುದ್ಧೀಕರಿಸಿದೆ,
ನೀನು ಮಾತ್ರವೇ ನನ್ನನ್ನು ಸ್ವತಂತ್ರಗೊಳಿಸಿದೆ.

ನಿನ್ನ ಸತ್ಯದಲ್ಲಿ ನನ್ನನ್ನು ನೀನು ಮಾರ್ಗದರ್ಶಿಸು
ನಿನ್ನ ಆತ್ಮ, ನಿನ್ನ ವಾಕ್ಯದ ಮೂಲಕವಾಗಿ;
ನನ್ನ ಅಗತ್ಯವಾದ ನಿನ್ನ ಕೃಪೆಯು ಸಮಾರಂಭ,
ನನ್ನ ಕರ್ತನೆ ನಿನ್ನನ್ನು ನಾನು ನಂಬುವಾಗ.
ನಿನ್ನ ಸಂಪೂರ್ಣತೆಯನ್ನು ನೀನು ಸುರಿಸುತ್ತಿ
ನಿನ್ನ ಶ್ರೇಷ್ಠ ಪ್ರೀತಿ ಮತ್ತು ಬಲ ನನ್ನ ಮೇಲಿದೆ,
ಆಳತೆ ಮೀರಿ, ಸಂಪೂರ್ಣ ಮತ್ತು ಎಲ್ಲೆ ಮೀರಿದೆ,
ನನ್ನ ಹೃದಯವನ್ನು ನಿನ್ನೆಡೆಗೆ ತರುತ್ತೇನೆ.

# ಪ್ರತಿಫಲನ

1. ವಿಶ್ವಾಸಿಗಳಾಗಿ ನಾವು, ತಂದೆಯ ಅಗಾಧವಾದ ಪ್ರೀತಿಯಲ್ಲಿ ''ಆಳವಾಗಿ ಬೇರೂರುವುದು'' ಮತ್ತು ''ಸುರಕ್ಷಿತವಾಗಿ ನೆಲೆಗೊಳ್ಳುವುದು'' ಏಕೆ ಬಹಳ ಪ್ರಾಮುಖ್ಯವಾಗಿದೆ?

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

2. ದೇವರ ಕೃಪೆ ಮತ್ತು ಕನಿಕರವು ಆತನ ಅಗಾಧವಾದ ಪ್ರೀತಿಯಿಂದ ನಮಗಾಗಿ ಹರಿಯುತ್ತವೆ. ''ಕೃಪೆ'' ಮತ್ತು ''ಕನಿಕರ''ದಿಂದ ಏನನ್ನು ಅರ್ಥಮಾಡಿಕೊಳ್ಳುತ್ತೀರಾ?

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

3. ದೇವರ ಪ್ರೀತಿಯ ಸಮುದ್ರದಲ್ಲಿ ಮುಳುಗಿರುವಂತಹ ರೀತಿಯಲ್ಲಿ ನಿಮ್ಮನ್ನು ಚಿತ್ರಿಸಿಕೊಳ್ಳಿರಿ. ನಿಮ್ಮ ಯೋಚನೆಗಳನ್ನು ಬರೆದಿಟ್ಟುಕೊಟ್ಟಿರಿ. ಅಂತಹ ಅಗಾಧವಾದ ರೀತಿಯಲ್ಲಿ ಅಪರಿಮಿತವಾಗಿ ಪ್ರೀತಿಸಲ್ಪಡುವುದೆಂಬುದರ ಅರ್ಥವೇನು?

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

# 3

# ನಮ್ಮ ಪರಲೋಕ ತಂದೆಯ ನಿಜ ಚಿತ್ರಣ

ದೇವರ ಒಂದು ಸತ್ಯವಾದ ಚಿತ್ರಣ ಮತ್ತು ಒಂದು ಸರಿಯಾದ ಚಿತ್ರಣ ಹೊಂದಿರಬೇಕು.

ಒಂದು ತಪ್ಪಾದ ಚಿತ್ರವು ದೇವರ ಮುಂದೆ ಒಂದು ತಪ್ಪಾದ ಮನೋಭಾವನೆಯನ್ನು ಉಂಟು ಮಾಡುತ್ತದೆ. ಅಲ್ಲದೆ ಅವರೊಂದಿಗೆ ತಪ್ಪಾದ ರೀತಿಯಲ್ಲಿ ನಾವು ಸಂಬಂಧಿಸಿಕೊಳ್ಳುತ್ತೇವೆ. ಉದಾಹರಣೆಗೆ ದೇವರು ಜಿಪುಣನು, ಲೋಭಿ, ಆತನ ಜನರನ್ನು ಸಮೃದ್ಧಿಗೊಳಿಸಲು ಮತ್ತು ಒದಗಿಸಲೂ, ಆಶೀರ್ವದಿಸಲು ಹಿಂಜರಿಯುತ್ತಾನೆಂಬುದಾಗಿ ನಾವು ಯೋಚಿಸಿದರೆ, ನಮ್ಮ ಜೀವಿತದಲ್ಲಿ ಒದಗಿಸುವಿಕೆ ಅಥವಾ ದೇವರ ಆಶೀರ್ವಾದಗಳನ್ನು ಕೇಳುವಂತಹ ಭರವಸೆಯೊಡನೆ ಪ್ರಾರ್ಥನೆ ಮಾಡಲೂ ಸಾಧ್ಯವಾಗುವುದಿಲ್ಲ. ನಮ್ಮ ಪ್ರಾರ್ಥನೆಗಳು "ಬಹುಶಃ"ಮತ್ತು "ಒಂದು ವೇಳೆ" ಎಂಬುದರಿಂದ ತುಂಬಿರುತ್ತದೆ.

ನಮ್ಮ ಪರಲೋಕದ ತಂದೆಯ ಒಂದು ತಪ್ಪಾದ ಚಿತ್ರವು ದೇವರ ಚಿತ್ತದ ಕುರಿತು ನಿಖರತೆಯಿಲ್ಲದಂತೆ ಮಾಡಬಹುದು.

ನಮ್ಮ ಪರಲೋಕದ ತಂದೆಯ ಒಂದು ತಪ್ಪಾದ ಚಿತ್ರವು ಜೀವಿತದ ಸವಾಲುಗಳ ಮಧ್ಯದಲ್ಲಿ ನಮ್ಮನ್ನು ಭಯಭೀತಿಯುಳ್ಳವರಾಗಿ ಮತ್ತು ಬಲಹೀನರನ್ನಾಗಿ ಮಾಡಬಹುದು. ದೇವರು ನಮ್ಮೊಂದಿಗೆ ಸಂತೋಷವಾಗಿದ್ದಾನಾ ಅಥವಾ ಕೋಪಗೊಂಡಿದ್ದಾನಾ ಎಂಬುದಾಗಿ ನಿಖರತೆಯಿರುವುದಿಲ್ಲ.

ನಮ್ಮಲ್ಲಿ ಹಲವರು ತಂದೆ-ತಾಯಂದಿರ ಅಥವಾ ಒಬ್ಬ ತಂದೆಯ ಪ್ರೀತಿಯನ್ನು ನಿಜವಾಗಿ ಎಂದಿಗೂ ಅನುಭವಿಸದಿರುವಂತಹ ಮನೆಗಳಲ್ಲಿ ಬೆಳೆದಿರಬಹುದು. ನಾವು ಒಳ್ಳೆಯ ತಂದೆ-ತಾಯಂದಿರನ್ನು ಪಡೆದಿರಬಹುದು, ಆದರೆ ತಂದೆ-ತಾಯಂದಿರ ಪ್ರೀತಿಯನ್ನು ಅನುಭವಿಸದೇ ಇರಬಹುದು.

ಆದ್ದರಿಂದ ಆತನೊಂದಿಗೆ ನಮ್ಮ ವೈಯಕ್ತಿಕ ಅನುಭವಗಳು ಅಥವಾ ಪೂರ್ವಭಾವಿ ಕಲ್ಪನೆಗಳ ಆಧಾರದ ಮೇಲೆ ನಾವು ಅಂದುಕೊಳ್ಳುವಂತಹ ಗುಣಲಕ್ಷಣಗಳಿಗೆ ವಿರುದ್ಧವಾಗಿರುವಂತಹ ನಮ್ಮ ಪರಲೋಕದ ತಂದೆಯ ಕೆಲವು ರೂಪಗಳನ್ನು ಈ ಪುಸ್ತಕದಲ್ಲಿ ನಾವು ಪ್ರಸ್ತುತಪಡಿಸುತ್ತೇವೆ.

ನಮ್ಮ ಪರಲೋಕದ ತಂದೆಯ ಕುರಿತಾದ ಒಂದು ಸತ್ಯವೇದಕ್ಕನುಸಾರವಾದ ದೃಷ್ಟಿಕೋನವನ್ನು ಗಳಿಸುವಂತದ್ದು. ಈ ಒಂದು ಅಧ್ಯಾಯದಲ್ಲಿ ನಮ್ಮ ಉದ್ದೇಶವಾಗಿದೆ. ಇವುಗಳು ಸಂಪೂರ್ಣವಾದ ವಿವರಣೆಗಳಲ್ಲ. ಆದರೆ ಇವುಗಳು ಪ್ರಾಮುಖ್ಯವಾದವು ಮತ್ತು ನಮ್ಮ ಪರಲೋಕದ ತಂದೆಯ ಸತ್ಯ ವೇದದ ಚಿತ್ರವನ್ನು ರೂಪಿಸಲೂ ವಿವರಣಕಾರರಿಗೆ ಅಗತ್ಯವಾಗಿ ಬೇಕಾಗಿರುವವುಗಳಾಗಿವೆ.

## 1) ಬದಲಾಗದಂತಹ ಪರಲೋಕದ ತಂದೆ

ಆತುಕೊಂಡಿರುವ ಮತ್ತು ಅವಲಂಭಿಸಿಕೊಳ್ಳಬಹುದಾದಂತಹ ಬದಲಾಗದಂತಹ ಪರಲೋಕದ ತಂದೆಯು ದೇವರಾಗಿದ್ದಾನೆ. ಇದು ಊಹಿಸಲೂ ಆಗದಂತಹ ತಂದೆ-ತಾಯಂದಿರ ಆವರು ಹೇಗೆ ಪ್ರತಿಕ್ರಿಯಿಸುತ್ತಾರೆ ಅಥವಾ ಸ್ಪಂದಿಸುತ್ತಾರೆಂಬುದರ ಬಗ್ಗೆ ನಾವು ಖಚಿತವಾಗಿಲ್ಲದ್ದಕ್ಕೆ ವಿರುದ್ಧವಾಗಿರುವುದಾಗಿದೆ.

**ಯಾಕೋಬನು 1:17**

**ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲ ವಿಧವಾದ ಬೆಳಕಿಗೂ ಮೂಲ ಕಾರಣನಾದವನಿಂದ ಇಳಿದು ಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ.**

ನಮ್ಮ ಪರಲೋಕದ ತಂದೆಯು, ಆತನು ಏನಾಗಿದ್ದಾನೆ, ಏನು ಹೇಳುತ್ತಾನೆ ಮತ್ತು ಏನನ್ನು ಮಾಡುತ್ತಾನೆಂಬುದರಲ್ಲಿ "ಸ್ಥಿರವಾಗಿರುವಾತನು" ನಾವು ಆತನ ಮೇಲೆ ಸಂಪೂರ್ಣವಾಗಿ ಆತುಕೊಳ್ಳಬಹುದು ಮತ್ತು ಅವಲಂಭಿಸಿರಬಹುದು.

## 2) ವಿಫಲವಾಗದ ಪರಲೋಕದ ತಂದೆ

ದೇವರು ವಿಫಲನಾಗದ ಪರಲೋಕದ ತಂದೆಯಾಗಿದ್ದಾನೆ, ನಮ್ಮನ್ನು ಎಂದಿಗೂ ವಿಫಲಗೊಳಿಸುವುದಿಲ್ಲ. ನಮ್ಮನ್ನು ಕೀಳಾಗಿ ನೋಡಿದಂತಹ ಅಥವಾ ಕ್ರಮವಾಗಿ ಗೈರು

ಹಾಜರಾಗಿರುವಂತಹ ತಂದೆ-ತಾಯಂದಿರಿಗೆ ತದ್ವಿರುದ್ಧವಾಗಿರುವುದು ಇದಾಗಿದೆ. ತಂದೆ-ತಾಯಂದಿರು "ಇದ್ದಾರೆ" ಆದರೆ ಅಪಾರವಾಗಿ ನಮಗೆ ಬೇಕೆನ್ನಿಸುವಾಗ "ಇರುವುದಿಲ್ಲ" ಇದಕ್ಕೆ ವಿರುದ್ಧವಾಗಿರುವುದು ಆಗಿದೆ.

**ಇಬ್ರಿಯರಿಗೆ 13:5**
**ದ್ರವ್ಯಾಶೆಯಿಲ್ಲದವರಾಗಿರಿ, ನಿಮಗಿರುವವುಗಳಲ್ಲಿ ತೃಪ್ತರಾಗಿರಿ. ನಾನು ನಿನ್ನನ್ನು ಎಂದಿಗೂ ಕೈ ಬಿಡುವುದಿಲ್ಲ., ಎಂದಿಗೂ ತೊರೆಯುವುದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ.**

ದೇವರು ಪರಲೋಕದ ತಂದೆಯಾಗಿ ನವುಗಾಗಿ ಯಾವಾಗಲೂ ಇರುವಾತನಾಗಿದ್ದಾನೆ. ದೇವರು ನಮಗೆ ತಪ್ಪು ಮಾಡಲು ತುಂಬಾ ಒಳ್ಳೆಯವನು, ತಪ್ಪು ಮಾಡಲೂ ತುಂಬಾ ಬುದ್ಧಿವಂತನು, ನಮ್ಮ ನಿರಾಶೆಗೊಳಿಸಲು ತುಂಬಾ ಪ್ರಬಲವಾಗಿರುವವನಾಗಿದ್ದಾನೆ.

## 3) ಒಬ್ಬ ಅಪಾರ ಮತ್ತು ಉದಾರತೆಯ ತಂದೆ

ಪರಲೋಕದ ತಂದೆಯಾಗಿರುವಂತಹ ದೇವರ ಅಪಾರವಾದ ಮತ್ತು ಉದಾರತೆಯ ತಂದೆಯಾಗಿದ್ದಾನೆ. ಇದು ಜಿಪುಣ, ಲೋಭಿ, ಏನನ್ನಾದರೂ ಕೇಳಲೂ ಭಯವನ್ನುಂಟು ಮಾಡುವಂತಹ ತಂದೆ-ತಾಯಿಗಳಿಗೆ ವ್ಯತಿರಿಕ್ತವಾಗಿರುವಂತದ್ದಾಗಿದೆ. ದೇವರು ಪರಲೋಕದ ತಂದೆಯಾಗಿದ್ದಾನೆ. ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸುತ್ತಾನೆ.

**ಮತ್ತಾಯ 6:31-32**
**ಹೀಗಿರುವದರಿಂದ ಏನು ಊಟ ಮಾಡಬೇಕು, ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ. ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ. ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದಿದಿಯಷ್ಟೆ.**

**ಮತ್ತಾಯ 7:7-11**
**ಬೇಡಿಕೊಳ್ಳಿರಿ. ನಿಮಗೆ ದೊರೆಯುವುದು ಹುಡುಕಿರಿ. ನಿಮಗೆ ಸಿಕ್ಕುವದು ತಟ್ಟಿರಿ. ನಿಮಗೆ ತೆರೆಯುವದು. ಯಾಕಂದರೆ, ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು. ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ, ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

ನಮ್ಮ ಭೂಲೋಕದ ತಂದೆ-ತಾಯಿಗಿಂತ ದೇವರು ಅಪಾರವಾಗಿ ಉತ್ತಮವಾಗಿದ್ದಾನೆ. ನಮ್ಮ ಅಗತ್ಯತೆಗಳ ಬಗ್ಗೆ ಆತನಿಗೆ ಗೊತ್ತು ಮತ್ತು ಆತನ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನೇ ಕೊಡುತ್ತಾನೆ.

**ಯಾಕೋಬನು 1:5**
**ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ. ಅದು ಅವನಿಗೆ ದೊರಕುವದು. ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ.**

ದೇವರು ಎಲ್ಲರಿಗೂ ಕೊಡುತ್ತಾನೆ. ಆತನು ಧಾರಾಳವಾಗಿ ಕೊಡುತ್ತಾನೆ ಮತ್ತು ತಪ್ಪನ್ನು ಗುರ್ತಿಸದೇ, ಗೊಣಗಾಡದೆ ಅಥವಾ ದೂರು ಹೇಳದೆ ಆತನು ಕೊಡುತ್ತಾನೆ.

**ಕೀರ್ತನೆಗಳು 84:11**
**ಯೆಹೋವ ದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಿ. ಯೆಹೋವನು ಕೃಪೆಯನ್ನೂ, ಘನವನ್ನೂ ಅನುಗ್ರಹಿಸುವವನು. ಆತನು ಸದ್ಭಕ್ತರಿಗೆ ಯಾವ ಶುಭವನ್ನು ದಯಪಾಲಿಸದೆ ಇದ್ದಾನು?**

ದೇವರು ನಮ್ಮ ಸಮೃದ್ಧವಾದ, ಉದಾರವಾದ, ಪರಲೋಕದ ತಂದೆ ಎಂಬುದಾಗಿ, ತಿಳಿದವರಾಗಿ, ಸಹಾಯ ಕೇಳಲೂ, ಕೃಪೆಯ ಸಿಂಹಾಸನದ ಬಳಿಗೆ ಧೈರ್ಯವಾಗಿ ಬರಲೂ ನಮ್ಮನ್ನು ಸ್ವತಂತ್ರಗೊಳಿಸಿದ್ದಾನೆ ಮತ್ತು ಅಗತ್ಯವಿರುವಾಗ ಪೂರೈಸುತ್ತಾನೆ ಮತ್ತು ನಾವು ಕೇಳುವಾಗ ಆತನು ದಯಪಾಲಿಸುತ್ತಾನೆಂಬುದು ನಮಗೆ ತಿಳಿದಿದೆ.

## 4) ನಮ್ಮ ಕರುಣೆಯುಳ್ಳ ತಂದೆ

ದೇವರು, ಪರಲೋಕದ ತಂದೆಯಾಗಿದ್ದಾನೆ. ಕೋಪಗೊಳ್ಳುವುದರಲ್ಲಿ ನಿಧಾನವಾಗಿಯೂ ಮತ್ತು ಕೃಪೆಯಲ್ಲಿ ಸಮೃದ್ಧಿಯುಳ್ಳವನಾಗಿದ್ದಾನೆ. ಸುಲಭವಾಗಿ ಕೋಪಗೊಳ್ಳುವ ಮತ್ತು ಸಹನೆ-ಕಳೆದುಕೊಳ್ಳುವ ಅಥವಾ ಮುಂಗೋಪದ ತಂದೆ-ತಾಯಿಗಳಿಗೆ ಇದು ವ್ಯತಿರಿಕ್ತವಾಗಿರುವುದಾಗಿದೆ.

ನಾವೆಲ್ಲರೂ ತಪ್ಪುಗಳನ್ನು ಮಾಡುತ್ತೇವೆ. ಆದರೆ ಕ್ಷಮಿಸುವಂತಹ ದೇವರು ಒಬ್ಬ ಕರುಣೆಯುಳ್ಳ ಪರಲೋಕದ ತಂದೆಯಾಗಿದ್ದಾನೆ.

**ಕೀರ್ತನೆಗಳು 103:8**
**ಯೆಹೋವನು ಕನಿಕರವೂ, ದಯೆಯೂ, ದೀರ್ಘಶಾಂತಿಯೂ, ಪೂರ್ಣ ಪ್ರೀತಿಯೂ ಉಳ್ಳವನು.**

**ಪ್ರಲಾಪಗಳು 3:22–23**
**ನಾವು ಉಳಿದಿರುವದು ಯೆಹೋವನ ಕರುಣೆಯೇ. ಆತನ ಕೃಪಾವರಗಳು ನಿಂತು ಹೋಗವು. ದಿನದಿನವು ಹೊಸ ಹೊಸದಾಗಿ ಒದಗುತ್ತವೆ. ನಿನ್ನ ಸತ್ಯಸಂಧತೆಯು ದೊಡ್ಡದು.**

ದೇವರು ಕರುಣೆಯುಳ್ಳ ಪರಲೋಕದ ತಂದೆಯಾಗಿದ್ದಾನೆ. ಇನ್ನೊಮ್ಮೆ ನಮಗೆ ಮತ್ತೊಂದು ಅವಕಾಶ ಕೊಡುವವನಾಗಿದ್ದಾನೆ.

ಪರಲೋಕದ ನಮ್ಮ ತಂದೆಯಾದ ದೇವರು ಆತನ ಕರುಣೆಯಲ್ಲಿ, ಜೊತೆಗೆ ಪ್ರೀತಿಯಿಂದ ತಿದ್ದುತ್ತಾನೆ ಮತ್ತು ನಮ್ಮನ್ನು ಶಿಸ್ತುಗೊಳಿಸುತ್ತಾನೆ. ನಮ್ಮೊಂದಿಗಿನ ಆತನ ಎಲ್ಲಾ ಶಿಸ್ತು ಕ್ರಮಗಳಲ್ಲಿ ಆತನು ಅನುಕಂಪವುಳ್ಳವನಾಗಿದ್ದಾನೆ ಮತ್ತು ನಮ್ಮ ಯೋಗಕ್ಷೇಮ ಹುಡುಕುತ್ತಾನೆ. ನಾವು ಇದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸೋಣ.

## 5) ಒಬ್ಬ ವಿಮೋಚನೆಗೊಳಿಸುವ ತಂದೆ

ಪರಲೋಕದ ನಮ್ಮ ತಂದೆಯಾದ ದೇವರು ಒಬ್ಬ ಬಿಡುಗಡೆಗೊಳಿಸುವ ತಂದೆ. ಆತನು ಮಾಡುವಂತದ್ದೆಲ್ಲದರಲ್ಲಿ ಸ್ವತಂತ್ರಗೊಳಿಸುತ್ತಾನೆ. ಎಲ್ಲವೂ ಕಳೆದು ಹೋಯಿತು ಎಂಬುದಾಗಿ ಕಂಡಾಗಲೂ ಆತನು ವಿಮೋಚನೆಗೊಳಿಸಲು – ಚೇತರಿಕೆ ನೀಡಲೂ, ಪುನಃಶ್ಚೇತನ ಕೊಡಲೂ, ತಿರುಗಿ ಕಟ್ಟಲೂ, ಮತ್ತು ಉನ್ನತವಾದ ಮಹಿಮೆಗೆ ನಮ್ಮನ್ನು ಏರಿಸಲೂ ಮಾರ್ಗವನ್ನು ನೋಡುತ್ತಾನೆ. ಇದು ಕೊನೆಯ ಅವಕಾಶ ಕೊಡುವಂತಹ ಮತ್ತು ನಮ್ಮೊಂದಿಗೆ ಅವರ ಸಂಬಂಧವನ್ನು ಕೊನೆಗಾಣಿಸಿಕೊಳ್ಳುವಂತಹ ತಂದೆ–ತಾಯಿಗಳಿಗಿಂತ ವ್ಯತಿರಿಕ್ತವಾಗಿದೆ.

**ಯೆಶಾಯ 63:16**
**ನೀನೇ ನಮ್ಮ ಪಿತೃವಾಗಿದ್ದೀಯಲ್ಲಾ. ಅಬ್ರಹಾಮನು ನಮ್ಮನ್ನರಿಯನು. ಇಸ್ರಾಯೇಲನು ನಮ್ಮನ್ನು ಗುರುತಿಸನು. ಯೆಹೋವಾ! ನೀನೇ ನಮ್ಮ ಪಿತೃ. ಆದಿಯಿಂದಲೂ ನಮ್ಮ ವಿಮೋಚಕನು ಅನ್ನಿಸಿಕೊಂಡಿದ್ದೀ.**

ಇದರ ಕುರಿತು ಹೆಚ್ಚಿನ ಮಾಹಿತಿಗಾಗಿ ನಮ್ಮ ಏ.ಪಿ.ಸಿ. ಪ್ರಕಾಶನ: ದೇವರ ವಿಮೋಚನಾ ಹೃದಯ ಎಂಬ ಪುಸ್ತಕ ನೋಡಿರಿ.

## 6) ಅಂಗೀಕಾರದ ತಂದೆ

ಪರಲೋಕದ ತಂದೆಯಾದ ನಮ್ಮ ದೇವರು ಅಂಗೀಕರಿಸುವ ತಂದೆಯಾಗಿದ್ದಾನೆ. ಆತನು ನಮ್ಮನ್ನು ಅಂಗೀಕರಿಸುತ್ತಾನೆ, ನಮ್ಮಲ್ಲಿ ಆನಂದಿಸುತ್ತಾನೆ ಮತ್ತು ಪ್ರೀತಿಯ ಕಣ್ಣಿನಿಂದ ನಮ್ಮನ್ನು ನೋಡುತ್ತಾನೆ. ಇದು ನಮ್ಮನ್ನು ಯಾವಾಗಲೂ ಕೀಳಾಗಿ ನೋಡುವ, ನಮ್ಮನ್ನು ಕೆಳಮಟ್ಟದಲ್ಲಿ ಕಾಣುವ, ಅನರ್ಹರು, ಅಯೋಗ್ಯರೆಂಬುದಾಗಿ ನೋಡುವ, ಯಾವಾಗಲೂ ಸಂಶಯ ಪಡುವ ಮತ್ತು ನಮ್ಮನ್ನೂ ಅಂಗೀಕರಿಸದಂತಹ ತಂದೆ–ತಾಯಿಗಳಿಗಿಂತ ವ್ಯತಿರಿಕ್ತವಾಗಿದೆ.

**ಎಫೆಸದವರಿಗೆ 1:4–6**

**ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು**

ನಾವು ತುಂಬಾ ಪ್ರೀತಿಸಲ್ಪಟ್ಟಿದ್ದೇವೆ ಮತ್ತು ಆತನ ದೃಷ್ಟಿಯಲ್ಲಿ ಅಂಗೀಕರಿಸಲ್ಪಟ್ಟಿರುವುದರಿಂದ ಆದಾಗ್ಯೂ ಆನಂದದಿಂದ ಮತ್ತು ಉಚಿತವಾಗಿ. ಅಲ್ಲಿಗೆ ಯಾವಾಗಲೂ ನಮಗೆ ಸ್ವಾಗತವಿರುತ್ತದೆಂಬುದನ್ನು ತಿಳಿದವರಾಗಿ ಆತನ ಪ್ರಸನ್ನತೆಗೆ ಪೂಜ್ಯತೆಯೊಡನೆ ಪ್ರವೇಶಿಸುತ್ತೇವೆಂಬುದು ನಮಗೆ ತಿಳಿದಿದೆ. ನಮ್ಮಲ್ಲಿ ಆನಂದಿಸುವ ಮತ್ತು ನಾವು ಸಹ ಆತನಲ್ಲಿ ಆನಂದಿಸಬೇಕೆಂಬುದಾಗಿ ಬಯಸುವ ಪರಲೋಕದ ತಂದೆ ಆತನಾಗಿದ್ದಾನೆ.

ನಾವು ಇರುವಂತಹ ರೀತಿಯಲ್ಲಿ ಮತ್ತು ನಮ್ಮನ್ನು ಕ್ರಿಸ್ತನಲ್ಲಿ ಏನಾಗಿ ಆತನು ಮಾಡಿರುವಂತಹ ರೀತಿಯ್ಲಲಿ ನಾವು ಅಂಗೀಕರಿಸಲ್ಪಟ್ಟಿದ್ದೇವೆ. ಅಂಗೀಕರಿಸಲ್ಪಡಬೇಕು ಅಥವಾ ಮೆಚ್ಚುಗೆ ಹೊಂದಬೇಕು ಎಂಬ ಕ್ರಮದಲ್ಲಿ ''ಸಾಧಿಸಬೇಕು'' ಎಂಬ ಅಗತ್ಯವಿಲ್ಲ. ನಾವು ಅಂಗೀಕರಿಸಲ್ಪಟ್ಟಿದ್ದೇವೆ. ಎಲ್ಲಾ ತಿರಸ್ಕಾರದ ಪ್ರಜ್ಞೆಯು ಹೊರಟು ಹೋಗಿದೆ!

## 7) ಸಮೃದ್ಧವಾದ ಕೃಪೆಯುಳ್ಳ ತಂದೆ

ಪರಲೋಕದ ತಂದೆಯು ದೇವರಾಗಿದ್ದಾನೆ, ನಾವು ಹೊಂದಲೂ ಅರ್ಹರಾಗಿರದಿದ್ದರೂ ನಮ್ಮ ಮೇಲೆ ಸಂಪೂರ್ಣ ಕೃಪೆಯಿಂದ ಅದ್ದೂರಿಯಾಗಿದ್ದಾನೆ.

ಸುಮ್ಮನೆ ಯಾಕಂದರೆ ನಮ್ಮ ಕಡೆಗೆ ಆತನನ್ನು ಕರುಣೆ ಮತ್ತು ದಯೆಯುಳ್ಳವನಾಗಿದ್ದಾನೆ. ಇದು ಎಲ್ಲವೂ ಸರಿಯಾದ ಕ್ರಮದಲ್ಲಿ ಸಂಪಾದಿಸಿಕೊಳ್ಳಬೇಕು ಮತ್ತು ನಾವು ಹೊಂದಲೂ ಅರ್ಹರಾಗಿರುವುದನ್ನು ಮಾತ್ರ ಹೊಂದಿಕೊಳ್ಳುವಂತೆ ಮಾಡುವ ಒಬ್ಬ ದುಡಿಸುವವನಂತಿರುವ ತಂದೆ-ತಾಯಿಗಳಿಗಿಂತ ವ್ಯತಿರಿಕ್ತವಾಗಿದೆ.

ದುಡಿಸುವವರಂತ ತಂದೆ-ತಾಯಿಗಳು, ಅಧಿಕ ನಿರೀಕ್ಷೆಯೊಡನೆ, ನಾವು ಎಂದಿಗೂ ಸಾಕಷ್ಟು ಉತ್ತಮರಾದವರಲ್ಲ ಎಂಬುದಾಗಿ ಅಂದುಕೊಳ್ಳುವಂತೆ ಮಾಡುತ್ತಾರೆ ಮತ್ತು ಸೋಲುಗಳ ಭಾವನೆಗಳನ್ನು ನಮ್ಮಲ್ಲಿ ಬಿಡುತ್ತಾರೆ. ನಾವು ಅವರ ನಿರೀಕ್ಷೆಗಳನ್ನು ಮೀರಿಸಿದರೆ ಮಾತ್ರ ಅಂಗೀಕಾರ ಪಡೆದುಕೊಳ್ಳುತ್ತೇವೆ.

ದೇವರ ಕೃಪೆಯು ಇಂತಹ ತಿಳುವಳಿಕೆ ನಮಗೆ ಇಲ್ಲವಾದರೆ, ನಾವು ಸೇವೆಯಲ್ಲಿ, ಸಭೆಯಲ್ಲಿ ದೇವರಿಗಾಗಿ ನಾವು ಮಾಡುವಂತಹ ಕೆಲಸಗಳು-ಸಂಗತಿಗಳ ಆಧಾರದ ಮೇಲೆ ಸಂಬಂಧಿಸಿಕೊಳ್ಳಲೂ ಒಲವು ತೋರುತ್ತೇವೆ. ಅಧಿಕವಾಗಿ ನಾವು "ಕೆಲಸ ಮಾಡಿದರೆ" ದೇವರಿಂದ ಅಂಗೀಕರಿಸಲ್ಪಟ್ಟಿದ್ದೇವೆ ಎಂಬುದಾಗಿ ಅಂದುಕೊಳ್ಳುತ್ತೇವೆ. ನಾವು ಗುರುತಿಸುವಿಕೆ ಹುಡುಕುತ್ತೇವೆ ಮತ್ತು ನಾವು ಮಾಡುವಂತಹ ಎಲ್ಲವುಗಳಿಗಾಗಿ ಚಪ್ಪಾಳೆ ಬಯಸುತ್ತೇವೆ ಮತ್ತು ಇದರ ಮೇಲೆ ನಮ್ಮ ಗುರುತು. ಆಧರಿಸುತ್ತೇವೆ. – ಯಾಕಂದರೆ ನಾವು ಕೃಪೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ.

ತಂದೆಯಾದ ದೇವರು ಸಮೃದ್ಧಿಯಾದ ಕೃಪೆಯುಳ್ಳವನು ಎಂಬುದನ್ನು ಅರಿತಾಗ, ನಾವು ಇತರರಿಗೂ ಕೃಪೆಯುಳ್ಳವರಾಗುತ್ತೇವೆ. ಯಾಕಂದರೆ, ನಮ್ಮ ಮೇಲೆ ದಯಪಾಲಿಸಿದ ದೇವರ ಕೃಪೆಯನ್ನು ನಾವು ಮೌಲ್ಯವುಳ್ಳದೆಂದು ನೋಡುತ್ತೇವೆ.

**ಎಫೆಸದವರಿಗೆ 2:7**

**ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

**ರೋಮಾಪುರದವರಿಗೆ 5:17**

**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವುದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ, ನೀತಿಯೆಂಬ ವರವನ್ನೂ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ!**

## 8) ಅಧಿಕಾರ ನೀಡುವ ತಂದೆ

ದೇವರು, ನಮ್ಮ ಪರಲೋಕದ ತಂದೆಯಾಗಿದ್ದಾನೆ. ನಮಗೆ ಅಧಿಕಾರ ನೀಡುತ್ತಾನೆ. ನಮ್ಮಲ್ಲಿರುವ ಉತ್ತಮವಾದದ್ದನ್ನು ಆತನು ನೋಡುತ್ತಾನೆ ಮತ್ತು ನಾವು ಉತ್ತಮವಾಗಿರಬೇಕೆಂದು ಆತನು ರಚಿಸಿದ ರೀತಿ ಶಕ್ತಗೊಳಿಸುತ್ತಾನೆ. ಆತನಲ್ಲಿ ಇರುವಂತಹ ಪದಾರ್ಥಗಳೊಡನೆ ಮತ್ತು ಆತನ ರಾಜ್ಯದ ಕೆಲಸಕ್ಕಾಗಿ ನಮ್ಮ ನಿಯೋಜನೆಯಲ್ಲಿ ನಮ್ಮನ್ನು ನಂಬುತ್ತಾನೆ. ಇದು ನಮ್ಮ ಮೇಲೆ ಅಪನಂಬಿಕೆಯಿಡುವ, ನಾವು ಮಾಡಲೂ ಅಸಮರ್ಥರು ಎಂಬುದಾಗಿ ಆಲೋಚಿಸುವ, ನಂಬಲರ್ಹರಲ್ಲ ಮತ್ತು ಯಾವ ಉಪಯೋಗಕ್ಕೂ ಬರುವುದಿಲ್ಲ ಎಂಬುದಾಗಿ ಯೋಚಿಸುವ ನಮ್ಮ ತಂದೆ-ತಾಯಿಗಿಂತ ವ್ಯತಿರಿಕ್ತವಾಗಿದೆ.

ನಮ್ಮ ಪರಲೋಕದ ತಂದೆ ನಮ್ಮ ಕುರಿತು ಒಳ್ಳೆಯ ಯೋಚನೆಗಳನ್ನು ಮಾಡುತ್ತಾನೆ ಮತ್ತು ನಮಗಾಗಿ ಉತ್ತಮ ಯೋಜನೆಗಳನ್ನು ಹೊಂದಿದ್ದಾನೆ.

**ಲೂಕ 12:32**
**ಚಿಕ್ಕ ಹಿಂಡೇ ಹೆದರಬೇಡ. ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ.**

**ಕೊಲೊಸ್ಸೆಯವರಿಗೆ 1:12**
**ಬೆಳಕಿನ ರಾಜ್ಯದೊಳಗೆ ದೇವ ಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವುದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾಸ್ತುತಿ ಮಾಡುವವರಾಗಿರಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇವೆ.**

## 9) ಅನಂತ ತಂದೆ

ಪರಲೋಕದ ನಮ್ಮ ತಂದೆಯಾದ ದೇವರು ಅಳತೆಗೆ ಮೀರಿದವನಾಗಿದ್ದಾನೆ ಮತ್ತು ನಮಗಾಗಿ, ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ಅಳತೆಗೆ ಮೀರಿದ್ದನ್ನು ಮಾಡುತ್ತಾನೆ. ಇದು, ನಮ್ಮ ಇಹಲೋಕದ ತಂದೆ-ತಾಯಿಯರು, ಅವರು ಮಾಡುವಂತದ್ದರಲ್ಲಿ ಅವರು ಒದಗಿಸುವಂತದ್ದರಲ್ಲಿ ಮತ್ತು ಅವರು ನಮಗೆ ಏನಾಗಿರಬೇಕೆಂಬುದರಲ್ಲಿ ಇತಿಮಿತಿಯಲ್ಲಿರುವಂತಹ ಅವರಿಗಿಂತ ವ್ಯತಿರಿಕ್ತವಾಗಿದೆ.

- ಆತನಿಗೆ ಎಂದಿಗೂ ವಯಸ್ಸಾಗುವುದಿಲ್ಲ (ಕೀರ್ತನೆಗಳು 102:26)
- ಆತನು ಎಂದಿಗೂ ದಣಿಯುವುದಿಲ್ಲ ಅಥವಾ ಸುತ್ತಾಗುವುದಿಲ್ಲ (ಯೆಶಾಯ 40:28)
- ಆತನು ಎಂದಿಗೂ ಜ್ಞಾನವಿಲ್ಲದವನಾಗುವುದಿಲ್ಲ (ಯೆಶಾಯ 40:28)

**ಎಫೆಸದವರಿಗೆ 3:20**

**ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ, ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ.**

ಆತನು "ತಂದೆ" ಮತ್ತು "ತಾಯಿ' ಇಬ್ಬರೂ ಆಗಿದ್ದಾನೆ. ಆದ್ದರಿಂದ ತಂದೆಯಾದ ದೇವರ "ತಾಯಿಯ ಹೃದಯ" – ಕಾಳಜಿ ವಹಿಸುವ, ಪೋಷಿಸುವ, ಮತ್ತು ವಾತ್ಸಲ್ಯದ ಹೃದಯ ಇದೆ ಎಂಬುದಾಗಿ ನೀವು ಹೇಳಬಹುದಾಗಿದೆ.

**ಯೆಶಾಯ 49:14-16**

**ಚಿಯೋನ್ ನಗರಿಯಾದರೋ – ಯೆಹೋವನು ನನ್ನನ್ನು ಕೈ ಬಿಟ್ಟಿದ್ದಾನೆ. ಕರ್ತನು ನನ್ನನ್ನು ಮರೆತಿದ್ದಾನಲ್ಲಾ ಅಂದುಕೊಂಡಳು. ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ. ಇಗೋ ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ. ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ.**

## ಸೈತಾನನ ಸುಳ್ಳು ಮತ್ತು ಸ್ವಯಂ-ವಂಚನೆಗಳನ್ನು ತಿರಸ್ಕರಿಸುವುದು

ದೇವರ ಕುರಿತು ನಾವು ರಚಿಸಿಕೊಂಡಂತಹ ತಪ್ಪಾದ ಚಿತ್ರವು ಸ್ವಯಂ – ವಂಚನೆಯಾಗಿದೆ. ದೇವರು ಯಾರಾಗಿದ್ದಾನೆಂಬುದರ ಕುರಿತು ನಮ್ಮನ್ನು ಮೋಸಗೊಳಿಸಿಕೊಳ್ಳುತ್ತೇವೆ.

ದುರಾತ್ಮನು ನಮಗೆ ಸುಳ್ಳು ಹೇಳುತ್ತಾನೆ ಮತ್ತು ದೇವರ ಒಂದು ತಪ್ಪಾದ ಚಿತ್ರ ಹೊಂದಿರಬೇಕೆಂಬುದಾಗಿ ಹಿಡಿದಿಟ್ಟುಕೊಳ್ಳುತ್ತಾನೆ.

ದೇವರ ಕುರಿತು ನಮಲ್ಲಿ ಕೆಲವರು ಹೊಂದಿರುವಂತಹ ಹಲವು ವಿರುದ್ಧವಾದ ಗ್ರಹಿಕೆಗಳನ್ನು ಹೊಂದಿರುವಂತದ್ದನ್ನು ನೋಡೋಣ.

1. ಊಹಿಸಿ ಹೇಳಲಾಗದಂತಹ ದೇವರು ಪರ್ಯಾಯವಾಗಿ ಬದಲಾಗದ ಪರಲೋಕದ ತಂದೆ.
2. ವಿಶ್ವಾಸಾರ್ಹವಲ್ಲದ ದೇವರು ಬದಲಾಗಿ ವಿಫಲವಾಗದ ಪರಲೋಕದ ತಂದೆ.
3. ನಮಗೆ ಹೇಗಾದರೂ ಕೊಡಬೇಕೆಂಬುದಾಗಿ ಮುನವರಿಕೆಗೊಂಡ ಒಬ್ಬ ಜಿಪುಣನಾದ ದೇವರು ಪರ್ಯಾಯವಾಗಿ ಸಮೃದ್ಧ ಮತ್ತು ಉದಾರತೆಯ ತಂದೆ.

4. ನಮಗೆ ಬೆಂಕಿಯೊಡನೆ ಮತ್ತು ಗಂಧಕಗಳೊಡನೆ ನ್ಯಾಯ ತೀರಿಸಬೇಕೆಂದು ಕಾಯುತ್ತಿರುವ ದೇವರು ಪರ್ಯಾಯವಾಗಿ ಒಬ್ಬ ಕರುಣೆಯುಳ್ಳ ತಂದೆ.

5. ನಮಗೆ ವಿರೋಧವಾಗಿ ನಮ್ಮ ಹಳೆಯದನ್ನು ಹಿಡಿದುಕೊಂಡು ನಾವು ಮಾಡಿದಂತಹ ಎಲ್ಲಾ ತಪ್ಪುಗಳ ಲೆಕ್ಕವನ್ನು ಇಟ್ಟುಕೊಂಡಿರುವ ದೇವರು ಪರ್ಯಾಯವಾಗಿ ವಿಮೋಚನೆಗೊಳಿಸುವ ತಂದೆ.

6. ಖಂಡಿಸುವ ದೇವರು ಬದಲಿಗೆ ಅಂಗೀಕರಿಸುವ ತಂದೆ.

7. ತೃಪ್ತಿಗೊಳಿಸಲೂ ಕಷ್ಟಕರವಾಗಿರುವಂತಹ ಮತ್ತು ಎಲ್ಲಾವೂ ಸಂಪಾದಿಸಲ್ಪಡಬೇಕು ಎಂಬುದಾಗಿ ವಿನಂತಿಸುವ ದೇವರು ಪರ್ಯಾಯವಾಗಿ ಸಮೃದ್ಧವಾದ ಕೃಪೆಯುಳ್ಳ ತಂದೆ.

8. ನಾವು ಆತನೊಂದಿಗೆ ಪಾಲುಗಾರರಾಗುವುದನ್ನು ಬಯಸದ ದೇವರು ಪರ್ಯಾಯವಾಗಿ ದೇವರು ಅಪರಿಮಿತನಾದ ತಂದೆ.

9. ನಮಗಾಗಿ ಮಾಡುವಂತಹವುಗಳಲ್ಲಿ ಇತಿಮಿತಿಯುಳ್ಳ ದೇವರು ಪರ್ಯಾಯವಾಗಿ ಅನಂತನಾದ ತಂದೆ.

ನಮ್ಮ ಸ್ವಂತ ಜೀವಿತದ ಮೇಲೆ ಸತ್ಯವನ್ನು ಘೋಷಿಸಲು ಮತ್ತು ಪ್ರಾರ್ಥಿಸಲು ಸಮಯ ತೆಗೆದುಕೊಳ್ಳಿರಿ. ಆದ್ದರಿಂದ ನಿಮ್ಮ ಮನಸ್ಸು ಮತ್ತು ಹೃದಯದಲ್ಲಿ ಪರಲೋಕದ ತಂದೆಯ ಒಂದು ನಿಜವಾದ ಮತ್ತ ಸತ್ಯವೇದಕ್ಕನುಸಾರವಾದ ಚಿತ್ರವನ್ನು ರಚಿಸಿಕೊಳ್ಳಬಹುದು.

*ಪ್ರೀತಿಯ ಪರಲೋಕದ ತಂದೆಯೇ, ನೀವು ನಿಜವಾಗಿ ಏನಾಗಿದ್ದೀರಾ ಮತ್ತು ನಿಮ್ಮ ಕುರಿತು ವಾಕ್ಯವು ನನಗೆ ಪ್ರಕಟಿಸಿದಂತವುಗಳಿಗಾಗಿ ವಂದಿಸುತ್ತೇನೆ. ಇಂದು ನಿಮ್ಮ ಕುರಿತು ನಾನು ಹೊಂದಿದಂತಹ ತಪ್ಪು ಕಲ್ಪನೆಗಳು ಮತ್ತು ಅಭಿಪ್ರಾಯಗಳು, ತಪ್ಪು ವಿಚಾರಗಳನ್ನು ತಿರಸ್ಕರಿಸುತ್ತೇನೆ ಮತ್ತು ನಿನ್ನ ವಾಕ್ಯದಲ್ಲಿ ಪ್ರಸ್ತುತ ಪಡಿಸಿರುವ ಸತ್ಯವನ್ನು ಪಡೆದುಕೊಳ್ಳುತ್ತೇನೆ. ಎಲ್ಲಾ ಸಮಯದಲ್ಲಿ ನಿಮ್ಮ ಮೇಲೆ ಆತುಕೊಳ್ಳುವ ಮತ್ತು ಭರವಸೆಯಿಡುವ ಬದಲಾಗದ ಪರಲೋಕದ ತಂದೆ ಎಂಬುದಾಗಿ ಒಪ್ಪಿಕೊಳ್ಳುತ್ತೇನೆ ಮತ್ತು ವಂದಿಸುತ್ತೇನೆ. ನೀನು ನಿನ್ನನ್ನು ಎಂದಿಗೂ ತೊರೆಯುವುದಿಲ್ಲ, ಕೈ ಬಿಡುವುದಿಲ್ಲ ಅಥವಾ ನನ್ನನ್ನು ನಿರಾಸೆಗೊಳಿಸುವುದಿಲ್ಲ. ನೀನು ನನ್ನ ಸಮೃದ್ಧವಾದ ಮತ್ತು ಉದಾರತೆಯುಳ್ಳ ತಂದೆಯಾಗಿದ್ದೀ, ನನಗೆ ಯಾವಾಗಲೂ ಉದಾರವಾಗಿ ಕೊಡುತ್ತೀ, ಮತ್ತು ನನ್ನಿಂದ ಯಾವುದೇ ಒಳ್ಳೆಯ ಪದಾರ್ಥಗಳನ್ನು*

*ಹಿಡಿದಿಟ್ಟುಕೊಳ್ಳುವುದಿಲ್ಲವೆಂಬುದಾಗಿ ನಾನು ಅಂಗೀಕರಿಸುತ್ತೇನೆ ಮತ್ತು ವಂದಿಸುತ್ತೇನೆ. ನೀನು ಕರುಣೆಯುಳ್ಳ ತಂದೆಯಾಗಿದ್ದಿ, ಯಾವಾಗಲೂ ನನ್ನ ಪಾಪಗಳು, ಸೋಲುಗಳು ಮತ್ತು ತಪ್ಪುಗಳನ್ನು ಕ್ಷಮಿಸುವವನಾಗಿದ್ದೀ ಮತ್ತು ಕನಿಕರವುಳ್ಳವನಾಗಿದ್ದೀ ಎಂಬುದಾಗಿ ಒಪ್ಪಿಕೊಳ್ಳುತ್ತೇನೆ ಮತ್ತು ವಂದಿಸುತ್ತೇನೆ. ನೀನು ವಿಮೋಚನೆಯ ತಂದೆಯಾಗಿದ್ದೀ, ನಾನು ಅಸ್ತವ್ಯಸ್ತಗೊಳಿಸಿದಾಗ, ನನ್ನನ್ನು ಮೇಲೆತ್ತಿ ಪುನಃ ಸ್ಥಾಪಿಸಿ, ಪುನಃ ಕಟ್ಟಿ ಮರಳಿ ಪಡೆಯುವಂತೆ ಮಾಡುತ್ತೀ ಎಂಬುದಾಗಿ ಅಂಗೀಕರಿಸುತ್ತೇನೆ ಮತ್ತು ವಂದಿಸುತ್ತೇನೆ. ನೀನು ನನ್ನ ಅಂಗೀಕಾರದ ತಂದೆಯಾಗಿದ್ದೀ, ನಾನು ನಿನ್ನವನೆಂದು ಆನಂದಿಸುತ್ತೀ ಮತ್ತು ನಿನ್ನ ಪ್ರಸನ್ನತೆಗೆ ಯಾವಾಗಲೂ ಸ್ವಾಗತಿಸುತ್ತೀ ಎಂಬುದಾಗಿ ಅಂಗೀಕರಿಸುತ್ತೇನೆ ಮತ್ತು ವಂದಿಸುತ್ತೇನೆ. ನೀನು ಸಮೃದ್ಧಿಯಾದ ಕೃಪೆಯುಳ್ಳ ನನ್ನ ತಂದೆಯಾಗಿದ್ದೀ. ನಾನು ಹೊಂದಿಕೊಳ್ಳಲಾಗದಂತಹ ಮತ್ತು ಸಂಪಾದಿಸಲಾಗದಂತಹ ವರಗಳು ಮತ್ತು ಆಶೀರ್ವಾದಗಳು, ಸಂಪತ್ತನ್ನು ಕೊಟ್ಟಿದ್ದೀ ಎಂದು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ವಂದಿಸುತ್ತೇನೆ. ನೀನು ಅನಂತವಾದ ನನ್ನ ತಂದೆಯಾಗಿದ್ದಿ. ನಾನು ಹೊಂದಿರುವ ಯಾವುದೇ ಅಗತ್ಯಗಳಿಗೂ ಅಪರಿಮಿತವಾಗಿದ್ದೀ. ಅಧಿಕವಾದ ಬಲದಲ್ಲಿ ಅಪರಿಮಿತವಾಗಿದ್ದೀ, ನಾನು ಎದುರಿಸುತ್ತಿರುವಂತಹ ಯಾವುದೇ ಪರಿಸ್ಥಿತಿಗಿಂತಲೂ ಅಧಿಕವಾಗಿ ಜ್ಞಾನವಂತನಾಗಿದ್ದಿ ಎಂದು ಒಪ್ಪಿಕೊಳ್ಳುತ್ತೇನೆ ಮತ್ತು ವಂದಿಸುತ್ತೇನೆ. ನಾನು ನಿನ್ನ ಪ್ರೀತಿಸುತ್ತೇನೆ ಮತ್ತು ನಿನ್ನಲ್ಲಿ ಭರವಸೆಯಿಡುತ್ತೇನೆ. ನಿಮ್ಮ ಮಗುವಾಗಿರುವುದರ ಅವಕಾಶ ಮತ್ತು ಸಂತೋಷಕ್ಕಾಗಿ ವಂದನೆಗಳು. ಯೇಸುವಿನ ನಾಮದಲ್ಲಿ!*

## ಪ್ರತಿಫಲನ

1. ಇಂದು ನಮ್ಮ ಪರಲೋಕದ ತಂದೆಯ ಇಂತಹ ಗುಣಲಕ್ಷಣಗಳಲ್ಲಿ ಯಾವುದು ತುಂಬಾ ಅನ್ವಯವುಳ್ಳದ್ದಾಗಿ ಕಾಣಿಸುತ್ತದೆ ಮತ್ತು ಏಕೆ?

i) ಬದಲಾಗದಂತಹ ಪರಲೋಕದ ತಂದೆ

..........................................................................................

..........................................................................................

ii) ವಿಫಲನಾಗದ ಪರಲೋಕದ ತಂದೆ

..........................................................................................

..........................................................................................

iii) ಸಮೃದ್ಧ ಮತ್ತು ಉದಾರತೆಯ ತಂದೆ

..........................................................................................

..........................................................................................

iv) ಕರುಣೆಯುಳ್ಳ ತಂದೆ

..........................................................................................

..........................................................................................

v) ವಿಮೋಚನೆಗೊಳಿಸುವ ತಂದೆ

..........................................................................................

..........................................................................................

vi) ಅಂಗೀಕಾರದ ತಂದೆ

..........................................................................................

..........................................................................................

vii) ಸಮೃದ್ಧವಾದ ಕೃಪೆಯುಳ್ಳ ತಂದೆ

..........................................................................................

..........................................................................................

viii) ಅಧಿಕಾರ ನೀಡುವ ತಂದೆ

..........................................................................................

..........................................................................................

ix) ಅಪರಿಮಿತವಾದ ತಂದೆ

..........................................................................................

..........................................................................................

2. ನಾವು ವಿವರಿಸಿದಂತಹ ಇಂತಹ ಆಕಾರಗಳ ದೃಷ್ಟಿಯಲ್ಲಿ ನಿಮ್ಮ ಪರಲೋಕದ ತಂದೆಯೊಂದಿಗೆ ನಿಮ್ಮ ಸಂಬಂಧವು ಬದಲಾಗಿದೆಯಾ ಮತ್ತು ನಿಮ್ಮ ಅರ್ಥವೇನು?

........................................................................................

........................................................................................

........................................................................................

........................................................................................

........................................................................................

........................................................................................

........................................................................................

........................................................................................

........................................................................................

........................................................................................

# 4

# ತಂದೆಯ ಪ್ರೀತಿಯನ್ನು ಪಡೆದುಕೊಳ್ಳುವುದು

## ದೇವರ ಬಗೆಯ ಪ್ರೀತಿ

ದೇವರ ವಿಧದ ಪ್ರೀತಿಯನ್ನು ವಿವರಿಸಲೂ ಸತ್ಯವೇದವು ಗ್ರೀಕ್ ಪದವಾದ "ಅಗಾಪೆ"(agape) ಯನ್ನು ಉಪಯೋಗಿಸಿದೆ. 1 ಕೊರಿಂಥದವರಿಗೆ 13ನೇ ಅಧ್ಯಾಯವು ದೇವರು ಹೊಂದಿರುವಂತಹ ಇಂತಹ ಬಗೆಯ ಪ್ರೀತಿ ಮತ್ತು ನಾವು ಅದರಲ್ಲಿ ನಡೆಯಬೇಕೆಂಬುದರ ಸಂಕ್ಷಿಪ್ತ ನೋಟಗಳನ್ನು ಕೊಡುತ್ತದೆ. ದೇವರು ನಮಗಾಗಿ ಹೊಂದಿರುವಂತಹ ಪ್ರೀತಿಯ ವಿವರಣೆಯ ದೃಷ್ಟಿಕೋನದೊಡನೆ ಇವುಗಳನ್ನು ಓದೋಣ.

**1 ಕೊರಿಂಥದವರಿಗೆ 13:4–8**

**ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು, ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವದಿಲ್ಲ, ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ. ಸಿಟ್ಟುಗೊಳ್ಳುವದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ. ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ.**

- ದೇವರು ಪ್ರೀತಿ ಸ್ವರೂಪಿಯು (1 ಯೊಹಾನ 4:8)
- ದೇವರು ನಮ್ಮ ಕಡೆಗೆ ತಾಳ್ಮೆಯುಳ್ಳವನು ಮತ್ತು ದಯೆ ತೋರಿಸುವವನು
- ದೇವರು ನಮ್ಮ ಕಡೆಗೆ ಅಸಭ್ಯನಲ್ಲ
- ದೇವರು "ಸ್ವಾರ್ಥಿಯಲ್ಲ" ಆದರೆ ನಮ್ಮಲ್ಲಿ ಸತ್ಯವಾಗಿ ಆಸಕ್ತಿಯುಳ್ಳವನಾಗಿದ್ದಾನೆ.
- ದೇವರು ಸುಲಭವಾಗಿ ಉಬ್ಬಿಕೊಳ್ಳುವವನಲ್ಲ.
- ದೇವರು ನಮ್ಮ ಕಡೆಗೆ ಕೆಟ್ಟದಾಗಿ ಯೋಚಿಸುವುದಿಲ್ಲ.
- ದೇವರು ಪಾಪದಲ್ಲಿ ಸಂತೋಷಪಡುವುದಿಲ್ಲ.

- ದೇವರು ಸತ್ಯದಲ್ಲಿ ಆನಂದಿಸುತ್ತಾನೆ – ನಾವು ಸತ್ಯದಲ್ಲಿ ನಡೆಯುವಾಗ
- ದೇವರು ಎಲ್ಲಾ ಸಂಗತಿಗಳೊಡನೆ ಸಹಿಸಿಕೊಳ್ಳುತ್ತಾನೆ. (ತಾಳಿಕೊಳ್ಳುತ್ತಾನೆ)
- ದೇವರು "ನಂಬುತ್ತಾನೆ ಮತ್ತು ನಿರೀಕ್ಷಿಸುತ್ತಾನೆ" (ಕೆಲಸ ಕಾರ್ಯ ಮಾಡಲು ಒಲವು ಮತ್ತು ಮನವೊಲಿಸುತ್ತದೆ) ನಮಗಾಗಿ ಉತ್ತಮವಾದದು.
- ನಮಗಾಗಿ ಆತನ ಪ್ರೀತಿಯಲ್ಲಿ ದೇವರು ಸಹಿಸಿಕೊಳ್ಳುತ್ತಾನೆ. ಆತನ ಪ್ರೀತಿಯು ಸಹಿಸಿಕೊಳ್ಳುತ್ತದೆ. ಈ ಪ್ರೀತಿಯು ಕೊನೆಗೊಳ್ಳುವುದಿಲ್ಲ ಅಥವಾ ತಣ್ಣಗಾಗುವುದಿಲ್ಲ, ಕಡಮೆಯಾಗುವುದಿಲ್ಲ. ಈ ಪ್ರೀತಿಯು ಕೊನೆಗೊಳ್ಳುವುದಿಲ್ಲ, ಮತ್ತು ಕೊನೆಗೊಳ್ಳುವುದಿಲ್ಲ. ಇದು ನಿತ್ಯವಾದದು...ಯೆರೆಮೀಯ 31:3 *"ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ. ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ" ಎಂಬುದಾಗಿ ಆತನು ಹೇಳಿದಂತೆಯೇ."*
- ದೇವರು ಎಂದಿಗೂ ವಿಫಲವಾಗುವುದಿಲ್ಲ. ನಮಗಾಗಿರುವ ಆತನ ಪ್ರೀತಿಯು ಬಲಹೀನಗೊಳ್ಳುವುದಿಲ್ಲ ಅಥವಾ ವಿಫಲವಾಗುವುದಿಲ್ಲ.

ಈ ರೀತಿಯಾಗಿ ದೇವರು ನಮ್ಮನ್ನು ಪ್ರೀತಿಸುತ್ತಾನೆ. ಇಂತಹ ರೀತಿಯಲ್ಲಿ ದೇವರಿಂದ ನಾವು ಪ್ರೀತಿಸಲ್ಪಟ್ಟಿದ್ದೇವೆ ಎಂಬುದು ನಮ್ಮಲ್ಲಿ ಆಳವಾಗಿ ನೆಲೆಯೂರಬೇಕು, ಇದನ್ನು ಒಪ್ಪಿಕೊಳ್ಳಬೇಕು ಮತ್ತು ಪಡೆದುಕೊಳ್ಳಬೇಕು.

ಕೆಲವು ಒಳನೋಟಗಳನ್ನು ಪುನರುಚ್ಚರಿಸೋಣ ಮತ್ತು ನಮಗಾಗಿ ಇರುವಂತಹ ದೇವರ ಪ್ರೀತಿಯ ಕೆಲವು ಹೆಚ್ಚಾದ ಒಳನೋಟಗಳನ್ನು ಪ್ರಸ್ತುತಪಡಿಸೋಣ. ಆಮೇಲೆ ಇಂತಹ ಪ್ರೀತಿಯನ್ನು ತಿಳಿಯುವುದು, ನಂಬುವುದು, ಪಡೆದುಕೊಳ್ಳುವುದು ಮತ್ತು ಇದರಲ್ಲಿ ವಿಶ್ರಮಿಸುವುದರ ಪ್ರಾಮುಖ್ಯತೆಯನ್ನು ಚರ್ಚಿಸೋಣ.

## ಷರತ್ತಿಲ್ಲದ ಪ್ರೀತಿ

ದೇವರ ಪ್ರೀತಿಯು ಷರತ್ತಿಲ್ಲದ ಪ್ರೀತಿಯಾಗಿದೆ. ಇದು "ಯಾವುದೇ ನಿರ್ಬಂಧವಿಲ್ಲದೆ" ಬರುವಂತದ್ದಾಗಿದೆ. ಆತನ ಪ್ರೀತಿಯನ್ನು ಪಡೆದುಕೊಳ್ಳಲೂ ಹಾಗೇ ಸುಮ್ಮನೇ ಆಹ್ವಾನಿಸುತ್ತಾನೆ ಮತ್ತು ಅದಕ್ಕೆ ಪ್ರತಿಕ್ರಿಯಿಸಬೇಕು.

**1 ಯೋಹಾನ 4:9–10**
**ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ. ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತದೆ.**

ನಾವು ದೇವರನ್ನು ಹುಡುಕಿಕೊಂಡು ಹೋಗಲಿಲ್ಲ. ಬದಲಿಗೆ ಆತನ ಪ್ರೀತಿಯಿಂದ ದೇವರು ನಮ್ಮನ್ನು ಹುಡುಕಿ ಬಂದನು. ನಮ್ಮ ಕಡೆಗೆ ಆತನ ಒಳ್ಳೆಯತನವನ್ನು ಅನುಭವಿಸುವಂತೆ ಮತ್ತು ಆತನ ಕುಟುಂಬದಲ್ಲಿರುವಂತೆ ಮತ್ತು ಆತನನ್ನು ತಿಳಿಯುವುದಕ್ಕೆ ಅಡ್ಡಿಪಡಿಸುವಂತಹವುಗಳನ್ನು ತೆಗೆದುಹಾಕಲೂ ಆತನ ಶ್ರೇಷ್ಟ ಪ್ರೀತಿಯಿಂದ ದೊಡ್ಡದಾದ ಮೌಲ್ಯ ಪಾವತಿಸಿದನು. ಆತನು ಸಂಪೂರ್ಣವಾಗಿ ಬೆಲೆಯನ್ನು ಪಾವತಿಸಿದನು.

ನಮ್ಮ ಸಾಧನೆಗಳು ಅಥವಾ ನಮ್ಮ ಬುದ್ಧಿಶಕ್ತಿ ಅಥವಾ ನಾವು ಮಾಡಿದಂತಹ ಕಾರ್ಯಗಳಿಂದ ನಾವು ಪ್ರೀತಿಸಲ್ಪಟ್ಟಿಲ್ಲ. ನಾವು ಈಗ ಮಾಡಬೇಕಾಗಿರುವುದು ಆತನ ಪ್ರೀತಿ ಪಡೆಯಬೇಕು ಮತ್ತು ಪ್ರತಿಕ್ರಿಯೆ ತೋರಬೇಕು.

**1 ಯೋಹಾನ 4:19**
**ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ.**

## ಅಸಾಮಾನ್ಯವಾದ ಪ್ರೀತಿ

**ಯೋಹಾನ 16:26–27**
**ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳುವಿರಿ. ನಾನು ತಂದೆಯನ್ನು ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವದಿಲ್ಲ. ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟು ಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ.**

ಕರ್ತನಾದ ಯೇಸುವು ಆತನ ಶಿಷ್ಯರಿಗೆ "ಆ ದಿನದಲ್ಲಿ" ಅಂದರೆ ಆತನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಸಮಯದ ನಂತರ ಆತನ ಹೆಸರಿನಲ್ಲಿ ತಂದೆಗೆ ನೇರವಾಗಿ ಪ್ರಾರ್ಥಿಸಿರಿ ತಂದೆಗೆ ನೇರವಾಗಿ ಪ್ರಾರ್ಥಿಸಿರಿ ಎಂಬುದಾಗಿ ತಿಳಿಸಿದ್ದನು. ನಾವು ಇದನ್ನು ಮಾಡಬಹುದೆಂಬುದಾಗಿ ಆತನು ಹೇಳಿದ್ದಾನೆ ಮತ್ತು ಆತನು ನಮ್ಮನ್ನು ಕೇಳಬೇಕಾಗಿಲ್ಲ. ಕಾರಣವೇನೆಂದರೆ, ಯೇಸುವಿನ ಹೆಸರಿನಲ್ಲಿ ನೇರವಾಗಿ ನಾವು ತಂದೆಯನ್ನು ಕೇಳಬಹುದು. ಯಾಕಂದರೆ ಯೇಸುವನ್ನು ನಂಬಿದ್ದರಿಂದ ಮತ್ತು

ನಾವು ಯೇಸುವನ್ನು ಪ್ರೀತಿಸುವುದರಿಂದ ತಂದೆಯು ಸ್ವತಃ ನಮ್ಮನ್ನು ಪ್ರೀತಿಸುತ್ತಾನೆ. ತಂದೆಯು ಸ್ವತಃ ನಮ್ಮನ್ನು ಪ್ರೀತಿಸುತ್ತಾನೆಂಬುದನ್ನು ವ್ಯಾಖ್ಯಾನಿಸುವಾಗ, ಕರ್ತನಾದ ಯೇಸುವು "ಪ್ರೀತಿ" ಅನ್ನುವುದಕ್ಕೆ ವಿಭಿನ್ನವಾದ ಗ್ರೀಕ್ ಪದವನ್ನು ಉಪಯೋಗಿಸಿದ್ದನ್ನು ಗಮನಿಸುವುದು ಆಸಕ್ತಿಕರವಾಗಿದೆ. ಆತನು "ಫಿಲಿಯೊ" (phileo) ಎಂಬ ಪದವನ್ನು ಉಪಯೋಗಿಸಿದ್ದಾನೆ. ಇದು ಸ್ನೇಹ ಮತ್ತು ವಾತ್ಸಲ್ಯದ ಕುರಿತು ಮಾತಾಡುತ್ತದೆ. ಕರ್ತನಾದ ಯೇಸುವು "ತಂದೆಯು ಸ್ವತಃ ನಿಮ್ಮ ಸ್ನೇಹಿತನಾಗಿದ್ದಾನೆ ಮತ್ತು ನಿಮ್ಮೆಡೆಗೆ ನಿಜವಾಗಿ ಮಮತೆಯುಳ್ಳವನಾಗಿದ್ದಾನೆ"ಎಂಬುದಾಗಿ ವಾಸ್ತವವಾಗಿ ಹೇಳುತ್ತಾನೆ.

ಇದನ್ನು ಹೇಳಿರಿ: "ಸ್ವತಃ ತಂದೆಯೇ ನನ್ನನ್ನು ಪ್ರೀತಿಸುತ್ತಾನೆ. ನನ್ನ ಪರಲೋಕದ ತಂದೆ ನನ್ನ ಸ್ನೇಹಿತನು ಮತ್ತು ನನ್ನೆಡೆಗೆ ಅನುಕಂಪವುಳ್ಳವನಾಗಿದ್ದಾನೆ. ಯೇಸುವಿನ ಹೆಸರಿನಲ್ಲಿ ನನ್ನ ಎಲ್ಲ ಮನವಿಗಳನ್ನು ಆತನಿಗೆ ಮಾಡುತ್ತೇನೆ.

**ಯೋಹಾನ 17:23,26**

**ನಾನು ಅವರಲ್ಲಿಯೂ, ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು. ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ. ಇನ್ನೂ ತಿಳಿಸುವೆನು. ನೀನು ನನ್ನ ಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂದೂ ನಾನು ಅವರಲ್ಲಿ ಇರಬೇಕೆಂದೂ ಪ್ರಾರ್ಥಿಸುತ್ತೇನೆ ಅಂದನು.**

ಮೇಲಿನ 23ನೇ ವಚನದಲ್ಲಿ, ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಅದೇ ರೀತಿಯಲ್ಲಿ (ಅದೇ ವಿಧದಲ್ಲಿ ಮತ್ತು ಆಳತೆಯಲ್ಲಿ) ತಂದೆಯು ಯೇಸುವನ್ನು ಪ್ರೀತಿಸುತ್ತಾನೆಂಬುದಾಗಿ ಯೇಸುವು ದೃಢಪಡಿಸುತ್ತಾನೆ.

ಇದನ್ನು ಹೇಳಿರಿ : "ಯೇಸುವನ್ನು ಪ್ರೀತಿಸುವ ರೀತಿಯಲ್ಲಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ತಂದೆಯಿಂದ ಯೇಸುವು ಪ್ರೀತಿಸಲ್ಪಟ್ಟಂತಹ ಪ್ರಕಾರವಾಗಿ ನಾನು ತಂದೆಯಿಂದ ಪ್ರೀತಿಸಲ್ಪಡುತ್ತೇನೆ."

ಯೇಸುವನ್ನು ಪ್ರೀತಿಸುವ ಪ್ರಕಾರ ತಂದೆಯು ನಿಮ್ಮನ್ನು ಪ್ರೀತಿಸುತ್ತಾನೆ.

ಮೇಲಿನ 26ನೇ ವಚನದಲ್ಲಿ, ನಮ್ಮಲ್ಲಿ ತಂದೆಯ ಪ್ರೀತಿಯನ್ನು ಇಟ್ಟಿದ್ದಾನೆ ಅದನ್ನು ನಾವು ತಿಳಿಯಬಹುದು, ಅನುಭವಿಸಬಹುದು, ಭಾವಿಸಬಹುದು ಮತ್ತು ಆತನ ಮಗನಾದ ಯೇಸುಕ್ರಿಸ್ತನಲ್ಲಿ ಇಟ್ಟಿರುವಂತಹ ಅದೇ ರೀತಿಯ ಪ್ರೀತಿಯಲ್ಲಿ

– ನಮ್ಮ ಹೃದಯಗಳು ತಂದೆಯ ಪ್ರೀತಿಯಿಂದ ತುಂಬಿಸಲ್ಪಡುವವು ಎಂಬುದಾಗಿ ಕರ್ತನಾದ ಯೇಸು ಪ್ರಾರ್ಥಿಸಿದನು.

ಇದನ್ನು ಹೇಳಿರಿ : ''ತಂದೆಯು ಯೇಸುವನ್ನು ಪ್ರೀತಿಸಿದ ಪ್ರಕಾರವಾಗಿ ನನ್ನನ್ನು ಪ್ರೀತಿಸುತ್ತಾನೆ ಎಂಬುದರಿಂದ ನಾನು ತುಂಬಿಸಲ್ಪಟ್ಟಿದ್ದೇನೆ, ಅನುಭವಿಸುತ್ತೇನೆ ಮತ್ತು ನಾನು ತಿಳಿದಿದ್ದೇನೆ.''

ಇಂತಹ ರೀತಿಯ ಪ್ರೀತಿಯು ಅಸಾಮಾನ್ಯ ಮತ್ತು ನಿಷ್ಪಕ್ಷಪಾತ.

ಅಪರಿಪೂರ್ಣವಾದಂತವರಿಗಿಂತ (ನಮಗಿಂತ) ಪರಿಪೂರ್ಣವಾದವರು ಅತ್ಯಧಿಕವಾಗಿ ಪ್ರೀತಿಸಲ್ಪಡಬಹುದೆಂಬುದಾಗಿ ನಾವು ಸಾಮಾನ್ಯವಾಗಿ ಯೋಚಿಸುತ್ತೇವೆ. ಆದರೆ ಅಪರಿಪೂರ್ಣರಾದ ನಾವು ತಂದೆಯಿಂದ ಪ್ರೀತಿಸಲ್ಪಟ್ಟಿದ್ದೇವೆ. ಅದೇ ರೀತಿಯಲ್ಲಿ ಪರಿಪೂರ್ಣರಾದವರು ಪ್ರೀತಿಸಲ್ಪಟ್ಟಿದ್ದಾನೆ. ಆತನ ಮಗನು ನಿಶ್ಚಿತವಾಗಿ ಅದ್ಭುತನು.

ದೇವರಲ್ಲಿ ಪಕ್ಷಪಾತವಿಲ್ಲ (ರೋಮಾಪುರದವರಿಗೆ 2:11) ದೇವರು ವ್ಯಕ್ತಿಗಳನ್ನು ಗೌರವಿಸುವವನಲ್ಲ (ಅಪೊಸ್ತಲರ ಕೃತ್ಯಗಳು 10:34) ನಮಗೆ ಇದು ಗೊತ್ತಿದೆ. ಆದಾಗ್ಯೂ ದೇವರೊಂದಿಗೆ ನಾವು ಸಂಬಂಧಿಸಿಕೊಳ್ಳುವಾಗ, ನಮಗಿಂತಲೂ ದಯೆಗೆ ಪಾತ್ರರಾದ ಮತ್ತು ದೇವರಿಂದ ಅಧಿಕವಾಗಿ ಪ್ರೀತಿಸಲ್ಪಟ್ಟ ಇತರೆ ವಿಶ್ವಾಸಿಗಳು ಇದ್ದಾರೆ ಎಂಬುದಾಗಿ ಆಗಾಗ್ಗೆ ಯೋಚಿಸುತ್ತೇವೆ. ಇದರ ಕುರಿತು ಯೋಚಿಸಿರಿ. ಆತನ ಸ್ವಂತ ಮಗನೊಡನೆ ದೇವರ ಪಕ್ಷಪಾತ ಮಾಡಲಿಲ್ಲ – ನಮ್ಮನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಬೇರೆಯವರನ್ನು ಪ್ರೀತಿಸುವುದರಲ್ಲಿ ಪಕ್ಷಪಾತಿಯಾಗಿರುತ್ತಾನೋ? ನಮಗಾಗಿ ಇರುವ ದೇವರ ಪ್ರೀತಿಯು ನಿಷ್ಪಕ್ಷಪಾತವಾದದ್ದು.

ನಾವು ಪ್ರಿಯವಾದವರಲ್ಲಿದ್ದೇವೆ ಮತ್ತು ದೇವರಿಗೆ ಪ್ರಿಯವಾಗಿದ್ದೇವೆ.

**ಮಾರ್ಕ 1:11**

**ಆಗ – ನೀನು ಪ್ರಿಯನಾಗಿರುವ ನನ್ನ ಮಗನು ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.**

ತಂದೆಯು ಯೇಸುವನ್ನು ಪ್ರಿಯನಾಗಿರುವ ನನ್ನ ಮಗನು ಎಂಬುದಾಗಿ ಹೇಳಿದ್ದಾನೆ. ಅಪೊಸ್ತಲನಾದ ಪೌಲನು ''ದೇವರ ಪ್ರಿಯರಾಗಿರುವವರು'' ಮತ್ತು ''ಪ್ರಿಯನಾಗಿರುವವನಲ್ಲಿ ಅಂಗೀಕರಿಸಲ್ಪಟ್ಟಿದ್ದೇವೆ'' ಎಂಬುದಾಗಿ ನಮಗೆ ತಿಳಿಸುತ್ತಾನೆ.

**ರೋಮಾಪುರದವರಿಗೆ 1:7**
**ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವುದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನೆಂದರೆ ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸುಕ್ರಿಸ್ತನಿಂದಲೂ ನಿಮಗೆ ಕೃಪೆಯೂ, ಶಾಂತಿಯೂ ಆಗಲಿ.**

**ಎಫೆಸದವರಿಗೆ 1:6**
**ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು.**

ಇದನ್ನು ಹೇಳಿರಿ: "ನಾನು ಪ್ರಿಯನಲ್ಲಿ ಇದ್ದೇನೆ ಮತ್ತು ನಾನು ದೇವರಿಗೆ ಪ್ರಿಯನಾದವನು. ಆತನ ಪ್ರಿಯನಾಗುವಂತೆ ನಾನು ದೇವರಿಂದ ಪ್ರೀತಿಸಲ್ಪಟ್ಟಿದ್ದೇನೆ."

ನಾವು ವೈಯುಕ್ತಿಕವಾದ ರೀತಿಯಲ್ಲಿ ನಮ್ಮ ಹೃದಯಗಳಲ್ಲಿ ತಂದೆಯ ಪ್ರೀತಿ ಹೊಂದಬೇಕು, ತಿಳಿಯಬೇಕು ಮತ್ತು ಅನುಭವಿಸಬೇಕೆಂಬುದಾಗಿ ಕರ್ತನಾದ ಯೇಸುವು ಪ್ರಾರ್ಥಿಸಿದನು (ಯೋಹಾನ 17:26). ನಮ್ಮ ಹೃದಯಗಳಿಗೆ ಪವಿತ್ರಾತ್ಮನನ್ನು ಕಳುಹಿಸುವ ಮೂಲಕವಾಗಿ ದೇವರಿಂದ ಈ ಪ್ರಾರ್ಥನೆಯು ಉತ್ತರಿಸಲ್ಪಟ್ಟಿತ್ತು.

**ರೋಮಾಪುರದವರಿಗೆ 5:5**
**ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವುದಿಲ್ಲ. ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ.**

ಪವಿತ್ರಾತ್ಮನಿಂದ ದೇವರ ಪ್ರೀತಿಯು ನಮ್ಮ ಹೃದಯಗಳಿಗೆ ಸುರಿಯಲ್ಪಟ್ಟಿದೆ. ತಂದೆಯ ಪ್ರೀತಿಯ ವೈಯಕ್ತಿಕ ಅನುಭವವನ್ನು ನಮಗೆ ಪವಿತ್ರಾತ್ಮನು ಕೊಡುವವನಾಗಿದ್ದಾನೆ. ತಂದೆಯ ಪ್ರೀತಿಯಲ್ಲಿ ನಾವು ನಡೆಯಲು ಅಧಿಕಾರವನ್ನು ಪವಿತ್ರಾತ್ಮನು ಕೊಡುತ್ತಾನೆ.

## ನಮಗೆ ನಾಚಿಕೆಯನ್ನು ಉಂಟು ಮಾಡದಂತಹ ಪ್ರೀತಿ

ಸತ್ಯವೇದವು "... ಪ್ರೀತಿಯು ಪಾಪಗಳನೆಲ್ಲಾ ಮುಚ್ಚುತ್ತದೆ." (ಜ್ಞಾನೋಕ್ತಿಗಳು 10:12, 1 ಪೇತ್ರ 4:8)

ಪ್ರೀತಿಯು ಮುಚ್ಚುತ್ತದೆ. ಇದು ಹೊದಿಸುತ್ತದೆ. ಪ್ರೀತಿಯು ನಾಚಿಕೆಯನ್ನು ಮತ್ತು ಬೆತ್ತಲೆಯನ್ನು ತೆಗೆದುಹಾಕುತ್ತದೆ ಮತ್ತು ಘನತೆ, ಸುರಕ್ಷತೆ ಮತ್ತು ಗೌರವ ತರುತ್ತದೆ.

ನಮಗಾಗಿ ದೇವರ ಪ್ರೀತಿಯು ಮಾಡುವುದು ಇದಾಗಿದೆ.

**ಎಫೆಸದವರಿಗೆ 1:4**
**ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರು, ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು.**

**ಕೊಲೊಸ್ಸೆಯವರಿಗೆ 1:21–22**
**ಇದಲ್ಲದೆ ನಾವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷ ಮನಸ್ಸುಳ್ಳವರೂ ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ, ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.**

ನಾವು ಪವಿತ್ರರೂ, ನಿರ್ದೋಷಿಗಳು (ದೋಷವಿಲ್ಲದವರು) ಮತ್ತು ನಮಗಾಗಿರುವ ಆತನ ಪ್ರೀತಿಯಿಂದ ದೇವರ ದೃಷ್ಟಿಯಲ್ಲಿ ನಿಂದೆ ಇಲ್ಲದವರು.

## ಮುರಿಯಲಾಗದ ಪ್ರೀತಿ

ತಂದೆಯ ಪ್ರೀತಿಯಿಂದ ನಮ್ಮನ್ನು ಪ್ರತ್ಯೇಕಿಸಲು, ನಿಲ್ಲಿಸಲು, ಮುರಿಯಲು, ಅಡ್ಡಿ ಮಾಡಲೂ ಸಾಧ್ಯವಿಲ್ಲ. ಆತನ ಪ್ರೀತಿಯು ನಮ್ಮನ್ನು ಬಿಟ್ಟುಕೊಡುವುದಿಲ್ಲ. ರೋಮಾಪುರದವರಿಗೆ 8ನೇ ಅಧ್ಯಾಯದಲ್ಲಿ ನಾವು ಓದುವಂತದ್ದನ್ನು ವ್ಯಾಖ್ಯಾನಿಸಲೂ ಬಹುಶಃ ಇದಕ್ಕಿಂತ ಉತ್ತಮವಾದ ಮಾರ್ಗವಿಲ್ಲ.

**ರೋಮಾಪುರದವರಿಗೆ 8:35–37**
**ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ, ಹಿಂಸೆಯೋ, ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ, ಖಡ್ಗವೋ? ದೇವರೇ, ನಾವು ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ. ಜನರು ನಮ್ಮನ್ನು ಕೊಯ್ಯುರಿಗಳಂತೆ ಎಣಿಸಿದರು ಎಂಬುದಾಗಿ ಬರೆದಿರುವಂತೆ ಆಗುತ್ತದಲ್ಲಾ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ.**

ಜೀವಿತವು ನಮಗೆ ಯಾವುದನ್ನು ತರುತ್ತದೆಂಬುದು ವಿಚಾರವಲ್ಲ. ನಮಗಾಗಿ ಇರುವ ತಂದೆಯ ಪ್ರೀತಿಯಿಂದ ಅಗಲಿಸಲು ಸಾಧ್ಯವಿಲ್ಲ. ಮಾನವನ ಯಾವುದೇ ಶಕ್ತಿ ಇಲ್ಲ, ನರಕದ ಶಕ್ತಿ ಇಲ್ಲ, ಪ್ರತಿಕೂಲತೆ ಇಲ್ಲದಿರುವುದು, ವಿಪತ್ತು ಇಲ್ಲ, ಸವಾಲುಗಳು ಇಲ್ಲ, ಪ್ರತಿಕೂಲತೆ ಇಲ್ಲದಿರುವುದು, ವಿಪತ್ತು ಇಲ್ಲ, ಸವಾಲುಗಳು ಇಲ್ಲ, ಯೇಸುಕ್ರಿಸ್ತನಲ್ಲಿ ನಮಗಾಗಿರುವ ತಂದೆಯ ಪ್ರೀತಿಯಿಂದ ಯಾವುದು

ಅಗಲಿಸಲಾರದು. ನಮಗಾಗಿರುವ ಇಂತಹ ಪ್ರೀತಿಯು ಒಡೆಯಲಾಗದ್ದು. ನಾವು ಭರವಸೆಯಿಂದ ಇದ್ದೇವೆ ಮತ್ತು ಎಲ್ಲಾ ಪರಿಸ್ಥಿತಿಯಲ್ಲಿ ಆತ್ಮ ವಿಶ್ವಾಸ, ಎಲ್ಲಾ ಕಷ್ಟದ ಪರಿಸ್ಥಿತಿಯಲ್ಲಿ ನಾವು ಎದುರಿಸುತ್ತಿರುವ ಪರಿಸ್ಥತಿಯನ್ನು ಲೆಕ್ಕಿಸದೆ ನಾವು ತಂದೆಯಿಂದ ಪ್ರೀತಿಸಲ್ಪಟ್ಟಿದ್ದೇವೆ.

## ಪ್ರೀತಿಯು ವಿಜಯಶಾಲಿಗಳಿಗಿಂತ ಅಧಿಕವಾಗಿ ನಮ್ಮನ್ನು ಮಾಡುತ್ತದೆ

ತಂದೆಯ ಮುರಿಯಲಾಗದಂತಹ ಪ್ರೀತಿಯಲ್ಲಿ ಈ ಎಲ್ಲಾ ಇಂತಹ ಸಂಗತಿಗಳಲ್ಲಿ – ಪ್ರೀತಿಯಲ್ಲಿ ಈ ಅತ್ಯಂತ ಕೆಟ್ಟ ವಿಷಯಗಳಲ್ಲಿಯೂ ನಮ್ಮ ಪ್ರೀತಿಸಿದಂತಹ ಆತನ ಮೂಲಕವಾಗಿ ನಾವು ಅಧಿಕವಾಗಿ ವಿಜಯಶಾಲಿಗಳಾಗುತ್ತೇವೆಂಬುದಾಗಿ ಪೌಲನು ದೃಢಪಡಿಸುತ್ತಾನೆ.

**ರೋಮಾಪುರದವರಿಗೆ 8:37**
**ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ.**

ಪೂರ್ಣ ಜಯಶಾಲಿಗಳಾಗಿರುವುದೆಂದರೆ ತಡೆಯಲಾರದ ಜಯವನ್ನು ಸಾಧಿಸುವುದಾಗಿದೆ. ನಿರ್ಣಾಯಕ ಗೆಲವು ಸಾಧಿಸುವುದು, ಪೂರ್ಣ ಗೆಲುವು ಸಾಧಿಸುವುದು, ಮಿತಿಮೀರಿ ಸೋಲಿಸುವುದು, ಒಂದು ಜಯಕ್ಕಿಂತ ಅಧಿಕವಾದದ್ದನ್ನು ಸಾಧಿಸುವುದು.

ನಮಗೆ ವಿರೋಧವಾಗಿ ತರಲ್ಪಟ್ಟಂತಹ ಕೆಟ್ಟವುಗಳು ಮಧ್ಯದಲ್ಲಿ ಆತನ ಪ್ರೀತಿ. ನಿಮಿತ್ತವಾಗಿ ನಾವು ಅಪಾರವಾದ ಜಯವನ್ನು ಸಾಧಿಸುತ್ತೇವೆ ಮತ್ತು ಪೂರ್ಣ ವಿಜಯಶಾಲಿಗಳಾಗುತ್ತೇವೆ. ಆತನ ಪ್ರೀತಿಯು ನಮ್ಮನ್ನು ಪೂರ್ಣ ಜಯಶಾಲಿಗಳಾಗಿ ಮಾಡುತ್ತದೆ. ಇಂತಹ ರೀತಿಯಲ್ಲಿ ನಮ್ಮ ವಿರೋಧವಾಗಿ ಬರುವಂತಹ ಇಂತಹವುಗಳು ಕ್ರಿಸ್ತನಲ್ಲಿ ನಮಗಾಗಿರುವ ತಂದೆಯ ಪ್ರೀತಿಯಿಂದ ಅಗಲಿಸಲು ಸಾಧ್ಯವಾಗುವುದಿಲ್ಲ.

ಆದ್ದರಿಂದ ಅತೀ ಕೆಟ್ಟ ಸ್ಥಿತಿಯ ಮಧ್ಯದಲ್ಲಿಯು, ತಲೆ ಮೇಲೆತ್ತಿದವರಾಗಿ, ವಿಜಯಶಾಲಿಗಳಂತೆ, ಜಯವೀರರಂತೆ, ಜಯಶಾಲಿಗಳಿಗಿಂತ ಅಧಿಕವಾದವರಂತೆ ನಡೆಯಬಹುದು! ನಮಗಾಗಿರುವ ತಂದೆಯ ಪ್ರೀತಿಯಿಂದ ನಾವು ಎಲ್ಲ ಸಮಯದಲ್ಲಿ ಜಯಿಸುತ್ತೇವೆ.

## ನಮ್ಮನ್ನು ವಿಮುಕ್ತಗೊಳಿಸುವ (ಸ್ವತಂತ್ರಗೊಳಿಸುವ) ಪ್ರೀತಿ

ಭಯವು ಚಿತ್ರಹಿಂಸೆ ಹೊಂದಿದೆ. ಚಿತ್ರಹಿಂಸೆಯಿರುವಂತಹ ಇನ್ನೊಂದು ಸ್ಥಳ ನರಕವಾಗಿದೆ. ಭಯದಲ್ಲಿ ಜೀವಿಸುವುದು, ಚಿತ್ರಹಿಂಸೆಯ ಸ್ಥಳವಾದ ನರಕದಲ್ಲಿ ಜೀವಿಸುವಂತಿರುತ್ತದೆ.

ಪರಿಪೂರ್ಣ ಪ್ರೀತಿ ಎಲ್ಲಾ ಭಯವನ್ನು ತೊಡೆದು ಹಾಕುತ್ತದೆ. ಭಯದಿಂದ ನಮ್ಮನ್ನು ಸ್ವತಂತ್ರಗೊಳಿಸುತ್ತದೆ.

ಪರಿಪೂರ್ಣ ಪ್ರೀತಿಯ ಒಂದೇ ಒಂದು ಮೂಲವಾದಂತಹ – ದೇವರಿಂದ ಮಾತ್ರ ಬರುತ್ತದೆ – ಪೂರ್ಣ ಪ್ರೀತಿಯನ್ನು ಅನುಭವಿಸುವುದು ನಮ್ಮನ್ನು ಸ್ವತಂತ್ರಗೊಳಿಸುತ್ತದೆ.

**1 ಯೋಹಾನ 4:17–18**
**ನ್ಯಾಯ ತೀರ್ಪಿನ ದಿನದಲ್ಲಿ ನಮಗಿರುವ ಧೈರ್ಯದಲ್ಲಿಯೇ ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂತು. ಯಾಕೆಂದರೆ, ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ. ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು. ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆ ಬಂದವನಲ್ಲ.**

**1 ಯೋಹಾನನು 4:17–18 (ಆ್ಯಂಪ್ಲಿಫೈಡ್ ಬೈಬಲ್)**
**ಇಂತಹ ಪ್ರೀತಿಯಲ್ಲಿ (ಆತನೊಡನೆ ಅನ್ಯೋನ್ಯತೆ ಮತ್ತು ಐಕ್ಯತೆ) ಪೂರ್ಣವಾದದ್ದು ಮತ್ತು ನಮ್ಮೊಡನೆ ಸಂಪೂರ್ಣವಾದದ್ದು. ಆದ್ದರಿಂದ ನ್ಯಾಯತೀರ್ಪಿನ ದಿನದಲ್ಲಿ (ಆತನನ್ನು ಎದುರುಗೊಳ್ಳಲೂ ಧೈರ್ಯ ಮತ್ತು ಭರವಸೆಯೊಡನೆ) ನಾವು ಭರವಸೆಯನ್ನು ಹೊಂದಿರುತ್ತೇವೆ. ಯಾಕಂದರೆ ಆತನಿರುವಂತೆ ನಾವು ಈ ಲೋಕದಲ್ಲಿರುವವರಾಗಿದ್ದೇವೆ. ಪ್ರೀತಿಯಲ್ಲಿ ಭಯವಿಲ್ಲ (ಭೀತಿಯು ಇರುವುದಿಲ್ಲ). ಆದರೆ ಪರಿಪೂರ್ಣ ಪ್ರೀತಿಯು (ಸಂಪೂರ್ಣ, ಪೂರ್ಣವಾಗಿ ಬೆಳೆದ) ಭಯವನ್ನು ಹೋಗಲಾಡಿಸುತ್ತದೆ. ಯಾಕಂದರೆ, ಭಯವು ಯಾತನೆಯನ್ನು ಹೊಂದುತ್ತಾ ಇರುತ್ತದೆ (ದೈವಿಕವಾದದ್ದನ್ನು ಎದುರು ನೋಡುವುದು). ಆದ್ದರಿಂದ ಹೆದರಿಕೆಯಿಂದಿರುವವನು (ದೇವರ ನ್ಯಾಯ ತೀರ್ಪಿನ) ಪ್ರೀತಿಯಲ್ಲಿ ಪರಿಪೂರ್ಣನಾಗಿಲ್ಲ (ದೇವರ ಪ್ರೀತಿಯ ತಿಳುವಳಿಕೆಯಲ್ಲಿ ಸಾಕಾಗುವಷ್ಟು ಮಟ್ಟಿಗೆ ಬೆಳೆದಿಲ್ಲ).**

ಪರಿಪೂರ್ಣ ಪ್ರೀತಿಯು ಸಂಪೂರ್ಣವಾದದ್ದು, ಪೂರ್ಣ ಬೆಳೆದಿರುವುದು. ನಮಗಾಗಿರುವ ದೇವರ ಪ್ರೀತಿಯಲ್ಲಿ ನಾವು ಬೆಳೆಯುವುದರ ಸಾಕಷ್ಟು ಪ್ರಜ್ಞೆಯನ್ನು ಹೊಂದಿಕೊಳ್ಳಬೇಕು.

ನಮ್ಮಲ್ಲಿ ಪ್ರೀತಿಯು ಪರಿಪೂರ್ಣವಾಗಬೇಕಾದರೆ, ನಮಗಾಗಿರುವ ತಂದೆಯ ಪ್ರೀತಿಯಲ್ಲಿ ವೈಯಕ್ತಿಕವಾಗಿ ಮತ್ತು ಅನುಭವಿ ತಿಳುವಳಿಕೆಯಲ್ಲಿ ನಾವು ಬೆಳೆಯಬೇಕು. ತಂದೆಯ ಪ್ರೀತಿಯ ಸಂಪೂರ್ಣ ಅಧ್ಯಯನದ ಉದ್ದೇಶವು ಇದಾಗಿದೆ. ನಮಗಾಗಿರುವ ತಂದೆಯ ಶ್ರೇಷ್ಟ ಪ್ರೀತಿಯನ್ನು ವೈಯಕ್ತಿಕವಾಗಿ, ಅನುಭವಿ ತಿಳುವಳಿಕೆಯಲ್ಲಿ ಬೆಳೆಯಲು ಸಹಾಯ ಮಾಡುತ್ತದೆ.

ಇದು ಜರುಗುವಾಗ, ನಾವು ವಿಮುಕ್ತವಾಗುತ್ತೇವೆ. ಎಲ್ಲಾ ರೀತಿಯ ಭಯ, ಭೀತಿ ಮತ್ತು ದೇವರ ನ್ಯಾಯತೀರ್ಪು ಅಥವಾ ದಂಡನೆ ಅಥವಾ ಖಂಡನೆಯ ಹಿಂಸೆಯಿಂದ ಸ್ವತಂತ್ರರಾಗುತ್ತೇವೆ.

ಇಲ್ಲಿಯೇ ಮತ್ತು ಈಗ, ನಮ್ಮಲ್ಲಿ ಪ್ರೀತಿಯ ಪರಿಪೂರ್ಣವಾಗಿರುವಾಗ ದೇವರ ನ್ಯಾಯತೀರ್ಪು, ದಂಡನೆ, ಮತ್ತು ಖಂಡನೆಯ ಹಿಂಸೆ, ಭಯ ಮತ್ತು ಎಲ್ಲಾ ಭೀತಿಗಳಿಂದ ನಾವು ಬಿಡುಗಡೆಗೊಂಡು ದೇವರ ಪ್ರೀತಿಯ ಸಾಕಷ್ಟು ತಿಳುವಳಿಕೆಗೆ ನಾವು ಬರುತ್ತೇವೆ. ನಮ್ಮ ತಂದೆಯೊಂದಿಗೆ ಹೇಗೆ ಸಂಬಂಧಿಸಿಕೊಳ್ಳುತ್ತೇವೆಂಬುದರಲ್ಲಿ ನಾವು ಸಂಪೂರ್ಣ ಸ್ವತಂತ್ರರು. ನಾವು ಆತನ ಮಹತ್ತಾದ ಪೂಜ್ಯತೆಯ ಭಯ ಹೊಂದಿರುತ್ತೇವೆ ಮತ್ತು ಆತನನ್ನು ಪರಿಪೂರ್ಣವಾಗಿ ಗೌರವಿಸುತ್ತೇವೆ. ಆದರೆ ನಾವು ಸಂಪೂರ್ಣವಾಗಿ ವ್ಯಾಧಿಗ್ರಸ್ತ ಭಯದಿಂದ ಮತ್ತು ಆತನ ಭೀತಿಯಿಂದ ಸ್ವತಂತ್ರರಾಗಿರುತ್ತೇವೆ. ಆತನಿಂದ ತಿರಸ್ಕರಿಸಲ್ಪಡುತ್ತೇವೆ, ನ್ಯಾಯತೀರ್ಪು, ಮತ್ತು ಖಂಡನೆ ಹೊಂದಿದವರಾಗಿರುತ್ತೇವೆಂಬ ಭಯದ ಯಾವುದೇ ಪ್ರಜ್ಞೆಯಿಲ್ಲದೆ ಆತನಲ್ಲಿಗೆ ಬರುತ್ತೇವೆ.

ಆತನಂತೆಯೇ (ಯೇಸು), ನಾವು ಈ ಲೋಕದಲ್ಲಿ ಜೀವಿಸುತ್ತೇವೆ (1 ಯೋಹಾನನು 4:17).

- ಆತ್ಮಿಕ ಕ್ಷೇತ್ರದಲ್ಲಿನ ನಮ್ಮ ತಿಳಿವಳಿಕೆಯು ಯೇಸುವಿನಂತೆಯೇ ಇರುತ್ತದೆ!
- ತಂದೆಯ ಮುಂದೆ ನಮ್ಮ ತಿಳಿವಳಿಕೆಯು ಯೇಸುವಿನ ರೀತಿಯಲ್ಲಿಯೇ ಇರುತ್ತದೆ!
- ಅಂಧಕಾರ ಬಲಗಳ ನಮ್ಮ ತಿಳುವಳಿಕೆಯು ಯೇಸುವಿನ ರೀತಿಯಲ್ಲಿಯೇ ಇರುತ್ತವೆ!

ಆತನಂತೆಯೇ, ನಾವಿರುವವರಾಗಿದ್ದೇವೆ. ಆದಾಗ್ಯೂ ದೇವರ ಸಿಂಹಾಸನದ ಮುಂದೆ, ಅಥವಾ ದುರಾತ್ಮಗಳ ಮುಂದೆ ಹೆದರುವ ಅಥವಾ ಭೀತಿಯಿಂದ ಇರುವವರಲ್ಲ.

ತಂದೆಯ ಪ್ರೀತಿಯನ್ನು ಅನುಭವಿಸುವುದು ನಮ್ಮನ್ನು ವಿಮುಕ್ತಗೊಳಿಸುತ್ತದೆ.

- ಎಲ್ಲಾ ಅಪರಾಧ, ನಾಚಿಕೆ ಮತ್ತು ಖಂಡನೆಯ ಪಜ್ಞೆಯಿಂದ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, ದೋಷವಿಲ್ಲದವರೂ ಆಗಿರಬೇಕೆಂದು (ಎಫೆಸದವರಿಗೆ 1:4).
- ಪ್ರೀತಿ ಪಾತ್ರರಲ್ಲಿ ಅಥವಾ ತಿರಸ್ಕಾರ ಹೊಂದಿದವರು ಅನ್ನುವ ಮುಂಚೆ, ಪ್ರಿಯನಾದವನಲ್ಲಿ ಪೂರ್ಣವಾಗಿ, ಸಂಪೂರ್ಣವಾಗಿ ಮತ್ತು ಪರಿಪೂರ್ಣರಾಗಿ ಅಂಗೀಕರಿಸಲ್ಪಟ್ಟಿದ್ದೇವೆ (ಎಫೆಸದವರಿಗೆ 1:6).
- ಆತನ ಪ್ರೀತಿ ಸಂಪಾದಿಸಲೂ ಅಥವಾ ಸಾಧಿಸಲೂ ಅಗತ್ಯವಾಗಿರುವ ಮುಂಚೆ ಆತನನ್ನು ನಾವು ತಿಳಿಯುವುದಕ್ಕೆ ಮೊದಲೇ ಪ್ರೀತಿಸಿದನು (1 ಯೋಹಾನ 4:9–10).
- ಅನರ್ಹತೆ ಮತ್ತು ನಿಷ್ಪ್ರಯೋಜಕತೆಯಲ್ಲಿ ಪ್ರಜ್ಞೆಗೆ ಮುಂಚೆ ಆತನ ಪುತ್ರರು ಮತ್ತು ಪುತ್ರಿಯರಾಗಿ ಆತನ ಪ್ರೀತಿಯಲ್ಲಿ ದತ್ತು ಸ್ವೀಕರಿಸಿದನು. (ಎಫೆಸದವರಿಗೆ 1:5)
- ಬಂಧನದಲ್ಲಿಟ್ಟಿದ್ದೇವೆ, ದಾಸತ್ವದಲ್ಲಿದ್ದೇವೆ ಮತ್ತು ಹಿಡಿಯಲ್ಪಟ್ಟಿದ್ದೇವೆ ಅಂದುಕೊಳ್ಳುವ ಮುಂಚೆ ನೀವು ಸ್ವತಂತ್ರರು. ಆಳುಗಳಂತೆ ಭಯವುಳ್ಳವರಾಗಿಯೂ, ದಾಸತ್ವದ ಆತ್ಮ ಆತನು ನಮಗೆ ಕೊಟ್ಟಿಲ್ಲ (ರೋಮಾಪುರದವರಿಗೆ 8:15).
- ಹತೋಟಿಯಲ್ಲಿದ್ದೇವೆ, ಉಪಯೋಗಿಸಲ್ಪಟ್ಟಿದ್ದೇವೆ, ಯುಕ್ತಿಯಿಂದ ನಿಭಾಯಿಸಲ್ಪಟ್ಟಿದ್ದೇವೆ ಅನ್ನು ಪ್ರಜ್ಞೆಗೆ ಮುಂಚೆ ಆತನ ಪ್ರೀತಿಯಲ್ಲಿ ಅಧಿಕಾರ ಹೊಂದಿದ್ದೇವೆ.
- ನಮ್ಮ ಜೀವಿತದಲ್ಲಿರುವ ಎಲ್ಲಾ ಭಯ, ಭವಿಷ್ಯತ್ತಿನ ಕುರಿತ ಭಯ, ಸೋಲಿನ ಭಯ, ಕೊರತೆ ಮತ್ತು ನ್ಯೂನತೆ.ಯ ಭಾವನೆಗೆ ಮುಂಚೆ ಆತನ ಪ್ರೀತಿಯ ಎಲ್ಲಾ ಭಯವನ್ನು ತೆಗೆದು ಹಾಕುತ್ತದೆ (1 ಯೋಹಾನ 4:18).

ನಮ್ಮ ಅನಿಯಮಿತ ಬಯಕೆಗಳೆಲ್ಲವು ಆತನ ಪ್ರೀತಿಯಲ್ಲಿ ಪರಿಹರಿಸಲ್ಪಟ್ಟಿವೆ.

ನಮ್ಮ ಅನಿರೀಕ್ಷಿತ, ವಿವರಿಸಲಾಗದ, ಗೊಂದಲದ ಅನುಭವಗಳು ಮತ್ತು ಜೀವಿತದ ಘಟನೆಗಳು ಒಂದು ಸಾರಿ ತಳಮಳಗೊಂಡಂತೆ ಕಾಣುತ್ತಿದ್ದವುಗಳು ಈಗ ಅತ್ಯಲ್ಪವಾಗಿ ಕಾಣುತ್ತಿವೆ ಮತ್ತು ಆತನ ಪ್ರೀತಿಯಿಂದ ನಾವು ವಿಜಯಶಾಲಿಗಳಿಗಿಂತಲೂ

ಮಿಗಿಲಾಗಿ ಎಬ್ಬಿಸಲ್ಪಟ್ಟಿದ್ದೇವೆ.

ನಮ್ಮ ಸ್ವಂತ ವೈಯಕ್ತಿಕ ತಪ್ಪುಗಳು, ಕೆಟ್ಟ ಆಯ್ಕೆಗಳು ಮತ್ತು ಕಳಪೆ ನಿರ್ಧಾರಗಳು ಆತನ ಪ್ರೀತಿಯಲ್ಲಿ ಕರಗಿ ಹೋಗಿವೆ ಮತ್ತು ನಾವು ಪ್ರಿಯರಾದವರು ಮತ್ತು ಪೂರ್ಣವಾಗಿ ಪ್ರಿಯನಲ್ಲಿ ಅಂಗೀಕರಿಸಲ್ಪಟ್ಟವರು ಎಂಬುದನ್ನು ತಿಳಿದು ಸಂಕೋಚಪಡದೆ ನಿಂತುಕೊಳ್ಳುತ್ತೇವೆ.

ನಾವು ಆತನ ಪ್ರೀತಿಯನ್ನು ಪಡೆದುಕೊಂಡಾಗ, ನಮ್ಮನ್ನು ಕೆಳ ತೂಗುವಂತಹ ಎಲ್ಲವುಗಳಿಂದ ಬಿಡುಗಡೆಗೊಳ್ಳುತ್ತೇವೆ.

ಪ್ರತಿಯೊಬ್ಬ ಮನುಷ್ಯನು ಭಾವನೆಗಳ ಅಗತ್ಯತೆಯ ಕ್ಷೇತ್ರದಲ್ಲಿ ಮೂರು ಪ್ರಾಮುಖ್ಯತೆ ಹೊಂದಿದ್ದಾನೆಂದು ಸಾಮಾನ್ಯವಾಗಿ ಹೇಳುತ್ತಾರೆ: **ಸುರಕ್ಷತೆ, ಸ್ವಯಂ-ಮೌಲ್ಯ ಮತ್ತು ಸಾರ್ಥಕತೆ.**

ನಾವು ಪ್ರೀತಿಯಲ್ಲಿ ಪರಿಪೂರ್ಣರಾದಾಗ, ನಮ್ಮ ಮೂರು "ಸ"ಗಳಲ್ಲಿ ಸ್ಥಿರವಾಗಿ ನಿಲ್ಲಬಹುದು: ನಮಗಾಗಿರುವ ತಂದೆಯ ಪ್ರೀತಿಯ ಸಾರ್ಥಕತೆ, ಸುರಕ್ಷತೆ ಮತ್ತು ಸ್ವಯಂ-ಮೌಲ್ಯದಲ್ಲಿ ನಿಲ್ಲಬಹುದು. ಆತನ ಪ್ರೀತಿಯಿಂದ ಯಾವುದು ಅಗಲಿಸಲಾರದು. ನಮಗಾಗಿರುವ ತಂದೆಯ ಪ್ರೀತಿಯಲ್ಲಿಯೇ ನಮ್ಮ ಸ್ವಯಂ-ಮೌಲ್ಯವಾಗಿದೆ. ನಮ್ಮ ಸಾರ್ಥಕತೆಯು ನಮಗಾಗಿರುವ ತಂದೆಯ ಪ್ರೀತಿಯಲ್ಲಿದೆ. ಆತ್ಮಿಕ ಕ್ಷೇತ್ರದಲ್ಲಿನ ನಮ್ಮ ನಿಲುವು ಆತನಿರುವಂತೆಏಯ ನಾವು ಈ ಲೋಕದಲ್ಲಿರುವುದರಿಂದ ಈಗಾಗಲೇ ಕಾಳಜಿ ವಹಿಸಲ್ಪಟ್ಟಿದೆ.

## ನಿಮಗಾಗಿ ದೇವರು ಹೊಂದಿರುವ ಪ್ರೀತಿಯನ್ನು ತಿಳಿಯಿರಿ, ನಂಬಿರಿ, ಪಡೆಯಿರಿ ಮತ್ತು ನೆಲೆಸಿರಿ

**1 ಯೋಹಾನ 4:16**
**ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ. ಅದನ್ನು ನಂಬಿದ್ದೇವೆ.**

ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ತಿಳಿಯಬೇಕು ಮತ್ತು ನಂಬಬೇಕು ಎಂದು ಯೋಹಾನನು ಬರೆಯುತ್ತಾನೆ. ದೇವರು ಪ್ರೀತಿ ಸ್ವರೂಪಿ. ಆತನನ್ನು ಅಂಗೀಕರಿಸುತ್ತೇವೆ ಮತ್ತು ಆತನ ಪ್ರೀತಿ ಪಡೆದುಕೊಳ್ಳುತ್ತೇವೆ. ದೇವರ ಪ್ರೀತಿಯಲ್ಲಿ ನಾವು ನೆಲೆಗೊಂಡಿದ್ದೇವೆ.

ನಮಗಾಗಿರುವ ತಂದೆಯ ಪ್ರೀತಿಯನ್ನು ನಾವು ತಿಳಿಯಬೇಕು, ನಂಬಬೇಕು, ಪಡೆಯಬೇಕು ಮತ್ತು ಅದರಲ್ಲಿ ನೆಲೆಸಬೇಕು.

## ತಿಳಿಯಿರಿ

ತಿಳಿಯುವುದು ಅಂದರೆ ಒಪ್ಪಿಗೆ ಕೊಡುವುದು, ಅರ್ಥ ಮಾಡಿಕೊಳ್ಳುವುದು, ನಿಶ್ಚಯವಾಗಿ ತಿಳಿಯುವುದು ಮತ್ತು ಅದರ ಕುರಿತು ನಿಶ್ಚಲವಾಗಿರುವುದು. ನಮಗಾಗಿರುವ ತಂದೆಯ ಪ್ರೀತಿಯ ಕುರಿತು ಸತ್ಯವನ್ನು ನಮಗೆ ಪ್ರಸ್ತುತ ಪಡಿಸುವ ನಮ್ಮ ಪ್ರಯತ್ನದಲ್ಲಿ ಆವರಿಸಲ್ಪಟ್ಟಿದ್ದೇವೆ. ನಾವು ವಚನಭಾಗ ಓದಿದ್ದೇವೆ ಮತ್ತು ನಮಗಾಗಿ ಇಟ್ಟಿರುವ ತಂದೆಯ ಪ್ರೀತಿಯನ್ನು ನಾವು ತಿಳಿದಿದ್ದೇವೆ.

## ನಂಬಿರಿ

ಈಗ ನಾವು ನಂಬಬೇಕು. ನಮ್ಮಲ್ಲಿ ನಂಬಿಕೆಯಿರಬೇಕು, ನಾವೇ ವಹಿಸಿಕೊಳ್ಳಬೇಕು ಮತ್ತು ಭರವಸೆಯಲ್ಲಿ ಬದ್ಧನಾಗು ಮತ್ತು ತಂದೆಯ ಪ್ರೀತಿಯಲ್ಲಿ ನಮ್ಮ ಭರವಸೆ ಇಡಬೇಕು. ದೇವರ ಪ್ರೀತಿಯನ್ನು ನಾವು ನಂಬುತ್ತೇವೆ. ನಾವು ದೇವರ ವಾಕ್ಯ ಓದುತ್ತೇವೆ. ಆತನ ವಾಕ್ಯವು ಸತ್ಯವಾಗಿದೆ. ನಮಗಾಗಿರುವ ತಂದೆಯ, ದೇವರ ಶ್ರೇಷ್ಠ ಪ್ರೀತಿಯ ಕುರಿತು ದೇವರ ವಾಕ್ಯವು ನಮಗೆ ಸುಳ್ಳು ಹೇಳುವುದಿಲ್ಲ. ನಮಗಾಗಿರುವ ದೇವರ ಶ್ರೇಷ್ಠ ಪ್ರೀತಿಯ ಕುರಿತು ಶಿಲುಬೆಯು ಸುಳ್ಳು ಹೇಳುವುದಿಲ್ಲ. ತಂದೆಯು ನಮಗಾಗಿ ಇಟ್ಟಿರುವ ಪ್ರೀತಿಯನ್ನು ನಾವು ನಂಬುತ್ತೇವೆ.

## ಪಡೆಯಿರಿ – ವೈಯುಕ್ತಿಕವಾಗಿ ಅನುಭವಿಸಿರಿ

ನಾವು ನಂಬುವಾಗ ನಾವು ಪಡೆದುಕೊಳ್ಳುತ್ತೇವೆ. ಇದು ನಮ್ಮ ಸ್ವಂತವಾಗಿರುತ್ತದೆ. ನಮಗಾಗಿರುವ ತಂದೆಯ ಪ್ರೀತಿಯನ್ನು ನಾವು ವೈಯಕ್ತಿಕವಾಗಿ ಅನುಭವಿಸಬಹುದು. ದೇವರು ಪ್ರೀತಿ ಸ್ವರೂಪಿ. ಆತನನ್ನು ಏನಾಗಿದ್ದಾನೆಂಬುದು ಇದು. ಆತನು ಪ್ರೀತಿಯಾಗಿರುವುದರಿಂದ ಆತನು ನಮ್ಮನ್ನು ಪ್ರೀತಿಸುತ್ತಾನೆ. ತಂದೆಯ ಪ್ರೀತಿಯನ್ನು ಅನುಭವಿಸುವ ಕ್ರಮದಲ್ಲಿ ನಾವು ಸುಮ್ಮನೆ ಪಡೆದುಕೊಳ್ಳುತ್ತೇವೆ. ಆತನ ಪ್ರೀತಿಯೊಡನೆ ನಮ್ಮನ್ನು ಅಪ್ಪಿಕೊಳ್ಳಲೂ ನಾವು ಬಿಡುತ್ತೇವೆ.

ಆತನು ಪ್ರೀತಿಯಾಗಿರುವುದರಿಂದ ಆತನು ನಿಮ್ಮನ್ನು ಪ್ರೀತಿಸಲೂ ಸುಮ್ಮನೆ ಅವಕಾಶ ನೀಡಿರಿ. ಯಾಕೆಂದರೆ ಆತನು ನಿಮ್ಮ ತಂದೆಯಾಗಿದ್ದಾನೆ.

..... ಆತನ ಉತ್ತಮ ಮಗುವಾಗಿದ್ದರಿಂದ ಅಲ್ಲ

..... ನೀವು ಇದನ್ನು ಸಂಪಾದಿಸಿದ್ದರಿಂದ ಅಲ್ಲ.

..... ನೀವು ಆತನಿಗೆ ಅಧಿಕವಾಗಿ ಕಾರ್ಯ ಮಾಡಿದ್ದೆನೆಂಬುದಾಗಿ ಅಲ್ಲ

..... ಆದರೆ ಆತನು ನಿಮ್ಮನ್ನು ಪ್ರೀತಿಸಲಿ, ಯಾಕೆಂದರೆ, ಆತನು ನಿಮ್ಮ ಪ್ರೀತಿಯನ್ನು ನೀವು ಸುಮ್ಮನೆ ಪಡೆದುಕೊಳ್ಳಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ.

ಹಿಂದಿನ ಅಧ್ಯಾಯದಲ್ಲಿ ನಾವು ನೋಡಿದ ಹಾಗೆ ಈ ರೀತಿ ಪೌಲನು ಪ್ರಾರ್ಥಿಸಿದ್ದಾನೆ. ನಮಗಾಗಿ ಇರುವ ದೇವರ ಅಗಾಧ ಪ್ರೀತಿಯನ್ನು ಮತ್ತು ತಂದೆಯ ಪ್ರೀತಿಯಲ್ಲಿ ಸುರಕ್ಷಿತವಾಗಿ ನೆಲೆಗೊಂಡು ಮತ್ತು ಆಳವಾಗಿ ಬೇರೂರಿಕೊಂಡಿರುವ ವೈಯಕ್ತಿಕ ಅನುಭವದಿಂದ ನಾವು ತಿಳಿಯಬೇಕು.

**ಎಫೆಸದವರಿಗೆ 3:17-19 (ಆ್ಯಂಪ್ಲಿಫೈಡ್ ಬೈಬಲ್)**
**ನಿಮ್ಮ ನಂಬಿಕೆಯ ಮೂಲಕವಾಗಿ ಕ್ರಿಸ್ತನು ನಿಮ್ಮ ಹೃದಯಗಳಲ್ಲಿ ವಾಸಿಸಲಿ ಮತ್ತು ನೀವು ಬೇರೂರಿದವರಾಗಿ (ಆಳವಾಗಿ) ಮತ್ತು ಪ್ರೀತಿಯಲ್ಲಿ ನೆಲೆಗೊಂಡಿರಿ (ಸುರಕ್ಷಿತವಾಗಿ). ಆತನ ವಿಶ್ವಾಸಿಗಳಾಗಿ ಆತನ ಪ್ರೀತಿಯಲ್ಲಿ (ಅಂತ್ಯವಿಲ್ಲದ ಪ್ರೀತಿ, ಅದ್ಭುತಕರವಾಗಿ ಪೂರ್ಣವಾಗಿ ಅನುಭವಿಸಲು) ಆಳವಾಗಿ ಮತ್ತು ಎತ್ತರವಾಗಿ ಮತ್ತು ಉದ್ದವಾಗಿ ಮತ್ತು ಅಗಲವಾಗಿ ನೆಲೆಗೊಂಡು ಅದನ್ನು ಗ್ರಹಿಸಿಕೊಳ್ಳಲೂ ಶಕ್ತರಾಗುತ್ತಾರೆ. ಆದ್ದರಿಂದ ಎಲ್ಲಾ ಜ್ಞಾನಕ್ಕೂ (ಅನುಭವವಿಲ್ಲದೆ) ಮೀರಿದ (ಮಾತ್ರ) ಕ್ರಿಸ್ತನ ಪ್ರೀತಿಯ ಮೂಲಕ ನಾವು ತಿಳುಕೊಳ್ಳುತ್ತೇವೆ. (ಪ್ರಾಯೋಗಿಕವಾಗಿ, ವೈಯುಕ್ತಿಕ ಅನುಭವದ ಮೂಲಕವಾಗಿ). ಆದ್ದರಿಂದ ನೀವು ದೇವರ ಎಲ್ಲಾ ಸಂಪೂರ್ಣತೆಯಿಂದ ನೀವು ತುಂಬಿಸಲ್ಪಡುತ್ತೀರಿ (ನಿಮ್ಮ ಅಸ್ತಿತ್ವದಾದ್ಯಂತ) ಆದ್ದರಿಂದ ದೇವರಿಂದ ಸ್ವತಃ ಸಂಪೂರ್ಣವಾಗಿ ತುಂಬಿಸಲ್ಪಟ್ಟು ತುಂಬಿರುವಂತಹ ದೇವರ ಪ್ರಸನ್ನತೆಯನ್ನು ನಿಮ್ಮ ಜೀವಿತದಲ್ಲಿ ಶ್ರೀಮಂತವಾಗಿ ನೀವು ಅನುಭವಿಸುತ್ತೇವೆ.**

ತಂದೆಯ ಪ್ರೀತಿಯ ಪ್ರಕಟನೆಯನ್ನು ನಾವು ಪಡೆದುಕೊಂಡು ಅದರ ಅಂಗೀಕಾರದ ಸಂಪೂರ್ಣ ಅರ್ಥ ಹೊಂದಿದಾಗ ನಮ್ಮ ಭಾವನೆಗಳ ಅಗತ್ಯತೆಗಳು ಪೂರೈಸಲ್ಪಡುತ್ತವೆ.

ತಂದೆಯ ಪ್ರೀತಿಯನ್ನು ಪಡೆದುಕೊಳ್ಳುವುದು – ಆಳವಾಗಿ ಭಾವನೆಗಳ ಸ್ವಸ್ಥತೆ ಮತ್ತು ನಮ್ಮ ಭಾವನೆಗಳ ಸಂಪೂರ್ಣತೆ ಮತ್ತು ಯೋಗಕ್ಷೇಮವಿರುವ ಸ್ಥಳಕ್ಕೆ ನಮ್ಮನ್ನು ತರುತ್ತದೆ.

ಆತನ ಪುತ್ರ ಅಥವಾ ಪುತ್ರಿಯಾಗಿರುವಂತಹ ನಮ್ಮ ಪೂರ್ಣವಾದ ಗುರುತನ್ನು ಹೊಂದುತ್ತೇವೆ.

## ಆತನ ಪ್ರೀತಿಯಲ್ಲಿ, ಬೇರೂರಿರಿ, ಸುರಕ್ಷಿತವಾಗಿ ಸ್ಥಾಪಿತರಾಗಿರಿ, ನೆಲೆಗೊಂಡಿರಿ, ಸುಮ್ಮನಿರಿ

**1 ಯೋಹಾನ 4:16 (ಮೆಸೇಜ್ ಬೈಬಲ್)**
**ದೇವರಿಂದ ಬರುವ ಪ್ರೀತಿಯನ್ನು ನಮ್ಮ ಹೃದಯದಲ್ಲಿ ಮತ್ತು ಆ ಪ್ರಾಣದಲ್ಲಿಟ್ಟುಕೊಂಡಿದ್ದೆಂಬುದು ಬಹಳ ಉತ್ತಮವಾಗಿ ನಮಗೆ ಗೊತ್ತಿದೆ. ದೇವರು ಪ್ರೀತಿ ಸ್ವರೂಪಿಯು. ನಾವು ಪ್ರೀತಿಯಲ್ಲಿ ಶಾಶ್ವತವಾಗಿ ನೆಲೆಗೊಳ್ಳುವಾಗ, ನಾವು ದೇವರಲ್ಲಿ ಜೀವಿಸುತ್ತೇವೆ ಮತ್ತು ದೇವರು ನಮ್ಮಲ್ಲಿ ಜೀವಿಸುತ್ತಾನೆ.**

ಆತನ ಪ್ರೀತಿಯನ್ನು ನಾವು ಒಂದು ಸಾರಿ ಅನುಭವಿಸಿದಾಗ, ನಮಗಾಗಿರುವ ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರಬೇಕು. ನೆಲೆಗೊಂಡಿರುವುದು ತಂದೆಯ ಪ್ರೀತಿಯಲ್ಲಿ. ಮುಂದುವರೆಯುವುದು, ಉಳಿದಿರುವುದು, ನೆಲೆ ನಿಂತಿರುವುದು, ಒಂದು ಶಾಶ್ವತವಾದ ವಾಸಸ್ಥಳ ತೆಗೆದುಕೊಳ್ಳುವುದು, ವಿಶ್ರಮಿಸು, ಬೇರೂರಿರು ಸುರಕ್ಷಿತವಾಗಿ ಸ್ಥಾಪಿಸಲ್ಪಟ್ಟಿರುವುದಾಗಿದೆ.

ತಂದೆಯ ಪ್ರೀತಿಯ ಅನುಭವದಿಂದ ಹೊರಗೆ ಅಥವಾ ಒಳಗೆ ಬರುವುದು ಸಾಂದರ್ಭಿಕವಾಗಿ ಅಥವಾ ಆಗಾಗ್ಗೆ ಭೇಟಿ ಕೊಡುವುದಕ್ಕಿಂತ ಇದು ವ್ಯತ್ಯಾಸಕರವಾಗಿದೆ. ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡು ವಿಶ್ರಮಿಸಬಹುದು ಮತ್ತು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಅಥವಾ ವಿಶ್ರಮಿಸುವ ಸ್ಥಾನದಲ್ಲಿ ನಾವು ಜೀವಿಸುತ್ತೇವೆ.

ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ಬೇರೆ ಯಾವುದು ನಮಗೆ ಗೊಂದಲ ಎಬ್ಬಿಸಲು ಬಿಡುವುದಿಲ್ಲ. ಯಾವುದು ನಮ್ಮನ್ನು ಕದಲಿಸುವುದಿಲ್ಲ. ಬಿರುಗಾಳಿ ಬರಬಹುದು, ಬಲವಾದ ಗಾಳಿಗಳು ಬೀಸಬಹುದು, ಅಲೆಗಳು ಏಳಬಹುದು. ಸವಾಲುಗಳ ಪರಿಸ್ಥಿತಿಗಳು ಮತ್ತು ಸಂಧಿಗ್ನ ಪರಿಸ್ಥಿತಿಗಳು ಬರಬಹುದು. ಆದರೆ ನಾವು ಆತನ ಪ್ರೀತಿಯಲ್ಲಿ ವಿಶ್ರಮಿಸುತ್ತೇವೆ. ಆತನ ಪ್ರೀತಿಯಿಂದ ನಮ್ಮನ್ನು ಅಧಿಕವಾದ ಪೂರ್ಣ ಜಯಶಾಲಿಗಳನ್ನಾಗಿ ಮಾಡುವಂತಹ ಸ್ಥಾನದಲ್ಲಿ ನಾವಿರುತ್ತೇವೆ.

ನಾವು ಆತನ ಪ್ರೀತಿಯಲ್ಲಿ ನೆಲೆಸಿರುವಾಗ ಜನರು ಆಕ್ರಮಣ ಮಾಡಬಹುದು. ಅವರು ಸುಮ್ಮನೆ ಹಾನಿ ಮಾಡಬಹುದು, ಸುಳ್ಳು ಆರೋಪ ಮಾಡಬಹುದು, ವಿರೋಧಿಸಬಹುದು ಮತ್ತು ಅಡ್ಡಿ ಪಡಿಸಬಹುದು. ಆದರೆ ಇದರಲ್ಲಿ ಯಾವುದು

ನಮ್ಮನ್ನು ಕದಲಗೊಳಿಸುವುದಿಲ್ಲ. ನಾವು ಆತನ ಪ್ರೀತಿಯಲ್ಲಿ ನೆಲೆಯೂರಿದ್ದೇವೆ. ನಾವು ಪ್ರೀತಿಯಿಂದ ಪ್ರತಿಕ್ರಿಯೆ ತೋರುತ್ತೇವೆ. ಪ್ರೀತಿಯು ಮಾಡುವಂತಹದ್ದನ್ನು ನಾವು ಮಾಡುತ್ತೇವೆ.

**ಚೆಫನ್ಯ 3:17**

**ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ. ನಿನ್ನನ್ನು ರಕ್ಷಿಸುವನು. ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು; ತನ್ನ ಪ್ರೀತಿಯಲ್ಲಿ ಮುಳುಗಿ ಮೌಲವಾಗಿರುವನು. ನಿನ್ನಲ್ಲಿ ಆನಂದಿಸಿ ಹರ್ಷ ಧ್ವನಿಗೈಯುವನು ಎಂದು ಹೇಳೋಣವಾಗುವದು.**

ಆತನ ಪ್ರೀತಿಯಲ್ಲಿ ದೇವರು ನಮ್ಮನ್ನು ಮೌನವಾಗಿರಿಸುತ್ತಾನೆ. ಒಂದು ಪುಟ್ಟ ಮಗು ಅಳುತ್ತಿರುವುದನ್ನು ಕಲ್ಪಿಸಿಕೊಳ್ಳಿ. ತಂದೆ–ತಾಯಿ ಮಗುವನ್ನು ಕೈಗಳಲ್ಲಿ ಎತ್ತಿಕೊಂಡು, ಮಗುವನ್ನು ಮುದ್ದಾಡಿ, ಮೌನಗೊಳಿಸುತ್ತಾರೆ ಮತ್ತು ಬೇಗನೆ ಮಗು ಶಾಂತವಾಗಿ ನಿದ್ರಿಸುತ್ತದೆ. ಅದೇ ರೀತಿಯಾಗಿ ದೇವರು ನಮ್ಮನ್ನು ಶಾಂತಗೊಳಿಸುತ್ತಾನೆ, ಸುಮ್ಮನಿರಿಸುತ್ತಾನೆ, ಮೌನಗೊಳಿಸುತ್ತಾನೆ ಮತ್ತು ವಿಶ್ರಮಿಸುವಂತೆ ಮಾಡುತ್ತಾನೆ. ನಮಗಾಗಿರುವ ಆತನ ಅಗಾಧವಾದ, ವಿಫಲವಾಗದ, ಮುರಿಯಲ್ಪಡದ ಪ್ರೀತಿಯ ಭರವಸೆ ನೀಡುತ್ತಾನೆ. ದೇವರ ಆತ್ಮನಿಂದ ತರಲ್ಪಟ್ಟಂತಹ ತಂದೆಯ ಪ್ರೀತಿಯ ಭರವಸೆಯು ನಮ್ಮ ಪ್ರಾಣಾತ್ಮಗಳ ಮೇಲೆ ವ್ಯಾಪಿಸಲ್ಪಡುತ್ತದೆ. ನಾವು ಆತನ ಪ್ರೀತಿಯಲ್ಲಿ ಶಾಂತವಾಗಿದ್ದೇವೆ.

## ತಂದೆಯ ಪ್ರೀತಿಯನ್ನು ಪಡೆಯಲು ಮತ್ತು ಅನುಭವಿಸಲು ಪ್ರಾರ್ಥನೆ

*ಪ್ರೀತಿಯ ಪರಲೋಕದ ತಂದೆಯೇ, ನಿನ್ನ ಶ್ರೇಷ್ಠವಾದ ಪ್ರೀತಿಯ ಭರವಸೆಯು ನನ್ನ ಹೃದಯವನ್ನು ತುಂಬಿಸಿರಿ, ಮತ್ತು ನನ್ನ ಮೇಲೆ ಬರಲಿ, ಹೊದಿಸಲಿ, ಆವರಿಸಲಿ ಮತ್ತು ನನ್ನನ್ನು ಮುಚ್ಚಲಿ. ನನಗಾಗಿರುವ ನಿಮ್ಮ ಶ್ರೇಷ್ಠ ಪ್ರೀತಿಯೊಡನೆ ವೈಯಕ್ತಿಕವಾದ ಮತ್ತು ಸ್ಪರ್ಶ ಸಂಧಿಸುವಿಕೆ ಈಗ ಕೊಡಿರಿ. ನನ್ನ ಅಂತರಾಳಕ್ಕೆ ನೂತನವಾದ ತಂದೆಯ ಪ್ರೀತಿಯನ್ನು ಸುರಿಸಿರಿ ಪವಿತ್ರಾತ್ಮನೆ. ದೇವರ ಪ್ರೀತಿಯು ನನ್ನ ಅಸ್ತಿತ್ವದ ಭಾಗಗಳಾದ ನನ್ನ ಪ್ರಾಣ, ನನ್ನ ಆತ್ಮ, ನನ್ನ ಚಿತ್ತ ಮತ್ತು ಭಾವನೆಗಳಲ್ಲಿ ತುಂಬಿ ಹೊರಸೂಸಲಿ. ನನ್ನ ಮನನೊಂದ ಪ್ರಾಣಾತ್ಮದ ಕ್ಷೇತ್ರಗಳ ಮೇಲೆ ನಿಮ್ಮ ಪ್ರೀತಿಯನ್ನು ಸುರಿಸಿರಿ. ನನ್ನ ಪೂರ್ಣನಾಗಿ ಮಾಡಿರಿ. ಎಲ್ಲಾ ನೋವುಗಳು, ಗಾಯಗಳು ಮತ್ತು ನಕಾರಾತ್ಮಕ ಭಾವನೆಗಳು ತೊಳೆಯಲ್ಪಡಲಿ. ತಪ್ಪಿತಸ್ಥ ಮನೋಭಾವ, ನಾಚಿಕೆ, ತಿರಸ್ಕಾರ, ಏಕಾಂಗಿತನದ ಭಾವನೆಗಳು, ಪರಿತ್ಯಾಗ, ಪ್ರತ್ಯೇಕತೆ ಇವೆಲ್ಲವೂ ನಿನ್ನ ಪ್ರೀತಿಯಿಂದ ತೊಳೆಯಲ್ಪಡಲಿ. ಎಲ್ಲಾ ಬಗೆಯ ಭಯವಾದ – ಭವಿಷ್ಯತ್ತಿನ ಭಯ, ಸೋಲಿನ*

*ಭಯ, ಇತರರನ್ನು ಪ್ರೀತಿಸಲು ಭಯ, ಇತರರು ನನ್ನ ಪ್ರೀತಿಸಲು ಆಸ್ಪದ ಕೊಡುವ ಭಯ, ಜನರ ಮೇಲೆ ವಿಶ್ವಾಸವಿಡುವುದರ ಭಯ – ಇವೆಲ್ಲವನ್ನು ತೊಳೆದುಬಿಡು.*

*ನನ್ನ ಗರ್ವ, ಸ್ವ–ಆತುಕೊಳ್ಳುವಿಕೆ, ನನ್ನ ಭಾವನೆಗಳ ಗೋಡೆ ಮತ್ತು ನಿಮ್ಮ ಪ್ರೀತಿಯನ್ನು ಅನುಭವಿಸುವುದರಲ್ಲಿ ನನ್ನ ಇರಿಸುವಂತಹ ರೀತಿಯಲ್ಲಿ ನಾನು ಬೆಳೆದು ಬಂದಿದ್ದೇನೆ ಅನ್ನುವಂತಹವುಗಳ್ನು ತಂದೆಯ ಪ್ರೀತಿಯು ಕಳಚಿ ಹಾಕಲಿ.*

*ನನ್ನ ಬಂಧನಗಳಾದ – ಕಾರ್ಯಕ್ಷಮತೆ, ಶ್ರಮಿಸುವುದು, ಪ್ರೀತಿಯನ್ನು ಪಡೆಯಲು ಪ್ರಯತ್ನಿಸುವುದು ಮತ್ತು ಅಂಗೀಕರಿಸಲ್ಪಡಬೇಕೆಂಬ ಬಂಧನಗಳಿಂದ ನಮ್ಮನ್ನು ಬಿಡುಗಡೆ ಮಾಡು. ನಿನ್ನ ಅಗಾಧವಾದ, ಪರಿಮಿತವಾದ, ಹತೋಟಿಯಿಲ್ಲದ ಮತ್ತು ಬದಲಾಗದ ಪ್ರೀತಿಯನ್ನು ಪಡೆಯುವ ಸ್ಥಳಕ್ಕೆ ನನ್ನನ್ನು ನಡೆಸು.*

*ನಿಮ್ಮ ಪ್ರೀತಿಯೊಡನೆ ಶಾಂತಗೊಳಿಸಿರಿ. ನಿಮ್ಮ ಪ್ರೀತಿಯಲ್ಲಿ ವಿಶ್ರಮಿಸುವ ಸ್ಥಾನಕ್ಕೆ ನನ್ನನ್ನು ತನ್ನಿರಿ. ನಾನು ಪರಲೋಕದ ತಂದೆಯ ಅಪ್ಪುಗೆಯನ್ನು ಪಡೆಯುತ್ತೇನೆ. ಯೇಸುವಿನ ನಾಮದಲ್ಲಿ ಆಮೆನ್.*

## ಪ್ರತಿಫಲನ

1. 1 ಕೊರಿಂಥದವರಿಗೆ 13:4–8ರಲ್ಲಿನ ವಾಕ್ಯವನ್ನು ಒಂದು ದೇವರ ವರ್ಣನೆಯಾಗಿ, ಪ್ರೀತಿಯ ವಿಧ, ದೇವರು ನಮಗಾಗಿ ಇಟ್ಟಿರುವ ಪ್ರೀತಿಯನ್ನು ಪ್ರತಿಬಿಂಬಿಸಿರಿ. ವೈಯಕ್ತಿಕವಾಗಿ ನಿಮಗಾಗಿ ತಂದೆಯ ಪ್ರೀತಿಯ ವರ್ಣನೆಯನ್ನು ಬರೆದಿಟ್ಟುಕೊಳ್ಳಿರಿ.

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

2. ಯೇಸುವನ್ನು ಪ್ರೀತಿಸುವ ರೀತಿಯಲ್ಲಿ ತಂದೆಯು ನಮ್ಮನ್ನು ಪ್ರೀತಿಸುವ ರೀತಿಯನ್ನು ಯೋಹಾನ 17:23,26ರಲ್ಲಿ ಅವಲೋಕಿಸಿರಿ. ವೈಯಕ್ತಿಕವಾಗಿ ನಿಮಗೆ ಇದರ ಅರ್ಥವೇನು?

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

3. ಇಂತಹ ಎಲ್ಲಾ ವಿಷಯುಗಳಲ್ಲಿ ನಾವು ಏಕೆ ಅಧಿಕವಾಗಿ ಜಯಶಾಲಿಗಳಾಗಿದದ್ದೇವೆಂಬುದನ್ನು ರೋಮಾಪುರದವರಿಗೆ 8:35-37ರ ಮೇಲೆ ಅವಲೋಕಿಸಿರಿ. ನಿಮ್ಮ ಜೀವಿತದ ಪರಿಸ್ಥಿತಿಗಳ ನಿಮ್ಮ ದೃಷ್ಟಿಕೋನದ ಮೇಲೆ ಇದು ಹೇಗೆ ಪರಿಣಾಮ ಬೀರುತ್ತದೆ?

..........................................................................................

..........................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

4. ಆ್ಯಂಪ್ಲಿಫೈಡ್ ಬೈಬಲ್‌ನಿಂದ 1 ಯೋಹಾನ 4:17–18 ವಾಕ್ಯಗಳನ್ನು ನೋಡಿರಿ, ಮತ್ತು ಆತನ ಪ್ರೀತಿಯು ನಮ್ಮಲ್ಲಿ ಪರಿಪೂರ್ಣಗೊಂಡದ್ದರ ಅರ್ಥವೇನು? ನಮ್ಮಲ್ಲಿ ಆತನ ಪ್ರೀತಿಯ ಸಂಪೂರ್ಣತೆ ಹೊಂದುವ ಸ್ಥಾನಕ್ಕೆ ನಾವು ಹೇಗೆ ಬರಬಹುದು? ಇದು ನಮಗೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಕುರಿತು ಚರ್ಚಿಸಿರಿ.

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

# 5

# ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದು

## ತಂದೆಯ ಪ್ರೀತಿಯನ್ನು ಅಂಗೀಕರಿಸುವುದು - ತಂದೆಯು ನನ್ನನ್ನು ಪ್ರೀತಿಸುತ್ತಾನೆ

ಆತನ ತಂದೆಯೊಡನೆ ಯೇಸುವಿನ ಸಂಬಂಧವನ್ನು ಗುರುತಿಸುವುದು ಅತ್ಯದ್ಭುತಕರವಾದುದಾಗಿದೆ. ಆತನಿಗಾಗಿರುವ ತಂದೆಯ ಪ್ರೀತಿಯನ್ನು ಕರ್ತನಾದ ಯೇಸುವು ಆಗಾಗ್ಗೆ ದೃಢೀಕರಿಸಿದ್ದಾನೆ ಮತ್ತು ಅಂಗೀಕರಿಸಿದ್ದಾನೆ. ಯೇಸುವಿಗಾಗಿ ಇರುವ ಆತನ ಪ್ರೀತಿಯ ನಿಮಿತ್ತದಿಂದ ತಂದೆಯು ಏನು ಮಾಡುತ್ತಿದ್ದಾನೆಂಬುದನ್ನು ತಿಳಿಯಪಡಿಸುತ್ತಾನೆ ಮತ್ತು ಆತನು ಸಹ ಗುರ್ತಿಸುತ್ತಾನೆ.

**ಯೋಹಾನ 3:35**
**ತಂದೆಯಾದ ದೇವರು ತನ್ನ ಮಗನನ್ನು ಪ್ರೀತಿಸಿ ಎಲ್ಲವನ್ನೂ ಆತನ ಕೈಯಲ್ಲಿ ಕೊಟ್ಟಿದ್ದಾನೆ.**

ತಂದೆಯು ಯೇಸುವಿನ ಕೈಗೆ ಎಲ್ಲವನ್ನು ಕೊಟ್ಟಿದ್ದಾನೆ.

**ಯೋಹಾನ 17:24**
**ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛಿಸುತ್ತೇನೆ.**

ಆತನು ತಂದೆಯಿಂದ ಪ್ರೀತಿಸಲ್ಪಟ್ಟಿದ್ದಾನೆ ಎಂದು ತಿಳಿದು ಆತನ ಇಚ್ಛೆಗಳನ್ನು ತಂದೆಗೆ ಯೇಸುವು ಪ್ರಾರ್ಥಿಸಿದನು ಮತ್ತು ವ್ಯಕ್ತ ಪಡಿಸಿದನು.

**ಯೋಹಾನ 10:17**
**ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ. ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ.**

ತಂದೆಯ ಚಿತ್ತವನ್ನು ಕೊಂಡೊಯ್ಯಲು ತಂದೆಗೆ ವಿಧೇಯನಾಗಿ ಯೇಸುವು ಪ್ರತಿಕ್ರಿಯಿಸುವನಾಗಿ ನಡೆದನು.

ಅದೇ ರೀತಿಯಾಗಿ ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಯೇಸುವನ್ನು ಪ್ರೀತಿಸಿದ ಪ್ರಕಾರ ಪ್ರೀತಿಸುತ್ತಾನೆ. ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಭೂಮಿಯ ಮೇಲೆ ನಮಗೆ ಆತನ ರಾಜ್ಯದ ನಿಯೋಜನೆಯನ್ನು ವಹಿಸಿಕೊಟ್ಟಿದ್ದಾನೆ. ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಾವು ಇಲ್ಲಿಯತನಕ ನೋಡಿದಂತಹ ವಿಷಯಗಳಿಗಿಂತ ಉನ್ನತವಾದವನ್ನು ಪ್ರಕಟಿಸುತ್ತಾನೆ ಮತ್ತು ನಮ್ಮ ಮೂಲಕವಾಗಿ ಆತನು ಮಾಡಬೇಕೆಂಬುದಾಗಿ ಇಚ್ಛಿಸುವ ಕಾರ್ಯಗಳನ್ನು ಪ್ರಕಟಪಡಿಸುತ್ತಾನೆ. ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ.

ಯೇಸುವು ಮಾಡಿದಂತಹ ರೀತಿಯಲ್ಲಿ ನಮಗಾಗಿರುವ ತಂದೆಯ ಪ್ರೀತಿಯನ್ನು ದೃಢೀಕರಿಸಬೇಕು ಮತ್ತು ಸ್ವೀಕರಿಸಬೇಕು.

## ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ

**ಯೋಹಾನ 15:9–10**

**ತಂದೆ, ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ. ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ.**

ಕರ್ತನಾದ ಯೇಸುವು ನಾವು ಆತನ ಪ್ರೀತಿಯಲ್ಲಿ ನೆಲೆಗೊಂಡಿರಲು ಆಹ್ವಾನಿಸಿದ್ದಾನೆ. ಆತನು ಸಹ ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿದ್ದನೆಂದು ಆತನು ವ್ಯಾಖ್ಯಾನಿಸಿದ್ದಾನೆ. ತಂದೆಯ ಪ್ರೀತಿಯಲ್ಲಿ ನೆಲೆಗೊಂಡವನಾಗಿ ಯೇಸುವು ಈ ಲೋಕದ ಜೀವನವನ್ನು ಜೀವಿಸಿದ್ದಾನೆ.

ಹಿಂದಿನ ಅಧ್ಯಾಯದಲ್ಲಿ ನಾವು ವ್ಯಾಖ್ಯಾನ ಮಾಡಿದಂತೆ ನೆಲೆಗೊಂಡಿರ್ರಿ ಎಂಬುದು ವಿಶ್ರಮಿಸು, ವಾಸಿಸು, ನೆಲೆಸಲು, ಉಳಿದಿರು, ಮುಂದುವರಿ ಎಂಬುದಾಗಿ ಅರ್ಥವಿದೆ.

ಇದು ಆಳವಾಗಿ ಬೇರೂರಿದ, ಸ್ಥಿರವಾಗಿ ನೆಟ್ಟಲ್ಪಟ್ಟಂತಹ ಮತ್ತು ಸುರಕ್ಷಿತವಾಗಿ ನೆಲೆಗೊಂಡಂತದ್ದನ್ನು ಸೂಚಿಸುತ್ತದೆ. ಆತನ ಪ್ರೀತಿಯಿಂದ ನಾವುಗಳು ಶಾಂತವಾಗಿರುವಂತಹ ಸ್ಥಳವಾಗಿದೆ.

ಈ ಉದಾಹರಣೆಯನ್ನು ಪರಿಗಣಿಸಿ:

**ಯೋಹಾನ 6:56-57,63**

**ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ಇರುತ್ತಾನೆ. ನಾನು ಅವನಲ್ಲಿ ಇರುತ್ತೇನೆ. ಜೀವಸ್ವರೂಪನಾದ ತಂದೆಯು ನನ್ನನ್ನು ಕಳುಹಿಸಿಕೊಟ್ಟಿರಲಾಗಿ ನಾನು ತಂದೆಯಿಂದ ಜೀವಿಸುತ್ತೇನೆ. ಅದರಂತೆ ನನ್ನನ್ನು ತಿನ್ನುವವನೇ ನನ್ನಿಂದ ಜೀವಿಸುವವನು. ಬದುಕಿಸುವಂಥದು ಆತ್ಮವೇ. ಮಾಂಸವು ಯಾವದಕ್ಕೂ ಬರುವುದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ, ಜೀವವಾಗಿಯೂ ಅವೆ.**

"ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯಿರಿ" ಎಂಬುದು "ಯೇಸುವನ್ನೇ ಸೇವಿಸುವುದಾಗಿದೆ." ಯೇಸುವನ್ನು ತಿನ್ನುವವನೇ ಯೇಸುವಿನಲ್ಲಿ ನೆಲೆಗೊಂಡಿರುವಾತನೆ. ಅದರ ನಿಮಿತ್ತದಿಂದ ಜೀವಿಸುತ್ತಾನೆ. ಆತನಿಗಾಗಿ – ಆತನಿಂದ ಅವನ ಜೀವನವನ್ನು ಜೀವಿಸುತ್ತಾನೆ. ಆತನ ಮಾಂಸದ ಮತ್ತು ರಕ್ತದ ಕುರಿತು ಮಾತನಾಡುವುದಾದರೆ, ಆತನು ಹೇಳಿರುವ ಮಾತುಗಳ ಪ್ರಕಾರ ಜೀವಿಸುವುದು ಮತ್ತು ಜೀವವನ್ನು ನೀಡುವ ಆತ್ಮನ ವಿಷಯಗಳು – ಆತ್ಮಿಕ ವಿಷಯಗಳನ್ನು ಯೇಸು ಉಲ್ಲೇಖಿಸಿದ್ದಾನೆ.

ಆದ್ದರಿಂದ ಆತನ ಪ್ರೀತಿಯಿಂದ ಜೀವಿಸುವುದು ಮತ್ತು ವಿಶ್ರಮಿಸುವುದೇ ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದಾಗಿದೆ. ಆತನ ಪ್ರೀತಿಯಲ್ಲಿ ನೆಲೆಸುವ ಮತ್ತು ಆತನ ಪ್ರೀತಿಯಲ್ಲಿ ಜೀವಿಸುವ ತಂದೆಯ ಪ್ರೀತಿಯಲ್ಲಿ ಯಾವಾಗಲೂ ನಾವು ನೆಲೆಗೊಂಡಿರಬೇಕು.

## ತಂದೆಯ ಪ್ರೀತಿಯಲ್ಲಿ ನೆಲೆಸುವುದು ಮತ್ತು ಜೀವಿಸುವುದು

**2 ಕೊರಿಂಥದವರಿಗೆ 13:14**

**ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ.**

ಪೌಲನ ಅಂತಿಮ ಮಾತುಗಳಲ್ಲಿರುವ ಒಂದು ಘೋಷಣೆಯೆಂದರೆ ಎಲ್ಲಾ ವಿಶ್ವಾಸಿಗಳೊಂದಿಗೆ ದೇವರ ಪ್ರೀತಿಯು ಇರುವುದಾಗಿದೆ. ತಂದೆಯ ಪ್ರೀತಿಯನ್ನು ಅನುಭವಿಸುವುದು ಒಂದು ಕ್ಷಣಿಕವಾದ ಸಂಗತಿಯಲ್ಲ ಎಂಬುದು ಇದರ ಅರ್ಥ. ಅದು ಮುಂದುವರೆಯುತ್ತಿರುವುದು – ಪುನ್ತಕವಾಗಿ – ಮುಂದುವರೆಯುವುದು, ಕ್ಷಣದಿಂದ ಕ್ಷಣಕ್ಕೂ ಆತನ ಪ್ರೀತಿಯನ್ನು ಅನುಭವಿಸುವುದಾಗಿದೆ. ನಾವು ಮುಂದುವರೆಯುತ್ತಲೆ

ಗುರುತಿಸುವಿಕೆಯಿಂದ ಜೀವಿಸಬೇಕು ಮತ್ತು ಪ್ರತಿದಿನದ ಜೀವನದಲ್ಲಿ ತಂದೆಯ ಪ್ರೀತಿಯನ್ನು ಅನುಭವಿಸಬೇಕು.

ಅಗಾಧವಾದ ಮತ್ತು ಅಪರಿಮಿತವಾದ ರೀತಿಯಲ್ಲಿ ತಂದೆಯಿಂದ ಪ್ರೀತಿಸಲ್ಪಟ್ಟಿದ್ದೇವೆ ಎಂಬುದನ್ನು ಅರಿತು ನಾವು ಪ್ರತಿದಿನ ಜೀವಿಸಬೇಕು. ಯಾಕಂದರೆ ತಂದೆಯ ಪ್ರೀತಿಯು ಯಾವಾಗಲೂ ನಮ್ಮೊಡನೆ, ನಮಗಾಗಿ ಮತ್ತು ನಮ್ಮ ಕಡೆಗೆ ಇರುತ್ತದೆ, ಪ್ರಿಯರಾದ ಮಗ ಅಥವಾ ಮಗಳು ಆಗಿ ನಾವು ಜೀವಿಸಬೇಕು. ನಾವುಗಳು ಪ್ರಿಯನಾಗಿರುವ ಅಥವಾ ದೇವರಿಗೆ ಪ್ರಿಯರಾಗಿರುವ ರೀತಿಯಲ್ಲಿ ಜೀವಿಸುತ್ತೇವೆ. ಆತನ ಪುತ್ರ ಮತ್ತು ಪುತ್ರಿಯರಾಗಿ ನಮ್ಮ ಗುರುತಿನಲ್ಲಿ ನಾವು ಜೀವಿಸುತ್ತೇವೆ. ನಾವು ಪುತ್ರತ್ವದ ಪ್ರಜ್ಞೆಯಿಂದ ಜೀವಿಸುತ್ತೇವೆ.

ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದು (ವಿಶ್ರಮಿಸು) ಮತ್ತು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಸ್ಥಳದಲ್ಲಿ ಜೀವಿಸುವುದು ಎಂಬುದರ ಅರ್ಥವೇನು? ಅಭ್ಯಾಸದಲ್ಲಿ ಇದು ಯಾವ ರೀತಿಯಾಗಿ ಕಾಣಿಸುತ್ತದೆ? ತಂದೆಯ ಪ್ರೀತಿಯಲ್ಲಿ ಒಬ್ಬ ವ್ಯಕ್ತಿಯು ನೆಲೆಗೊಂಡಿರುವುದು ಹೇಗೆ ಮತ್ತು ಪ್ರತಿದಿನದ ಜೀವಿತದಲ್ಲಿ ಒಬ್ಬನು (ಒಬ್ಬಳು) ತಂದೆಯ ಪ್ರೀತಿಯಲ್ಲಿ ಜೀವಿಸುವುದರಿಂದ ವರ್ತಿಸುವುದು ಮತ್ತು ನಡವಳಿಕೆ ಹೇಗೆ?

ಅಪೊಸ್ತಲನಾದ ಯೋಹಾನನು "ಯೇಸುವಿಗೆ ಪ್ರಿಯನಾದ ಶಿಷ್ಯನು" ಎಂಬುದಾಗಿ ತನ್ನನ್ನು ಉಲ್ಲೇಖಿಸಿಕೊಳ್ಳುತ್ತಾನೆ. (ಯೋಹಾನ 20:2 21:7,20). ಆದ್ದರಿಂದ ಅವನಿಗಾಗಿ ಇದ್ದಂತಹ ಕರ್ತನ ಪ್ರೀತಿಯನ್ನು ಅವನು ವೈಯಕ್ತಿಕವಾಗಿ ಪಡೆದಿದ್ದನು ಮತ್ತು ಅನುಭವಿಸಿದ್ದನು. ಯೋಹಾನನು ತನ್ನ ಮೊದಲ ಪತ್ರಿಕೆಯಲ್ಲಿ ತಂದೆಯ ಪ್ರೀತಿಯ ಕುರಿತು ಅಧಿಕವಾಗಿ ಬರೆಯುತ್ತಾನೆ ಮತ್ತು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದರ ಪ್ರಾಯೋಗಿಕ ಕಡೆಯದನ್ನು ಬರೆಯುತ್ತಾನೆ. ನಾವು ಇದನ್ನು ಐದು ಸರಳ ವ್ಯಾಖ್ಯಾನಗಳಿಂದ ಸಂಕ್ಷಿಪ್ತವಾಗಿ ಮತ್ತು ಸಾಂದ್ರೀಕರಿಸಿ ನೋಡೋಣ.

## *1) ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ದ್ವೇಷಕ್ಕೆ ಸ್ಥಳವಿರುವುದಿಲ್ಲ.*

**1 ಯೋಹಾನನು 2:9-11**

**ಬೆಳಕಿನಲ್ಲಿದ್ದೇನೆಂದು ಹೇಳಿಕೊಂಡು ತನ್ನ ಸಹೋದರನನ್ನು ದ್ವೇಷಿಸುವವನು. ಈವರೆಗೂ ಕತ್ತಲೆಯಲ್ಲಿದ್ದಾನೆ. ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ ಮತ್ತು**

**ಅವನಲ್ಲಿ ವಿಘ್ನಕರವಾದದ್ದು ಏನು ಇಲ್ಲ. ತನ್ನ ಸಹೋದರನನ್ನು ದ್ವೇಷಿಸುವವನು ಕತ್ತಲೆಯಲ್ಲಿದ್ದಾನೆ. ಕತ್ತಲೆಯಲ್ಲಿ ನಡೆದುಕೊಳ್ಳುತ್ತಾನೆ. ಕತ್ತಲೆಯಲ್ಲಿ ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ ತಾನು ಎಲ್ಲಿಗೆ ಹೋಗುತ್ತಾನೋ ಅವನಿಗೆ ತಿಳಿಯದು.**

(1 ಯೋಹಾನನು 3:14–15; 1 ಯೋಹಾನನು 4:20–21 ನೋಡಿರಿ)

ಯೋಹಾನನು ಅವನ ಪತ್ರಿಕೆಗಳಲ್ಲಿ ಅನೇಕ ಸಮಯಗಳಲ್ಲಿ ಪುನರಾವರ್ತಿಸುತ್ತಾನೆ. ತಂದೆಯ ಪ್ರೀತಿಯಲ್ಲಿ ನಾವು ನೆಲೆಗೊಂಡು ಜೀವಿಸುವಾಗ, ನಮ್ಮ ಜೀವಿತದಿಂದ ದ್ವೇಷವನ್ನು ತುಂಬಾ ದೂರದಲ್ಲಿಡಲೂ ದೃಢ ಪ್ರಯತ್ನ ಮಾಡಬೇಕೆಂಬುದಾಗಿ ಹೇಳುತ್ತಾನೆ. ನಮ್ಮಲ್ಲಿ ನೆಲೆಸಿರುವಂತಹ ಬೇರೆಯವರ ಬಗೆಗಿನ ದ್ವೇಷವನ್ನು ನಾವು ತ್ಯಜಿಸುತ್ತೇವೆ. ದ್ವೇಷವು ಅಪಾಯಕಾರಿಯಾದದು. ನಮ್ಮ ಹೃದಯದಲ್ಲಿ ಸಹೋದರನ ಕಡೆಗೇ ದ್ವೇಷ ಹೊಂದಿದ್ದರೆ ಬೆಳಕಿನಲ್ಲಿ ನಡೆಯುತ್ತಿದ್ದೇವೆ ಎಂಬುದಾಗಿ ಅಂದುಕೊಂಡರೂ ನಾವುಗಳು ಸಾಮಾನ್ಯವಾಗಿ ಅಂಧಕಾರದಲ್ಲಿಯೂ, ಕತ್ತಲೆಯಲ್ಲಿಯು ನಡೆಯುವವರಾಗಿರುತ್ತೇವೆ. ನಾವು ಯಾವ ಕಡೆಗೆ ಹೋಗುತ್ತೇವೆ ಎಂಬುದು ತಿಳಿಯುವುದಿಲ್ಲ, ಮಳಿಗೆಯನ್ನುಂಟು ಮಾಡಲೂ ಸುತ್ತಲೂ ತಡವರಿಸುತ್ತೇವೆ ಮತ್ತು ಬದಲಾಗಿ ಮುಗ್ಗರಿಸುತ್ತೇವೆ ಮತ್ತು ಬಿದ್ದು ಹೋಗುತ್ತೇವೆ.

ಜನರು ನಮಗೆ ತಪ್ಪೆಸಗುವುದನ್ನು ತಡೆಯಲಾಗುವುದಿಲ್ಲ. ಆದರೆ ನಾವು ಹಗೆತನವನ್ನು ತಿರಸ್ಕರಿಸುತ್ತೇವೆ. ಜನರು ಹೇಳುವಂತಹವುಗಳು ಮತ್ತು ಮಾಡುವಂತಹವುಗಳ ನಮಗೆ ನೋವುಂಟು ಮಾಡಬಹುದು. ಆದರೆ ಅದು ನಮ್ಮಿಂದ ಹೋಗಲಿ ಎಂಬ ಆಯ್ಕೆಯನ್ನು ಮತ್ತು ಎಲ್ಲಾ ಕಡೆಗೂ ನಮ್ಮೊಂದಿಗೆ ಆ ನೋವನ್ನು ತೆಗೆದುಕೊಂಡು ಹೋಗುವದು ಬೇಡ. ತಪ್ಪೆಸಗುವುದು ಮತ್ತು ನೋವು ಸಾಮಾನ್ಯವಾಗಿ ಕೊರಗುವಂತೆ ಮಾಡುತ್ತದೆ ಮತ್ತು ದ್ವೇಷವಾಗಿ ಬದಲಾಗುತ್ತದೆ. ದ್ವೇಷವು ನಮ್ಮನ್ನು ಅಂಧರನ್ನಾಗಿಸುತ್ತದೆ ಮತ್ತು ಕತ್ತಲೆಯಲ್ಲಿರಿಸುತ್ತದೆ, ಹೇಗಾದರೂ, ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡು ಅದರಲ್ಲಿ ಜೀವಿಸುವಾಗ, ತಪ್ಪೆಸಗುವುದು ಮತ್ತು ನೋವು ನಮ್ಮಲ್ಲಿ ಇರಲೂ ಸ್ಥಳವಿರುವುದಿಲ್ಲ.

## *2. ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ಹಿಂಸೆಯು ನಮಗೆ ಎಚ್ಚರಿಕೆ ನೀಡುವುದಿಲ್ಲ ಮತ್ತು ಶುದ್ಧಿಯು ನಮ್ಮ ಜೀವನದ ಮಾರ್ಗವಾಗಿರುತ್ತದೆ.*

**1 ಯೋಹಾನನು 3:1-3,13**
**ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವುದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟದ್ದಾನೆ ನೋಡಿರಿ. ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದುಕೊಳ್ಳುವುದಿಲ್ಲ. ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ. ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ. ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು. ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ. ಸಹೋದರರೇ, ಲೋಕವು ನಿಮ್ಮನ್ನು ದ್ವೇಷಿಸಿದರೆ ಆಶ್ಚರ್ಯಪಡಬೇಡಿರಿ.**

ಆತನ ಸ್ವಂತ ಮಕ್ಕಳಾಗಿ ನಮ್ಮನ್ನು ಮಾಡುವುದರಲ್ಲಿ ತಂದೆಯು ಇಟ್ಟಿರುವ ಪ್ರೀತಿಯು ದುಬಾರಿ ಮತ್ತು ಅಗಾಧತೆಯನ್ನು ಯೋಹಾನನು ಘೋಷಿಸುತ್ತಾನೆ. ಆದರೆ ದೇವರಿಂದ ಪ್ರೀತಿಸುವವರಾಗಿ ನಾವು ಸಿದ್ಧವಾಗಿರಲೂ ಕೆಲವು ವಿಷಯಗಳು ಇಲ್ಲಿವೆ: (ಅ) ಲೋಕವು ನಮ್ಮನ್ನು ತಿಳುಕೊಳ್ಳುವುದಿಲ್ಲ ಮತ್ತು ನಮ್ಮನ್ನು ದ್ವೇಷಿಸುತ್ತದೆ (ಆ) ಆತನು ಶುದ್ಧನಾಗಿರುವಂತೆಯೇ ನಮ್ಮನ್ನು ಶುದ್ಧಿ ಮಾಡಿಕೊಳ್ಳುತ್ತೇವೆ.

ತಂದೆಯ ಪ್ರೀತಿಯಲ್ಲಿ ನೆಲೆಗೊಂಡು ಜೀವಿಸುವಾಗ ಲೋಕವು ನಮ್ಮನ್ನು ದೇವರ ಮಕ್ಕಳೆಂದು ತಿಳಿದುಕೊಂಡಿಲ್ಲ ಎಂಬುದರಲ್ಲಿ ಎಚ್ಚರಿಕೆಗೊಂಡಿರುವುದಿಲ್ಲ. ಲೋಕವು ನಮ್ಮನ್ನು ದ್ವೇಷಿಸುತ್ತದೆ ಮತ್ತು ಹಿಂಸಿಸುತ್ತದೆ ಎಂಬುದಾಗಿಯೂ ಎಚ್ಚರಿಕೆಯಲ್ಲಿ ನಾವುಗಳು ಇರುವುದಿಲ್ಲ.

ನಾವು ಆತನ ಮಕ್ಕಳಾಗಿರುವುದರಿಂದ, ಆತನಂತೆಯೇ ನಾವು ಮಾಡಲ್ಪಡುತ್ತೇವೆ, ಎಂಬುದಾಗಿ ಕರ್ತನು ಪ್ರಕಟಿಸುವುದನ್ನು ನಾವು ತಿಳಿದ ನಿಮಿತ್ತದಿಂದ ನಾವು ಅದ್ಭುತಕರವಾದ ನಿರೀಕ್ಷೆ ಹೊಂದಿದ್ದೇವೆ ಮತ್ತು ಈ ನಿರೀಕ್ಷೆಯಿಂದ ನಮ್ಮ ಜೀವಿತಗಳನ್ನು ಶುದ್ಧಿ ಮಾಡಿಕೊಳ್ಳುತ್ತೇವೆ. ಆದ್ದರಿಂದ ನಮಗಾಗಿರುವ ತಂದೆಯ ಪ್ರೀತಿಯಲ್ಲಿ ನೆಲೆಗೊಂಡು ಜೀವಿಸುವಾಗ ಶುದ್ಧಿಯು ಜೀವಿತದ ಮಾರ್ಗವಾಗುತ್ತದೆ. ಆತನ ಪ್ರೀತಿಯು ಶುದ್ಧತೆಗೆ ನಮ್ಮನ್ನು ಸೆಳೆಯುತ್ತದೆ ಮತ್ತು ತಂದೆಯನ್ನು ಮೆಚ್ಚಿಸದೇ ಇರುವಂತದ್ದನ್ನು ತಿರಸ್ಕರಿಸುತ್ತದೆ.

## *3) ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ ನಾವು ತ್ಯಾಗ ಮಾಡುತ್ತೇವೆ ಮತ್ತು ಹಂಚಿಕೊಳ್ಳುತ್ತೇವೆ.*

**1 ಯೋಹಾನ 3:16–18**

**ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದುಬಂದಿದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಹಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? ಪ್ರಿಯರಾದ ಮಕ್ಕಳೇ ನಾವು ಬರೀ ಮಾತಿನಿಂದಾಗಲಿ, ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು. ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ, ಸತ್ಯದಲ್ಲಿಯೋ ತೋರಬೇಕು.**

ಯೇಸುವು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟಿದ್ದರಿಂದ, ಇದರ ಮೂಲಕವಾಗಿ ತಂದೆಯ ನಮಗಾಗಿ ಇಟ್ಟಿರುವ ಪ್ರೀತಿಯನ್ನು ತಿಳಿಯುತ್ತೇವೆ. ಅರ್ಥಮಾಡಿಕೊಳ್ಳುತ್ತೇವೆ ಮತ್ತು ಅನುಭವಿಸುತ್ತೇವೆ. ಇದು ಇತರರಿಗಾಗಿ ಇದೇ ರೀತಿಯಲ್ಲಿ ಮಾಡಬೇಕೆಂದು ನಮ್ಮನ್ನು ನಡೆಸುತ್ತದೆ. ನಾವು ಇತರರಿಗಾಗಿ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ನಾವು ಇತರರ ಲಾಭಗಳಿಗಾಗಿ ನಾವು ತ್ಯಾಗ ಮಾಡುತ್ತೇವೆ. ಇತರರ ಭೌತಿಕ ಅಗತ್ಯತೆಗಳನ್ನು ಹಂಚುವುದು ಮತ್ತು ಕೊಡುವುದರಿಂದ "ಕ್ರಿಯೆ ಮತ್ತು ಸತ್ಯದಲ್ಲಿ" ಇದನ್ನು ಪ್ರಾಯೋಗಿಕ ರೀತಿಯಲ್ಲಿ ಮಾರ್ಪಡಿಸುತ್ತೇವೆ.

ಅಪೊಸ್ತಲನಾದ ಪೌಲನು ಆತನ ಸ್ವಂತ ಸೇವೆಯ ಕುರಿತು ಹಂಚಿಕೊಳ್ಳುವುದು ಈ ಕೆಳಗಿನ ವಾಕ್ಯಗಳಲ್ಲಿದೆ

**2 ಕೊರಿಂಥದವರಿಗೆ 5:14–15**

**ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರವು ರಕ್ಷಣಾ ಮಾರ್ಗದಲ್ಲಿರುವವರಲ್ಲಿಯೂ ನಾಶನ ಮಾರ್ಗದಲ್ಲಿರುವವರಲ್ಲಿಯೂ ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ.**

ದೇವರ ಪ್ರೀತಿಯಿಂದ ನಾವು ಕ್ರಿಯೆಗೆ ಪ್ರೇರಿಸಲ್ಪಟ್ಟಿದ್ದೇವೆ, ಆಸಕ್ತಿ ಹೊಂದಿದ್ದೇವೆ. ವ್ಯಾಪನಗೊಂಡಿದ್ದೇವೆ ಮತ್ತು ಒತ್ತಾಯಿಸಲ್ಪಟ್ಟಿದ್ದೇವೆ. ಯೇಸುಕ್ರಿಸ್ತನ ಜೀವಿತದ ಮೂಲಕವಾಗಿ ಇದನ್ನು ನಾವು ನೋಡುತ್ತೇವೆ. ಆತನು ಇದನ್ನು ನಮಗಾಗಿ ಕೊಟ್ಟಿದ್ದಾನೆ. ಆದ್ದರಿಂದ ನಾವು ಇನ್ನೂ ನಮಗೋಸ್ಕರ ಜೀವಿಸದೇ ಯೇಸುವಿಗಾಗಿ ಜೀವಿಸುತ್ತೇವೆ.

**ಯೋಹಾನ 15:12-13**
**ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನಾನು ಕೊಡುವ ಆಜ್ಞೆಯಾಗಿದೆ. ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ.**

ತನ್ನ ಪ್ರಾಣವನ್ನೇ ಕೊಡುವಂತದ್ದು ಹೆಚ್ಚಿನ ಪ್ರೀತಿಯ ವ್ಯಕ್ತತೆಯಾಗಿದೆ. ಯೇಸುವು ಇದನ್ನು ತೋರಿಸಿದ್ದಾನೆ. ಶಿಲುಬೆಯ ಮೇಲೆ ಆತನು ಸ್ವ-ಪ್ರಾಣವನ್ನೇ ಕೊಟ್ಟಿದ್ದಾನೆ. ಇದರ ಅಭ್ಯಾಸದಲ್ಲಿ ತಮ್ಮ ಜೀವಿತಗಳನ್ನು ಕೊಡುವುದರಲ್ಲಿ ಕೆಲವರು ಮರಣವನ್ನು ಎದುರುಗೊಳ್ಳಬಹುದು. ಇನ್ನೊಬ್ಬರಿಗೆ ಲಾಭವಾಗುವ ಕ್ರಮದಲ್ಲಿ - ನಮ್ಮ ಸ್ವಂತ ಸ್ವಾಸ್ಥ್ಯ, ಅವಕಾಶಗಳು ಸವಲತ್ತು ಮುಂತಾದವುಗಳ ತ್ಯಾಗವನ್ನು ಅಥವಾ ಬಿಟ್ಟುಕೊಡುವುದನ್ನು ನಮ್ಮಲ್ಲಿ ಅನೇಕರು ಮಾಡಬೇಕಾಗುತ್ತದೆ.

## *4. ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ನಾವು ಪ್ರೀತಿಯಲ್ಲಿ ನಡೆಯುತ್ತೇವೆ*

**1 ಯೋಹಾನ 4:7-12**
**ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯ ದೇವರಿಂದಾಗಿದೆ ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ, ದೇವರನ್ನು ಬಲ್ಲವನೂ ಆಗಿದ್ದಾನೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ. ಯಾಕಂದರೆ ದೇವರು ಪ್ರೀತಿ ಸ್ವರೂಪಿಯು ದೇವರು ತನ್ನ ಒಬ್ಬನೇ ಮಗುವನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ. ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತದೆ. ಪ್ರಿಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ. ದೇವರನ್ನು ಯಾರು ಎಂದು ನೋಡಿಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ.**

ನಾವು ತಂದೆಯ ಪ್ರೀತಿಯನ್ನು ಅನುಭವಿಸಿದ್ದರಿಂದ, ನಾವು ಸಹಾಯ ಮಾಡಲಾಗುವುದಿಲ್ಲ. ಆದರೆ ಇತರೆ ಜನರಿಗಾಗಿ ಪ್ರೀತಿಯೆಲ್ಲ ಹೊರಸೂಸಬಹುದು. ಪ್ರೀತಿಯಲ್ಲಿ ನಡೆಯುವುದೆಂಬುದರ ಅರ್ಥವು 1 ಕೊರಿಂಥದವರಿಗೆ 13:4-8ರಲ್ಲಿ ಹೀಗೆ ವಿವರಿಸಲ್ಪಟ್ಟಿದೆ. "ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ. ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ. ಮರ್ಯಾದೆಗೆಟ್ಟು ನಡೆಯುವುದಿಲ್ಲ. ಸ್ವ ಪ್ರಯೋಜನವನ್ನು ಚಿಂತಿಸುವುದಿಲ್ಲ. ಸಿಟ್ಟುಗೊಳ್ಳುವುದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಅನ್ಯಾಯವನ್ನು

ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ. ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ. ಪ್ರವಾದನೆಗಳಾದರೋ ಇಲ್ಲದಂತಾಗುವವು. ವಾಣಿಗಳೋ ನಿಂತು ಹೋಗುವವು. ವಿದ್ಯೆಯೋ ಇಲ್ಲದಂತಾಗುವದು" ದೇವರ ಪ್ರೀತಿಯೊಡನೆ ನಾವು ಜನರೊಂದಿಗೆ ಸಂಬಂಧಿಸಿಕೊಳ್ಳಲೂ ಆರಿಸಕೊಂಡಿದ್ದೇವೆ.

ಆತನ ಪ್ರೀತಿಯಲ್ಲಿ ನಡೆಯಲೂ ತಂದೆ ಪ್ರೀತಿಯಿಂದ ನಾವು ಅಧಿಕಾರ ಹೊಂದಿದ್ದೇವೆ. ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ನಡೆಯುವಾಗ, ಆತನ ಪ್ರೀತಿಯು ಪರಿಪೂರ್ಣವಾಗಿ – ಸಂಪೂರ್ಣವಾಗಿ ಮಾಡಲ್ಪಟ್ಟಿದೆ. – ನಮ್ಮಲ್ಲಿರುವ ಇದರ ಸಂಪೂರ್ಣ ಉದ್ದೇಶಕ್ಕೆ ತರುತ್ತದೆ. ನಾವು ಪ್ರೀತಿಯಲ್ಲಿ ನಡೆಯುವಾಗ ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ಅದರ ಅಂದುಕೊಂಡ ಉದ್ದೇಶವನ್ನು ನೆರವೇರಿಸುತ್ತದೆ ಮತ್ತು ಸಂಪೂರ್ಣಗೊಳಿಸುತ್ತದೆ ಮತ್ತು ಆತನ ಪ್ರೀತಿಯು ನೆರವೇರಿಸಲ್ಪಡುತ್ತದೆ. ದೇವರು ಸ್ವತಃ ನಮ್ಮ ಮೂಲಕ ಜೀವಿಸುವುದು ಮತ್ತು ವಾಸಿಸುವುದು ಇದಾಗಿದೆ.

## *5) ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ನಮ್ಮ ಆತ್ಮಿಕ ಸ್ಥಾನ ಗುರುತಿಸುತ್ತೇವೆ. ಭಯದಿಂಂದ ನಾವು ಸ್ವತಂತ್ರರಾಗುತ್ತೇವೆ ಮತ್ತು ಆತನನ್ನು ಪ್ರೀತಿಸಲೂ ಸ್ವತಂತ್ರರಾಗುತ್ತೇವೆ.*

**1 ಯೋಹಾನ 4:17–19**

**ನ್ಯಾಯತೀರ್ಪಿನ ದಿನದಲ್ಲಿ ನಮಗಿರುವ ಧೈರ್ಯದಲ್ಲಿಯೂ ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂತು. ಯಾಕಂದರೆ, ಕ್ರಿಸ್ತನು ಎಂಥವನಾಗಿದ್ದಾನೋ, ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ. ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು. ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿ ಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆ ಬಂದವನಲ್ಲ.**

ದೇವರ ಪ್ರೀತಿಯು ನಮ್ಮಲ್ಲಿ ಪೂರ್ಣವಾಗಿರುವಾಗ, ನಾವು ಆತನ ಪ್ರೀತಿಯನ್ನು ಪಡೆದುಕೊಂಡ ಮತ್ತು ನಮ್ಮಲ್ಲಿ ಅದರ ಪೂರ್ಣ ಕಾರ್ಯವನ್ನು ಮಾಡಲೂ ಅವಕಾಶ ಕೊಡುವಂತಹ ಸ್ಥಳದಲ್ಲಿರುತ್ತವೆ. (ಅ) ದೇವರ ಮುಂದೆ ನಾವು ಧೈರ್ಯವಾಗಿದ್ದೇವೆ ಮತ್ತು ನ್ಯಾಯ ತೀರ್ಪಿನ ಯಾತನೆಯ ಭಯ, ಒಂದು ಅಸ್ಪಷ್ಟ ಭಾವನೆಯಿಂದ ಜೀವಿಸುವುದಿಲ್ಲ. (ಆ) ಕ್ರಿಸ್ತನು ಎಂಥವನಾಗಿದ್ದಾನೋ ಅಂತಹ ಆತ್ಮಿಕ ಕ್ಷೇತ್ರದಲ್ಲಿ ನಮ್ಮನ್ನು ಗುರ್ತಿಸುತ್ತೇವೆ. ಆದ್ದರಿಂದ ಅಂಥವರಾಗಿಯೇ ಮತ್ತು ಈ ರೀತಿಯಾಗಿ ಈ

ಲೋಕದಲ್ಲಿ ಜೀವಿಸುತ್ತೇವೆ. (ಇ) ಆತನು ನಮಗಾಗಿಟ್ಟಿರುವ ಪ್ರೀತಿಯ ನಿಮಿತ್ತ ನಾವು ಆತನ ಪ್ರೀತಿಯಲ್ಲಿ ಹೊರಸೂಸಬಹುದು.

ತಂದೆಯ ಪ್ರೀತಿಯಲ್ಲಿ ಜೀವಿಸುವುದು ಮತ್ತು ನೆಲೆಗೊಂಡಿರುವುದನ್ನೂ ಸಂಕ್ಷಿಪ್ತವಾಗಿ ನೋಡುವುದಾದರೆ:

1. ಇತರರ ಕಡೆಗೆ ದ್ವೇಷಕ್ಕೆ ನಮ್ಮಲ್ಲಿ ಸ್ಥಳವಿಲ್ಲ.
2. ಹಿಂಸೆಯು ನಮಗೆ ಎಚ್ಚರಿಕೆ ನೀಡುವುದಿಲ್ಲ.
3. ಶುದ್ಧತ್ವವು ನಮ್ಮ ಜೀವಿತದ ಮಾರ್ಗವಾಗಿದೆ.
4. ಇತರರೊಂದಿಗೆ ಹಂಚಿಕೊಳ್ಳುತ್ತೇವೆ ಮತ್ತು ತ್ಯಾಗ ಮಾಡುತ್ತೇವೆ.
5. ದೇವರ ಬಗೆಯ ಪ್ರೀತಿಯಲ್ಲಿ ನಾವು ನಡೆಯುತ್ತೇವೆ.
6. ಯೇಸು ಎಂಥವನಾಗಿದ್ದಾನೋ ನಾವು ಅಂಥವರಾಗಿರುವಂತಹ ನಮ್ಮ ಆತ್ಮಿಕ ನಿಲುವು ಗುರ್ತಿಸುತ್ತೇವೆ ಮತ್ತು ಈ ಲೋಕದಲ್ಲಿ ಅದರಂತೆಯೇ ಜೀವಿಸುತ್ತೇವೆ.
7. ದೇವರ ಮುಂದೆ ನ್ಯಾಯತೀರ್ಪು ಮತ್ತು ಖಂಡನೆಯ ಭಯದಿಂದ ನಾವು ಸ್ವತಂತ್ರವಾಗಿದ್ದೇವೆ.
8. ಆತನು ಮೊದಲು ನಮ್ಮನ್ನು ಪ್ರೀತಿಸುವುದರಿಂದ ಆತನ ಪ್ರೀತಿಯೊಡನೆ ತುಂಬಿ ಹೊರಸೂಸುತ್ತೇವೆ.

ನಾವು ಇದನ್ನು ಅಂಗೀಕರಿಸೋಣ ಮತ್ತು ದೃಢೀಕರಿಸೋಣ:

*"ನನಗಾಗಿರುವ ತಂದೆಯ ಪ್ರೀತಿಯಲ್ಲಿ ನಾನು ನೆಲೆಗೊಳ್ಳುತ್ತೇನೆ. ತಂದೆಯ ಪ್ರೀತಿಯ ಜೀವಿಸುತ್ತೇನೆ ಮತ್ತು ವಿಶ್ರಮಿಸುತ್ತೇನೆ. ನನ್ನ ಹೃದಯದಲ್ಲಿ ದ್ವೇಷಕ್ಕೆ ಜಾಗವಿಲ್ಲ. ಲೋಕವು ನನ್ನನ್ನು ಗುರ್ತಿಸದಿದ್ದರೂ ಅಥವಾ ನನ್ನನ್ನು ಹಿಂಸಿಸಿದರೂ ನಾನು ತಳಮಳಗೊಳ್ಳುವುದಿಲ್ಲ. ಶುದ್ಧತೆಯು ನನ್ನ ಜೀವಿತದ ದಾರಿಯಾಗಿದೆ. ಆತನು ಶುದ್ಧನಾಗಿರುವಂತೆ ನನ್ನನ್ನು ಶುದ್ಧಪಡಿಸಿಕೊಳ್ಳುತ್ತೇನೆ. ನಾನು ತ್ಯಾಗ ಮಾಡುತ್ತೇನೆ, ಉದಾರವಾಗಿ ಕೊಡುತ್ತೇನೆ ಮತ್ತು ನನಗೆ ದೇವರು ಆಶೀರ್ವಾದ ಮಾಡಿದವುಗಳೊಂದಿಗೆ ಹಂಚಿಕೊಳ್ಳುತ್ತೇವೆ. ಜನರ ಕಡೆಗೆ ಪ್ರೀತಿಯಲ್ಲಿ ನಾನು ನಡೆಯುತ್ತೇನೆ. ಆತನ ಪ್ರೀತಿಯ ನಿಮಿತ್ತದಿಂದ ಆತನಲ್ಲಿರಬೇಕೆಂಬುದಾಗಿ ದೇವರು ನನ್ನನ್ನು ಹೇಗೆ ಸೃಷ್ಟಿಸಿದ್ದಾನೆಂಬುದು ನನಗೆ ಗೊತ್ತು. ಕ್ರಿಸ್ತನಂತೆಯೇ, ನಾನು ಇರುವವನಾಗಿದ್ದೇನೆ – ದೇವರ ಸ್ವಾಸ್ಥ್ಯಗಾರನಾಗಿ*

*ಮತ್ತು ಕ್ರಿಸ್ತನೊಂದಿಗೆ ಜಂಟಿ–ಬಾಧ್ಯಸ್ಥನಾಗಿದ್ದೇನೆ. ಎಲ್ಲಾ ತಪ್ಪಿತಸ್ಥ ಮನೋಭಾವ, ನಾಚಿಕೆ ಮತ್ತು ಖಂಡನೆಯಿಂದ ಸ್ವತಂತ್ರವಾಗಿದ್ದೇನೆ. ನನ್ನ ಪರಲೋಕದ ತಂದೆಯನ್ನು ಪ್ರೀತಿಸಲೂ ನಾನು ಸ್ವತಂತ್ರನಾಗಿದ್ದೇನೆ. ಆತನು ಮೊದಲು ನನ್ನನ್ನು ಪ್ರೀತಿಸಿದ್ದರಿಂದ ನಾನು ಆತನನ್ನು ಪ್ರೀತಿಸುತ್ತೇನೆ.*

## ವಿಧೇಯತೆ, ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದರ ಕೀಲಿಕೈಯಾಗಿದೆ

***ಯೇಸುವು ತಂದೆಗೆ ವಿಧೇಯನಾಗಿ ನಡೆದನು.***

**ಯೋಹಾನ 8:29**

**ನನ್ನನ್ನು ಕಳುಹಿಸಿಕೊಟ್ಟಾತನು ನನ್ನ ಸಂಗಡ ಇದ್ದಾನೆ. ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ ಅಂದನು.**

**ಯೋಹಾನ 14:31**

**ಆದರೂ ನಾನು ತಂದೆಯನ್ನು ಪ್ರೀತಿಸುತ್ತೇನೆಂಬುದು ಲೋಕಕ್ಕೆ ತಿಳಿದಿರಬೇಕೆಂದು ತಂದೆಯು ನನಗೆ ಕೊಟ್ಟ ಆಜ್ಞೆಯ ಮೇರೆಗೆ ಇದನ್ನು ಮಾಡುತ್ತೇನೆ. ಏಳಿರಿ ಇಲ್ಲಿಂದ ಹೋಗೋಣ.**

**ಯೋಹಾನ 15:9–19**

**ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನು ನಿಮ್ಮನ್ನು ಪ್ರೀತಿಸಿದ್ದೇನೆ. ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ.**

### ...ಮತ್ತು ನಾವು ಮಾಡಬೇಕು

**ಯೋಹಾನ 14:15,21, 23–24**

**ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ. ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು. ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು. ಯೇಸು ಅವನಿಗೆ ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡ ನಡೆಯುವನು. ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆನು. ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಗೊಂಡು ನಡೆಯುವುದಿಲ್ಲ. ನೀವು ಆಲಿಸುವ ಮಾತು ನನ್ನದಲ್ಲ. ನನ್ನನ್ನು ಕಳುಹಿಸದ ತಂದೆಯ ಮಾತೇ.**

**ಯೋಹಾನ 15:9–10**
**ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ. ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ.**

**1 ಯೋಹಾನನು 2:5–6**
**ಯಾವನಾದರೂ ಆತನ ವಾಕ್ಯವನ್ನು ಕೈ ಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬುದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ.**

ಇವೆಲ್ಲಾ ವಚನಭಾಗಗಳಲ್ಲಿ ಕರ್ತನಾದ ಯೇಸುವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದರ ಕ್ರಮದಲ್ಲಿ ಆತನ ವಾಕ್ಯವನ್ನು ಇಟ್ಟುಕೊಳ್ಳುವುದು ಮತ್ತು ಆತನ ವಾಕ್ಯಕ್ಕೆ ವಿಧೇಯರಾಗಿ ನಡೆಯಬೇಕೆಂಬುದಾಗಿ ಕರ್ತನಾದ ಯೇಸುವು ಸ್ವತಃ ಅಭ್ಯಸಿಸಿದನು ಮತ್ತು ನಮಗೆ ಬೋಧಿಸಿದನು. ತಂದೆಯ ಪ್ರೀತಿಯು ಪರಿಪೂರ್ಣವಾಗಿ ನಮ್ಮಲ್ಲಿರುವುದರಿಂದ ತಂದೆಯ ಪ್ರೀತಿಯಲ್ಲಿ ಅದೇ ಪ್ರಕಾರ ಮಾಡುವವರಾಗಿದ್ದೇವೆ. ತಂದೆಯ ಪ್ರೀತಿಯಲ್ಲಿ ಜೀವಿಸಲೂ ಮತ್ತು ನೆಲೆಗೊಂಡಿರಲೂ ವಿಧೇಯತೆಯು ಅತೀ ಮುಖ್ಯವಾಗಿದೆ.

ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ, ಆತನ ವಾಕ್ಯ ಇಟ್ಟುಕೊಳ್ಳುತ್ತೇವೆ ಮತ್ತು ಯೇಸು ನಡೆದಂತೆಯೇ ನಡೆಯುತ್ತೇವೆ.

ತಂದೆಗೆ ವಿಧೇಯರಾಗಿರುವುದು ಆತನು ಬೆಳಕಿನಲ್ಲಿ ನಡೆದಂತೆಯೇ ನಾವು ನಡೆಯುವುದಾಗಿದೆ ಮತ್ತು ಈ ರೀತಿ ಆತನೊಂದಿಗೆ ಅನ್ಯೋನ್ಯತೆ (ನಿಕಟವಾದ ಸ್ನೇಹ) ಸಾಧ್ಯವಾಗುತ್ತದೆ. ಇಂತಹ ಅನ್ಯೋನ್ಯತೆಯು ದಿನದಿಂದ ದಿನಕ್ಕೆ ಆತನ ಪ್ರೀತಿಯಲ್ಲಿ ನೆಲೆಗೊಳ್ಳಲೂ (ಜೀವಿಸಲೂ ಮತ್ತು ವಿಶ್ರಮಿಸಲೂ) ನಮ್ಮನ್ನು ಶಕ್ತರನ್ನಾಗಿಸುತ್ತದೆ.

**1 ಯೋಹಾನನು 1:6–7**
**ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ. ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡ ಒಬ್ಬರು ಅನ್ಯೋನ್ಯತೆಯಲ್ಲಿದ್ದೇವೆ ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ.**

ವಿಧೇಯತೆಯು ತಂದೆಯ ಪ್ರೀತಿಯನ್ನು ಸಂಪಾದಿಸುವುದಿಲ್ಲ. ನಮ್ಮನ್ನು ಅಗಾಧವಾಗಿ ಮತ್ತು ಅಪರಿಮಿತವಾಗಿ ಪ್ರೀತಿಸುತ್ತಾನೆ.

ವಿಧೇಯತೆಯು ನೀವು ಮಾಡುವ ಕ್ರಿಯೆಯಾಗಿದೆ. ಯಾಕೆಂದರೆ, ನೀವು ಆತನನ್ನು ಪ್ರೀತಿಸುತ್ತೀರಿ. ನೀವು ಪ್ರೀತಿಯಿಂದ ಇದನ್ನು ಮಾಡುತ್ತೀರಿ.

ವಿಧೇಯತೆಯು ಆತನೊಂದಿಗೆ ಒಂದು ನಿಕಟವಾದ ಅನ್ಯೋನ್ಯತೆ ಇರಿಸುತ್ತದೆ. ಹೀಗೆ ತಂದೆಯ ಪ್ರೀತಿಯಲ್ಲಿ ಜೀವಿಸಲು ಮತ್ತು ಆತನ ಪ್ರೀತಿಯಲ್ಲಿ ನೆಲೆಸಲೂ, ವಿಶ್ರಮಿಸಲೂ ಮತ್ತು ಸೆಳೆಯಲೂ ಶಕ್ತರನ್ನಾಗಿಸುತ್ತದೆ.

## ಪ್ರತಿಫಲನ

1. ನಮಗಾಗಿರುವ ತಂದೆಯ ಪ್ರೀತಿಯನ್ನು ಅಂಗೀಕರಿಸುವುದು ಮತ್ತು ದೃಢೀಕರಿಸುವುದು ಏಕೆ ಪ್ರಾಮುಖ್ಯವಾಗಿದೆ?

...................................................................................................

...................................................................................................

...................................................................................................

...................................................................................................

...................................................................................................

...................................................................................................

...................................................................................................

...................................................................................................

...................................................................................................

...................................................................................................

2. ನಮಗಾಗಿರುವ ತಂದೆಯ ಪ್ರೀತಿಯಲ್ಲಿ ನಾವು ನೆಲೆಗೊಂಡು ಅದರಲ್ಲಿ ಜೀವಿಸುವಾಗ 8 ಫಲಿತಾಂಶಗಳು ಬರುತ್ತವೆಂಬುದಾಗಿ ತಿಳಿಸಿದ್ದೇವೆ.

   (i) ಇತರರ ಕಡೆಗೆ ದ್ವೇಷಕ್ಕೆ ನಮ್ಮಲ್ಲಿ ಸ್ಥಳವಿಲ್ಲ.

   (ii) ಹಿಂಸೆಯು ನಮ್ಮನ್ನು ತಳಮಳಗೊಳಿಸುವುದಿಲ್ಲ.

   (iii) ಶುದ್ಧತೆಯು ನಮ್ಮ ಜೀವನದ ದಾರಿ.

   (iv) ಇತರರೊಂದಿಗೆ ಹಂಚಿಕೊಳ್ಳುತ್ತೇವೆ ಮತ್ತು ತ್ಯಾಗ ಮಾಡುತ್ತೇವೆ.

   (v) ಪ್ರೀತಿಯಲ್ಲಿ ನಡೆಯುತ್ತೇವೆ.

   (vi) ಯೇಸು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ನಮ್ಮ ಆತ್ಮೀಕ ನಿಲುವು ಗುರ್ತಿಸುತ್ತೇವೆ ಮತ್ತು ಲೋಕದಲ್ಲಿ ಇದರ ಪ್ರಕಾರವಾಗಿ ಜೀವಿಸುತ್ತೇವೆ.

   (vii) ದೇವರ ಮುಂದೆ ನ್ಯಾಯ ತೀರ್ಪು ಮತ್ತು ಖಂಡನೆಯ ಭಯದಿಂದ ನಾವು ಸ್ವತಂತ್ರರಾಗಿದ್ದೇವೆ.

   (viii) ಆತನು ನಮ್ಮನ್ನು ಮೊದಲು ಪ್ರೀತಿಸಿದ್ದರಿಂದ ಆತನ ಪ್ರೀತಿಯಲ್ಲಿ ನಾವು ತುಂಬಿ ಹೊರಸೂಸುತ್ತೇವೆ.

ಇಂತಹ 8 ಕ್ಷೇತ್ರಗಳಲ್ಲಿ ನೀವು ಹೇಗೆ ಜೀವಿಸುತ್ತಿದ್ದೀರಿ? (ತಂದೆಯ ಪ್ರೀತಿಯ ನಿಮಿತ್ತದಿಂದ ಇವೆಲ್ಲವನ್ನು ನೀವು ಮಾಡಲೂ ಶಕ್ತರಾಗಿದ್ದೀರಿ ಎಂಬುದನ್ನು ದೇವರ ಮುಂದೆ ದೃಢೀಕರಿಸಲೂ ಸ್ವಲ್ಪ ಸಮಯ ತೆಗೆದುಕೊಂಡು ಪ್ರಾರ್ಥಿಸಿರಿ)

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................................

..........................................................................................................

..........................................................................................................

..........................................................................................................

3. ವಿಧೇಯತೆಯಲ್ಲಿ ನಡೆಯುವುದು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದಕ್ಕೆ ಹೇಗೆ ಸಂಪರ್ಕ ಹೊಂದಿದೆ?

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

# 6

# ಶಿಸ್ತುಗೊಳಿಸುವ ಪ್ರೀತಿ

ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದು ಬಹಳ ಪ್ರಾಮುಖ್ಯವಾದ ಅಂಶವಾಗಿರುವುದರಿಂದ ಆತನ ಪ್ರೀತಿಯೊಡನೆ ಶಿಸ್ತುಕ್ರಮ ಮತ್ತು ತಿದ್ದುಪಡಿಯನ್ನು ಇದು ತರುವುದಾಗಿದೆ. ತಂದೆಯು ನಮ್ಮನ್ನು ಶಿಸ್ತುಕ್ರಮ ಏಕೆ ಗೊಳಿಸುತ್ತಾನೆ ಮತ್ತು ನಮ್ಮನ್ನು ಶಿಸ್ತುಕ್ರಮಗೊಳಿಸುವಾಗ ಆತನ ಹೃದಯವನ್ನು ನಾವು ಅರ್ಥ ಮಾಡಿಕೊಂಡಾಗ ನಾವು ಸರಿಯಾದ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುತ್ತೇವೆ. ದೇವರ ಪ್ರೀತಿಯ ತಿದ್ದುಪಡಿಗಳು ಭಯವನ್ನು ಉಂಟು ಮಾಡುವವುಗಳು ಅಥವಾ ಅವುಗಳಿಂದ ದೂರ ಓಡಿ ಹೋಗುವಂತೆ ಮಾಡುವವುಗಳಲ್ಲ. ನಮ್ಮ ತಂದೆಯ ಪ್ರೀತಿಯ ತಿದ್ದುಪಡಿಗಳು ನಮಗೆ ಲಾಭದಾಯಕವಾಗಿರುವುದರಿಂದ ಅವುಗಳು ಸ್ವಾಗತಿಸುವಂತಹವುಗಳಾಗಿವೆ.

## ತಂದೆಯು ಪ್ರೀತಿಸುವವರನ್ನು ಶಿಸ್ತುಕ್ರಮಗೊಳಿಸುತ್ತಾನೆ.

**ಇಬ್ರಿಯರಿಗೆ 12:4–13**

**ನೀವು ಪಾಪಕ್ಕೆ ವಿರೋಧವಾಗಿ ಹೋರಾಡುವುದರಲ್ಲಿ ಪ್ರಾಣಾಪಾಯದ ತನಕ ಇನ್ನೂ ಅದನ್ನು ಎದುರಿಸಲಿಲ್ಲ. ಮಕ್ಕಳಿಗೆ ಹೇಳುವಂತೆ ನಿಮಗೆ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟದ್ದೀರೋ? ಏನಂದರೆ, ಮಗನೇ ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ. ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ. ಕರ್ತನು ತಾನು ಪ್ರೀತಿಸುವವರನ್ನು ಶಿಕ್ಷಿಸುತ್ತಾನೆ. ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ. ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷಿಸುತ್ತಾನೆ. ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು. ನೀವು ಶಿಕ್ಷಿತರಾಗುವುದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ. ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರರಿಂದ ಹುಟ್ಟಿದವರೇ ಹೊರತು ಪುತ್ರರಲ್ಲ. ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ. ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ. ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷಕ್ಕೆ ತೆಗೆದುಕೊಂಡು**

**ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು. ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ. ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ, ಸಮಾಧಾನವನ್ನು ಉಂಟು ಮಾಡುತ್ತದೆ. ಆದದರಿಂದ ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಸುಧಾರಿಸಿಕೊಳ್ಳಿರಿ. ನಿಮ್ಮ ಕಾಲುಗಳಿಂದ ನೆಟ್ಟಗೆ ಮುಂದೆ ನಡೆಯಿರಿ. ಹೀಗೆ ಮಾಡಿದರೆ ಕುಂಟಕಾಲು ಉಳುಕಿ ಹೋಗದೆ ವಾಸಿಯಾಗುವದು.**

ಇಲ್ಲಿನ ಪದಗಳಾದ ''ಶಿಕ್ಷೆ'' ''ಗದರಿಸು' ಮತ್ತು "ಉಪದ್ರವ" ಎಂಬುವು ಕಠಿಣವಾಗಿ ಮತ್ತು ಒರಟು ಪದಗಳಾಗಿ ಅನ್ನಿಸುತ್ತದೆ. ಗ್ರೀಕ್ ಪದವಾದ ''ಪೈಡ್ ಯುವ್'' "paideuo" ''ಶಿಕ್ಷೆ'' "chastens" ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಒಂದು ಮಗುವನ್ನು ತರಬೇತಿಗೊಳಿಸು, ಶಿಕ್ಷಣಗೊಳಿಸು, ಉಪದೇಶಿಸು, ಬೋಧಿಸು, ಈ ಪ್ರಕ್ರಿಯೆಯ ಭಾಗವಾಗಿ ಶಿಸ್ತುಗೊಳಿಸು ಎಂಬ ಅರ್ಥ ಹೊಂದಿದೆ. ಅದೇ ಗ್ರೀಕ್ ಪದವು "paideia" (''ಪೈಡಿಯಾ'' – ಗ್ರೀಕ್) ''ಶಿಕ್ಷೆ'' ಎಂಬುದಕ್ಕೆ ಎಫೆಸದವರಿಗೆ 6:4ರಲ್ಲಿ ತಂದೆಯಂದಿರು ತಮ್ಮ ಮಕ್ಕಳನ್ನು ಕರ್ತನಿಗಾಗಿ ''ಪೋಷಣೆ'' ಮಾಡಬೇಕೆಂಬುದಾಗಿ ಉಪಯೋಗಿಸಲ್ಪಟ್ಟಿದೆ. ''ಗದರಿಸು'' ಎಂಬುದಕ್ಕೆ ಗ್ರೀಕ್ ಪದವು ''ಎಲೆಂಜಿಚೊ'' (elengcho) ಎಂಬುದಾಗಿದೆ. ಇದು ತಪ್ಪಿತಸ್ಥ, ಮನವರಿಕೆ ಮಾಡು, ದೂಷಿಸು, ತಪ್ಪನ್ನು ತಿಳಿಸಿ ಹೇಳು, ಎಂಬ ಅರ್ಥ ಹೊಂದಿದೆ. ಇದು ಯೋಹಾನ 16:8ರಲ್ಲಿ ಪವಿತ್ರಾತ್ಮನು ಪಾಪ, ನೀತಿ, ನ್ಯಾಯ ತೀರ್ಪಿಗೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು ಎಂಬುದಾಗಿದೆ. ''ಉಪದ್ರವ'' ಅಥವಾ ''ಚಾಟಿಯ ಏಟು'' ಎಂಬುದಕ್ಕೆ ಗ್ರೀಕ್‌ನಲ್ಲಿ ''ಮಾಸ್ಟಿಗೋ'' (mastigoo) ಎಂಬುದಾಗಿದೆ. ಇದು ಹೊಡೆ, ಕೋಲಿನಿಂದ ಹೊಡೆ, ಬಡಿ, ಎಂಬ ಅರ್ಥ ಹೊಂದಿದೆ. ಈ ಪದಗಳು ತಂದೆಯು ತನ್ನ ಮಕ್ಕಳಿಗೆ ಶಿಸ್ತುಕ್ರಮಗೊಳಿಸುವ ಸನ್ನಿವೇಶದಲ್ಲಿ ಉಪಯೋಗಿಸಲ್ಪಟ್ಟಿವೆ ಮತ್ತು ಆ ಒಂದು ಸನ್ನಿವೇಶಕ್ಕನುಗುಣವಾಗಿ ಮಾತ್ರ ವಿವರಿಸಲ್ಪಡಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದುದರಿಂದ ಕರ್ತನ ಶಿಕ್ಷೆಯೆಂಬುದು (ಅ) (ಪೈಡಿಯೋ) – ಆತನ ಮಕ್ಕಳ ತರಬೇತಿ ಮತ್ತು ವಿದ್ಯಾಭ್ಯಾಸ, ಪೋಷಣೆ ಮತ್ತು ತಂದೆಯ ಪ್ರೀತಿಯ ಉಪದೇಶವಾಗಿದೆ. (ಆ) ಎಲೆಂಜಿಚೊ) – ಯಾವುದು ಸರಿ ಮತ್ತು ಯಾವುದು ತಪ್ಪು ಎಂಬದಾಗಿ ಆತನ ಮಕ್ಕಳಿಗೆ ತೋರಿಸುವಂತಹ ತಂದೆಯ ಪ್ರೀತಿಯ ಮಾತುಗಳಾಗಿವೆ. (ಇ) (''ಮಾಸ್ಟಿಗೊ'') ವಿಧೇಯತೆಯ ಒಂದು ಸ್ಥಾನಕ್ಕೆ ತನ್ನ ಮಕ್ಕಳನ್ನು ತರುವಂತಹ ತಂದೆಯ ಪ್ರೀತಿಯ ಶಿಸ್ತುಕ್ರಮವಾಗಿದೆ! ನಾವು ಕೂಡಲೇ ನೋಡುವುದೆಂದರೆ, ನಮ್ಮ ಸ್ವಾಭಾವಿಕ ಸನ್ನವೇಶದಲ್ಲಿಯೂ ಉಪದೇಶ, ವಿದ್ಯಾಭ್ಯಾಸ, ಪರಿಪಾಲನೆ ಮತ್ತು ತರಬೇತಿಯು ಮಕ್ಕಳೊಂದಿಗೆ ಸಾಮಾನ್ಯವಾಗಿ

ಜರುಗುವವುಗಳಾಗಿವೆ. ಹೊಡೆಯುವುದು (ಶಿಕ್ಷೆಯೊಡನೆ ತರಬೇತಿಯು) ಸಾಮಾನ್ಯ ಪ್ರಕ್ರಿಯೆಯು ಪಡೆದುಕೊಳ್ಳದಿರುವಾಗ ಅಥವಾ ಅದು ಉಲ್ಲಂಘಿಸಿದಾಗ ಮಾತ್ರ ಇದು ಉಪಯೋಗಿಸಲ್ಪಡುತ್ತದೆ.

ಪ್ರೀತಿಯ ಉಪದೇಶಗಳು ಮತ್ತು ತಿದ್ದುಪಡಿಗಲು ತಂದೆ-ಮಗುವಿನ ಸಂಬಂಧದ ಸಾಮಾನ್ಯ ಅಂಶವಾಗಿದೆ (ವಚನ 7). ಇದು ನಿಮ್ಮ ಪರಲೋಕದ ತಂದೆಯು ನಮ್ಮನ್ನು ಆತನ ಪುತ್ರರು ಮತ್ತು ಪುತ್ರಿಯರಾಗಿ ಕಾಣುವುದಾಗಿದೆ. ಆತನ ತಿದ್ದುಪಡಿ ಮತ್ತು ಶಿಸ್ತುಕ್ರಮ ನಮಗಾಗಿರುವ ಆತನ ಪ್ರೀತಿಯ ಅಭಿವ್ಯಕ್ತತೆಯಾಗಿದೆ.

ಆತನು ನಮಗಾಗಿ ಇಟ್ಟಿರುವ ಪ್ರೀತಿ ಮತ್ತು ನಮ್ಮ ಒಳ್ಳೆಯದಕ್ಕಾಗಿ. ನಮ್ಮ ಪರಲೋಕದ ತಂದೆಯು ತಿದ್ದುತ್ತಾನೆ ಮತ್ತು ಶಿಸ್ತುಗೊಳಿಸುತ್ತನೆ. ಆತನು ಇದನ್ನು ನಮ್ಮ ಒಳಿತು ಅಥವಾ ಲಾಭಕ್ಕಾಗಿ ಮಾಡುತ್ತಾನೆ (ವಚನ 10). ನಾವಿರುವ ಸ್ಥಳದಿಂದ ಇನ್ನೊಂದು ಉನ್ನತವಾದ ಸ್ಥಾನಕ್ಕೆ, ನಾವು ಇರಬೇಕೆಂಬುದಾಗ ಆತನು ಬಯಸುವ ಸ್ಥಳಕ್ಕೆ ನಮ್ಮನ್ನು ಆತನು ತೆಗೆದುಕೊಂಡು ಹೋಗುತ್ತಾನೆ.

ದೇವರು ನಮ್ಮನ್ನು ತಿದ್ದುವಾಗ, ನಮ್ಮನ್ನು ನಾಶ ಮಾಡಲೂ, ಕೀಳಾಗಿಸಲೂ, ಅಪಮೌಲಿಸಲೂ, ಅಥವಾ ನಮ್ಮನ್ನು ಕೆಳದರ್ಜೆಗೆ ಇಳಿಸಲೂ ಆತನು ಮಾಡುತ್ತಿಲ್ಲಾ. ಆತನ ಪ್ರೀತಿಯ ತಿದ್ದುಪಡಿಗಳು ಯಾವಾಗಲೂ ನಮ್ಮನ್ನು ಮೇಲೆತ್ತಲೂ ಮತ್ತು ನಾವು ಯಾವ ಮಾದರಿಯ ಜನರಾಗಿರಬೇಕೆಂಬುದಾಗಿ ಆತನು ಇಷ್ಟಪಟ್ಟಿದ್ದಾನೋ ಅದಕ್ಕೆ ಸಹಾಯ ಮಾಡುವುದಕ್ಕಾಗಿಯೇ ಇದೆ. ಆತನ ತಿದ್ದುಪಡಿಯು ಘನತೆ, ಅಂಗೀಕಾರ ಮತ್ತು ಕೃಪೆಯಲ್ಲಿ ಬರುವುದಾಗಿರುತ್ತದೆ.

ತಂದೆಯ ಪ್ರೀತಿಯ ಈ ಒಂದು ಅಂಶವು ತಾತ್ಕಾಲಿಕವಾಗಿ ನೋವಿನಿಂದ ಕೂಡಿರಬಹುದು (ವಚನ 11).

ನಾವು ವಾಸ್ತವವಾಗಿ, ವಿಧೇಯತೆಯ ಸ್ಥಾನಕ್ಕೆ ಹೆಜ್ಜೆಯನ್ನಿಡುವಾಗ ಆತನ ಪ್ರೀತಿಯಲ್ಲಿ ಜೀವಿಸಲು ಮತ್ತು ನೆಲೆಗೊಂಡಿರುವ ಸ್ಥಾನಕ್ಕೆ ಬರುವಾಗ ತಿದ್ದುಪಡಿಯು ಅಗತ್ಯಕರವಾಗಿ ಕಂಡು ಬರುತ್ತದೆ.

ತಿದ್ದುಪಡಿಯು ನಮಗೆ ಆತನ ಚಿತ್ತ, ಆತನ ವಾಕ್ಯ ಮತ್ತು ಆತನ ಮಾರ್ಗಗಳ ದೇವರ ಜೋಡಿಸುವಿಕೆಯಾಗಿದೆ. ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಸ್ಥಳಕ್ಕೆ

ಹಿಂತಿರುಗಿ ಆತನು ತರುತ್ತಾನೆ. ಆತನ ಪ್ರೀತಿಯಲ್ಲಿ ಜೀವನ ಮಾಡುವ ಮತ್ತು ವಿಶ್ರಮಿಸುವ ಸ್ಥಳಕ್ಕೆ ನಮ್ಮನ್ನು ತಿರುಗಿ ಸೆಳೆಯುತ್ತಾನೆ.

ನಮ್ಮ ಪರಲೋಕದ ತಂದೆಗೆ ಸಮರ್ಪಿಸುವುದು ಮತ್ತು ಒಳಪಟ್ಟು ವಿಧೇಯರಾಗುವುದು ತಿದ್ದುಪಡಿಗೆ ಸರಿಯಾಗ ಪ್ರತಿಕ್ರಿಯೆಯಾಗಿದೆ (ವಚನ 9). "ನನ್ನ ಚಿತ್ತವಲ್ಲ, ನಿಮ್ಮ ಚಿತ್ತವೇ ಆಗಲಿ" ಎಂಬುದಾಗಿ ಇಲ್ಲಿ ಹೇಳಲೂ ನಾವು ಕಲಿಯುತ್ತೇವೆ.

ದೇವರು ನಮ್ಮನ್ನು ಆತನ ವಾಕ್ಯದ ಮೂಲಕವಾಗಿ, ಆತನ ಆತ್ಮನ ಮೂಲಕ, ಇತರೆ ಜನರ ಮೂಲಕ, ಕೆಲವು ಸಮಯಗಳಲ್ಲಿ ಪರಿಸ್ಥಿತಿಗಳು/ಕಠಿಣ ಸಂದರ್ಭಗಳ ಮೂಲಕವಾಗಿ ತಿದ್ದುತ್ತಾನೆ. ಆತನ ವಾಕ್ಯದಿಂದ ಉಪದೇಶ, ತರಬೇತಿ, ಮತ್ತು ತಿದ್ದುಪಡಿಯನ್ನು ತರುವ ಮೂಲಕ ದೇವರ ನಮ್ಮೊಂದಿಗೆ ಮಾತಾಡುತ್ತಾನೆ. (2 ತಿಮೊಥೆಯನಿಗೆ 3:16-17). ದೇವರ ಆತ್ಮನು ಸತ್ಯಕ್ಕೆ ನಮ್ಮನ್ನು ನಡೆಸುತ್ತಾನೆ, ಇದು ಆತನು ನಮ್ಮನ್ನು ತಪ್ಪಿನಿಂದ ದೂರವಿರಿಸುತ್ತಾನೆ ಮತ್ತು ನಮ್ಮನ್ನು ತಿದ್ದುತ್ತಾನೆ ಎಂಬುದನ್ನು ಸೂಚಿಸುವುದಾಗಿದೆ (ಯೋಹಾನ 16:3). ನಮ್ಮ ಮೇಲೆ ಪ್ರಭಾವ ಬೀರಲೂ ಇರಿಸಿದಂತಹ ದೈವಿಕ ಜನರುಗಳಾದ ಇತರೆ ಜನರ ಮೂಲಕವಾಗಿ ನಮ್ಮ ಹೃದಯಗಳಿಗೆ ಆತನ ಸಲಹೆಗಳನ್ನು ದೇವರು ಮಾತಾಡುತ್ತಾನೆ. ದೇವರ ಸಲಹೆ, ಉಪದೇಶ ಮತ್ತು ತಿದ್ದುಪಡಿ ಈ ಮೂರು ಮಾರ್ಗಗಳನ್ನು ಪಡೆಯಲು ನಾವು ತೆರೆದವರಾಗಿರಬೇಕು. ನಮಗಾಗಿ ಆತನು ಏರ್ಪಡಿಸಿರುವಂತಹ ಸನ್ನಿವೇಶಗಳ ಮೂಲಕವಾಗಿ ದೇವರು ಕೆಲವು ಬಾರಿ ಶಿಸ್ತುಕ್ರಮಗೊಳಿಸುತ್ತಾನೆ. (ಗಮನಿಸಿ: "ಕೆಲವು ಸಮಯಗಳು" ಪರಿಸ್ಥಿತಿಗಳು ಮತ್ತು ಸನ್ನಿವೇಶಗಳ ಮೂಲಕವಾಗಿ ಎಂಬುದಾಗಿ ನಾನು ಹೇಳುತ್ತೇವೆ. ಯಾಕಂದರೆ, ವೈರಿ, ದುರಾತ್ಮ ನಮಗೆ ವಿರೋಧವಾಗಿ ಪರಿಸ್ಥಿತಿಗಳನ್ನು ತರುತ್ತಾನೆ. ಅವುಗಳಿಂದ ನಾವು ಹೊರಬರಬೇಕು ಮತ್ತು ದೊರೆತನ ಮಾಡಬೇಕು. ಆಮೇಲೆ ನಮ್ಮ ಸ್ವಂತ ಕ್ರಿಯೆಗಳ ಫಲಿತಾಂಶವಾದ ಕೆಲವು ಪರಿಸ್ಥಿತಿಗಳು ಇವೆ, ನಾವುಗಳು ಜವಾಬ್ದಾರಿ ತೆಗೆದುಕೊಳ್ಳಬೇಕು ಮತ್ತು ಅಗತ್ಯವಿರುವಾಗ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ಆತನ ಪ್ರೀತಿಯ ಶಿಸ್ತುಕ್ರಮಕ್ಕೆ ನಮ್ಮ ಪ್ರತಿಕ್ರಿಯೆಯು ನಮ್ಮ ಮುಂದಿನ ಹಂತದ ಬೆಳವಣಿಗೆ, ಪರಿಪಕ್ವತೆ ಮತ್ತು ಪವಿತ್ರತೆಯ ಬೆಳವಣಿಗೆಯನ್ನು ನಿಶ್ಚಯಪಡಿಸುತ್ತದೆ. ಆತನ ಪ್ರೀತಿಯಲ್ಲಿ ನೆಲೆಗೊಂಡಿರುವುದು ಮತ್ತು ನಮ್ಮ ಜೀವಿತದ ನಿಯೋಜನೆಯನ್ನು ವೃದ್ಧಿಪಡಿಸಿಕೊಳ್ಳುವುದು ಬಹಳ ಪ್ರಾಮುಖ್ಯವಾಗಿದೆ.

ನಮ್ಮ ವಿಧೇಯತೆಯ ಸಮಾನಾಂತರತೆಯಿಂದ ಯಾವುದಾದರೂ ಹೊರಗೆ ಹೋಗಿದ್ದರೆ ಆತನೊಂದಿಗೆ ನಮ್ಮನ್ನು ಸಮಾನಾಂತರಗೊಳಿಸಿಕೊಳ್ಳಲೂ ದೇವರನ್ನು ಕೇಳುವುದು ನಾವು ದಿನನಿತ್ಯ ಮಾಡಬಹುದಾದ ಉತ್ತಮ ಸಂಗತಿಯಾಗಿದೆ.

ನೀವು ನಿಮ್ಮ ಸ್ವಂತ ಕಾವಲುಗಾರರಾಗಿರಬಹುದು. ನಿಮ್ಮ ಸ್ವಂತ ಹೃದಯ, ನಿಮ್ಮ ಸ್ವಂತ ಆಲೋಚನೆಗಳು ಮತ್ತು ನಿಮ್ಮ ಸ್ವಂತ ಕ್ರಿಯೆಗಳನ್ನು ಕಾಯುವವರಾಗಿರಬೇಕು. ಆತನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ಆತನ ಪ್ರೀತಿಯಲ್ಲಿ ನೆಲೆಗೊಂಡಿರಲೂ - ಶಕ್ತಗೊಳಿಸುವಂತೆ ಮಾಡಲೂ ಆತನ ಬಲದ ಕೃಪೆಯು ಮತ್ತು ಪವಿತ್ರಾತ್ಮನ ಅನ್ಯೋನ್ಯತೆಯೂ ಯಾವಾಗಲೂ ನಿಮ್ಮೊಂದಿಗಿರುತ್ತದೆ (2 ಕೊರಿಂಥದವರಿಗೆ 13:14). ವಿಧೇಯತೆಯ ಸ್ಥಾನದಿಂದ ನಾವು ಹೊರಹೋಗುವುದನ್ನು, ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದರಿಂದ ಒಂದು ಅಂಗುಲ ದೂರ ತ್ವರಿತವಾಗಿ ಜರುಗಿದರೆ, ಅಷ್ಟು ತ್ವರಿತವಾಗಿ ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳಬೇಕು ಮತ್ತು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಸ್ಥಳಕ್ಕೆ ಹಿಂತಿರುಗಿ ಬರಬೇಕು.

ಜೀವಿತದಲ್ಲಿ, ನಾವುಗಳು ಶಿಸ್ತು ಮತ್ತು ಕಠಿಣತೆಯೊಡನೆ ವ್ಯವಹರಿಸಬೇಕಾದ ಸಮಯಗಳಿರುತ್ತವೆ. ಉದಾಹರಣೆಗೆ, ತಂದೆ-ತಾಯಿಯಾಗಿ, ಅಥವಾ ಒಬ್ಬ ಶಿಕ್ಷಕನಾಗಿ, ತರಗತಿಗಳಲ್ಲಿ, ಉದ್ಯೋಗಸ್ಥರನ್ನು ನಿಭಾಯಿಸುವ ಒಬ್ಬ ವೃತ್ತಿಪರನಾಗಿ, ಯಾವ ಕಾರ್ಯಗಳು ಜರುಗಬೇಕು ಅಥವಾ ಏನುಅಗತ್ಯವಾಗಿದೆ ಎಂಬುದರ ಬೇಡಿಕೆ, ಖಂಡನೆ, ತಿದ್ದುಪಡಿ ಮತ್ತು ಎದುರಿಸುವಿಕೆಯ ಸಮಯಗಳಿರುತ್ತವೆ. ಇಂತಹ ಕಠಿಣ ಪರಿಸ್ಥಿತಿಗಳನ್ನು ಒಂದು ಜವಾಬ್ದಾರಿಯುಳ್ಳ ನಾಯಕನು ಮತ್ತು ತಂದೆಯ ಪ್ರೀತಿಯಿಂದ ನಡೆಸಲ್ಪಟ್ಟಂತಹ ಎರಡೂ ಕಠಿಣತೆಯೊಡನೆ ನಿಭಾಯಿಸುತ್ತೇವೆ. ಶಿಸ್ತು ಮತ್ತು ತಿದ್ದುಪಡಿಯನ್ನು ಜಾರಿಗೊಳಿಸುವಾಗ ಅಗಾಧವಾದ ದೇವರ ಪ್ರೀತಿಯಿಂದ ಅಂತಹ ಕಠಿಣ ಪರಿಸ್ಥಿತಿಗಳನ್ನು ನಿಭಾಯಿಸಲೂ ದೇವರ ಆತ್ಮನು ನಮ್ಮನ್ನು ಶಕ್ತಗೊಳಿಸುತ್ತಾನೆ. ಇದು ಸಹ ತಂದೆಯ ಪ್ರೀತಿಯ ಅಭಿವ್ಯಕ್ತತೆಯಾಗಿದೆ.

## ತಂದೆಯ ಪ್ರೀತಿಯ ಶಿಸ್ತುಕ್ರಮದ ಕುರಿತು ತಪ್ಪು ಕಲ್ಪನೆಗಳು

ತಂದೆಯ ಪ್ರೀತಿಯುಳ್ಳ ತಿದ್ದಪಡಿಯೇನು ಎಂಬುದರಲ್ಲಿ ಅನೇಕರಿಗೆ ಆಗಾಗ್ಗೆ ಅಪರಿಚಿತ ತಪ್ಪು ಕಲ್ಪನೆಗಳನ್ನು ಹೊಂದಿದ್ದಾನೆ. ಅವರು ರೋಗಗಳು, ಅಪಘಾತಗಳು, ಸೋಲುಗಳು, ಬಡತನ, ದುರಂತಗಳು, ವಿಪತ್ತು ಮುಂತಾದವುಗಳನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ತಂದೆಯ ಪ್ರೀತಿಯ ಶಿಸ್ತು, ಉಪದೇಶ, ಅಥವಾ ತಿದ್ದುಪಡಿಯಂತೆ,

ಇಹಲೋಕದ ತಂದೆತಾಯಿಗಳು ನಮ್ಮಂತೆಯೇ ದೋಷಪೂರಿತವಾಗಿರುವಂತಹ ನಮ್ಮ ಮಕ್ಕಳಿಗೆ ಇದನ್ನು ಮಾಡುವುದಿಲ್ಲ. ಇಹಲೋಕದ ತಂದೆ-ತಾಯಿಗಳು ಬೋಧಿಸಲು, ಉಪದೇಶಿಸಲೂ ಅಥವಾ ಪರಿಪಾಲನೆ ಮಾಡಲೂ ತಮ್ಮ ಮಕ್ಕಳನ್ನು ಕಾಯಿಲೆ, ಅಪಘಾತ, ದುರಂತಗಳು ಮುಂತಾದವುಗಳ ಉಗ್ರಪರೀಕ್ಷೆಯಲ್ಲಿ ಅವರನ್ನು ಇಡುತ್ತಾರೆ. ಇದರಿಂದ ಕೇವಲ ಅವರು ಪ್ರೌಢರಾಗಿ, ಈ ಗುಣನಡತೆಯಲ್ಲಿ ವೃದ್ಧಿಯಾಗಲು ಅಥವಾ ಬೆಳೆಯುತ್ತಾರೆ? ಯಾವುದೂ ಇಲ್ಲ! ಹಾಗಾದರೆ ಅಂತಹ ವಿಷಯಗಳ ಗುಣಲಕ್ಷಣದಲ್ಲಿ (ರೋಗ, ವಿಪತ್ತು, ಅಪಘಾತಗಳು, ಸೋಲುಗಳು, ದುರಂತಗಳು, ಬಡತನ ಮುಂತಾದ) ನಮ್ಮ ಆತ್ಮಿಕ ತಿಳುವಳಿಕೆಯಲ್ಲ. ಅವುಗಳು ನಮ್ಮ ಜೀವಿತದಲ್ಲಿ ಆತನ ಪ್ರೀತಿಯ ಶಿಸ್ತು ಕ್ರಮದ ವ್ಯಕ್ತಪಡಿಸುವಿಕೆಯಾಗಿರುವಾಗಲೂ ಅಪರಿಮಿತವಾಗಿ ಪ್ರೀತಿಸುವ ಪರಲೋಕದ ತಂದೆಗೆ ನಾವು ಹೇಗೆ ಅಸಮಂಜಸವಾಗಿ ಮತ್ತು ತರ್ಕವಿಲ್ಲದಂತೆ ಇದ್ದೇವೆ. ನಮ್ಮ ಪರಲೋಕದ ತಂದೆಯು ಅಪರಿಮಿತವಾಗಿ ಇಹಲೋಕದ ತಂದೆ-ತಾಯಿಗಿಂತ ಉತ್ತಮನಾದವನು ಎಂಬುದಾಗಿ ಕರ್ತನಾದ ಯೇಸು ತುಂಬಾ ಸ್ಪಷ್ಟವಾಗಿ ಹೇಳಿದ್ದಾನೆ. ''ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವವನಲ್ಲವೇ'' (ಮತ್ತಾಯ 7:9-11).

ನಮ್ಮ ಪರಲೋಕದ ತಂದೆಯ ಶಿಸ್ತು ಕ್ರಮ ಮತ್ತು ಉದ್ದೇಶಪೂರ್ವಕವಾಗಿ ಪಾಪ ಮಾಡುವ, ಪಶ್ಚಾತ್ತಾಪವಿಲ್ಲದ ಮತ್ತು ಬಂಡಾಯಕ್ಕಾಗಿ ಇರುವ ದೇವರ ನ್ಯಾಯತೀರ್ಪು ಇವುಗಳ ನಡುವೆ ದೊಡ್ಡದಾದ ವ್ಯತ್ಯಾಸಗಳಿವೆ. ವಿಶ್ವಾಸಿಗಳಾಗಿ ನಮ್ಮ ಜೀವಿತದ ಅವಧಿಯಲ್ಲಿ ನಾವು ತಂದೆಗೆ ವಿಧೇಯರಾಗಿ ನಡೆಯುತ್ತೇವೆ ಮತ್ತು ದೇವರ ನ್ಯಾಯತೀರ್ಪು ಹೊಂದುವಂತಹ ಸ್ಥಿತಿಗೆ ನಾವು ಬರುವುದಿಲ್ಲ. ನಾವು ದೇವರ ವಿಧೇಯತೆಯಲ್ಲಿ ನಡೆಯುವಾಗ, ಎದುರಾಳಿಯು, ಸೈತಾನ ಮತ್ತು ಅವನ ದುರಾತ್ಮಗಳು ತಮ್ಮ ಸಂಚುಗಳು ಮತ್ತು ಕುಯುಕ್ತಿಗಳಿಂದ ನಮಗೆ ವಿರೋಧವಾಗಿ ಬರುತ್ತಾರೆ.

ವೈರಿಯ ಕಾರ್ಯವು ಯಾವುದಕ್ಕಾಗಿದೆ ಎಂಬುದನ್ನು ತಿಳಿಯಬೇಕು ಮತ್ತು ಅವುಗಳನ್ನು ಎದುರಿಸಲು, ಹೊರಬರಲೂ ಮತ್ತು ಅಂತಹ ವಿಷಯಗಳ ಮೇಲೆ ನಿರಂತರವಾಗಿ ವಿಜಯಿಗಳಾಗಿ ನಡೆಯಲೂ ಯೇಸುವಿನಲ್ಲಿ ಇರುವ

ನಮ್ಮ ಅಧಿಕಾರವನ್ನು ಉಪಯೋಗಿಸಬೇಕು. ವೈರಿಯ ದುಷ್ಟ ಕಾರ್ಯಗಳಾದ – ಕದ್ದುಕೊಳ್ಳುವುದು, ಹಾಳು ಮಾಡುವುದು ಮತ್ತು ನಾಶ ಮಾಡುವುದು, ರೋಗಗಳು, ವಿಪತ್ತುಗಳು, ಅಪಘಾತಗಳು, ಸೋಲುಗಳು, ದುರಂತಗಳು, ಬಡತನ ಮುಂತಾದವುಗಳನ್ನು ದೇವರಿಗೆ ಗುಣಲಕ್ಷಣಗಳಾಗಿ ನಾವು ಮಾಡಬಾರದು.

## ಪ್ರತಿಫಲನ

1. ಪ್ರೀತಿಯುಳ್ಳ ಪರಲೋಕದ ತಂದೆಯು ಆತನ ಮಕ್ಕಳನ್ನು ಏಕೆ ಶಿಸ್ತುಕ್ರಮಗೊಳಿಸುತ್ತಾನೆ?

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

2. ತಂದೆಯು ಆತನ ಮಕ್ಕಳೊಡನೆ ವ್ಯವಹರಿಸುವಂತಹ ಸನ್ನಿವೇಶದಲ್ಲಿ ಇಬ್ರಿಯರಿಗೆ 12:5–6 ರಲ್ಲಿ ಉಲ್ಲೇಖವಾಗಿರುವ ಶಿಕ್ಷಿಸುತ್ತಾನೆ, ಗದರಿಸುತ್ತಾನೆ ಮತ್ತು ಹೊಡೆಯುತ್ತಾನೆಂಬುದರ ಅರ್ಥವೇನೆಂಬುದನ್ನು ಸಂಕ್ಷಿಪ್ತವಾಗಿ ನೋಡಿರಿ?

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

3. ನಮ್ಮ ಜೀವಿತಗಳಲ್ಲಿ ಆತನ ಪ್ರೀತಿಯು ತಿದ್ದುಪಡಿಯುನ್ನು ತರುವಂತಹ 4 ಮಾರ್ಗಗಳೇನು? ಇವುಗಳಿಗೆ ನೀವು ಹೇಗೆ ಸಂವೇದನಾಶೀಲರಾಗಿರಬೇಕೆಂಬುದನ್ನು ಪರಿಗಣಿಸಿರಿ. ಆದ್ದರಿಂದ ನಿಮ್ಮ ಜೀವಿತದಲ್ಲಿ ದೇವರ ಪ್ರೀತಿಯ ತಿದ್ದುಪಡಿಗೆ ಬೇಗನೆ ಪ್ರತಿಕ್ರಿಯೆ ತೋರಿಸಬಹುದು ಮತ್ತು ಗುರುತಿಸಬಹುದು.

..............................................................................................

..............................................................................................

..............................................................................................

..............................................................................................

..............................................................................................

ತಂದೆಯ ಪ್ರೀತಿ

........................................................................................................

........................................................................................................

........................................................................................................

........................................................................................................

........................................................................................................

# 7

# ನಮ್ಮ ಪರಲೋಕದ ತಂದೆಯನ್ನು ಅನುಕರಣೆ ಮಾಡುವುದು

ತಂದೆಯ ಪ್ರೀತಿಯನ್ನು ಅನುಭವಿಸುವುದು. ಪ್ರೀತಿಪಾತ್ರರಾಗಿರಲೂ ನಮ್ಮ ಸಾಮರ್ಥ್ಯವನ್ನು ಪುನಃ ಸ್ಥಾಪಿಸುವುದು ಮಾತ್ರವಲ್ಲದೇ ಪ್ರೀತಿಸುವ ನಮ್ಮ ಸಾಮರ್ಥ್ಯವನ್ನು ಸಹ ಪುನಃ ಸ್ಥಾಪಿಸುತ್ತದೆ. ನಮ್ಮ ಸಾಮರ್ಥ್ಯಕ್ಕಿಂತಲೂ ಮಿಗಿಲಾದ ರೀತಿಯ ಪ್ರೀತಿಯಲ್ಲಿ ನಾವು ನಡೆಯಬಹುದು.

## ಆತನ ಪ್ರೀತಿಯು ನಮ್ಮೊಳಗಿದೆ ಮತ್ತು ನಮ್ಮ ಮೂಲಕವಾಗಿದೆ

**ಎಫೆಸದವರಿಗೆ 5:1-2**

**ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ ಆದುದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ. ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧ ವಾಸನೆಯಿಂದ ಕಾಣಿಕೆಯಾಗಿಯೂ, ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವು ಪ್ರೀತಿಯಲ್ಲಿ ನಡೆದುಕೊಳ್ಳಿರಿ.**

ನಮ್ಮ ಪರಲೋಕದ ತಂದೆಯನ್ನು ನಾವು ಅನುಕರಣೆ ಮಾಡಬೇಕು. ಅನುಕರಣೆ ಮಾಡಲೂ ನಾವು ಕರೆಯಲ್ಪಟ್ಟದರ ಮೊದಲ ಅಂಶವು ಪ್ರೀತಿಯಲ್ಲಿ ನಡೆಯುವುದಾಗಿದೆ. ಕ್ರಿಸ್ತನ ಗುಣಮಟ್ಟ ಮತ್ತು ಆತನ ಪ್ರೀತಿ ಮತ್ತು ತ್ಯಾಗದ ಮಾದರಿ. ಯೇಸು ಮಾಡಿದಂತದ್ದನ್ನು ಮಾಡಿರಿ. ಪ್ರೀತಿಯಲ್ಲಿ ನಡೆಯುವುದೇನೆಂಬುದನ್ನು ಆತನು ನಮಗೆ ತೋರಿಸಿದ್ದಾನೆ.

ಸಾಧ್ಯಕರವಾಗದಂತಹ (ಸಾಧಿಸಲಾಗದ) ಯಾವುದನ್ನು ಮಾಡಲೂ ದೇವರು ನಮಗೆ ಉಪದೇಶಿಸುವುದಿಲ್ಲ. ಅಲ್ಲವೇ ನಾವು ಮಾಡಲೂ ಧೈರ್ಯವನ್ನು ಕೊಡದಂತಹವುಗಳನ್ನು ಮಾಡಲೂ ಆತನು ಉಪದೇಶಿಸುವುದಿಲ್ಲ. ಆದ್ದರಿಂದ ಕ್ರಿಸ್ತನಂತೆಯೇ, ಪ್ರೀತಿಯಲ್ಲಿ ನಡೆಯುವುದು ಮತ್ತು ಆತನನ್ನು ಅನುಕರಣೆ

ಮಾಡುವುದನ್ನು ಆತನಿಂದ ಉಪದೇಶವಾಗಿ ಹೊಂದುವಾಗ ಅದನ್ನು ಮಾಡಲೂ ಆತನ ಬಲವನ್ನು ಪಡೆಯುವುದರಿಂದ ಸಾಧ್ಯಕರವಾಗುತ್ತದೆ.

ನಾವು ಪರಲೋಕ ತಂದೆಯ ಅನುಕರಣೆ ಮತ್ತು ಕ್ರಿಸ್ತನು ಪ್ರೀತಿಯಲ್ಲಿ ನಡೆದಂತೆ ನಾವು ನಡೆಯುವುದು, ನಮ್ಮ ತಂದೆಯನ್ನು ಮೆಚ್ಚಿಸುವಂತಹ ಒಂದು ತ್ಯಾಗ, ಒಂದು ಸುಗಂಧ ವಾಸನೆಯುಳ್ಳ ಪರಿಮಳ, ತಂದೆಯು ಯೇಸುವಿನ ಬಲಿದಾನದೊಡನೆ ಮೆಚ್ಚಿಕೆಯಾದಂತಹ ರೀತಿಯಲ್ಲಿಯೇ ಇರುತ್ತದೆ.

## ಪ್ರೀತಿಯಲ್ಲಿ ನಡೆಯುವುದು ಅಧಿಕವಾದ ಶ್ರೇಷ್ಟ ದಾರಿಯಲ್ಲಿ ನಡೆಯುವುದಾಗಿದೆ

**1 ಕೊರಿಂಥದವರಿಗೆ 12:31**
**ಇವುಗಳಲ್ಲಿ ಶ್ರೇಷ್ಠವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ. ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುವೆನು.**

**1 ಕೊರಿಂಥದವರಿಗೆ 13:1–13**
**ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದ ಕೊಡುವ ಕಂಚೂ. ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನ ವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವುದೆಲ್ಲವನ್ನು ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನು ಪ್ರಯೋಜನವಾಗುವುದಿಲ್ಲ. ಪ್ರೀತಿಯು ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆ ಕಿಚ್ಚುಪಡುವುದಿಲ್ಲ. ಹೊಗಳಿಕೊಳ್ಳುವದಿಲ್ಲ. ಉಬ್ಬಿಕೊಳ್ಳುವದಿಲ್ಲ, ಮರ್ಯಾದೆಗೆಟ್ಟು ನಡೆಯುವುದಿಲ್ಲ. ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ. ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ. ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ. ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ. ಪ್ರವಾದನೆಗಳಾದರೋ ಇಲ್ಲದಂತಾಗುವವು. ವಾಣಗಳೋ ನಿಂತು ಹೋಗುವವು. ವಿದ್ಯೆಯೋ ಇಲ್ಲದಂತಾಗವುದು. ಅಪೂರ್ಣವಾಗಿ ತಿಳುಕೊಳ್ಳುತ್ತೇವೆ. ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು. ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದನು. ಬಾಲಕನ ಸುಃಖದುಃಖಗಳನ್ನು ಅನುಭವಿಸಿದೆನು. ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು. ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟು ಬಿಟ್ಟೆನು.**

**ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ (ದೇವರ ಮುಖವು) ನಮಗೆ ಮಬ್ಬಾಗಿ ಕಾಣಿಸುತ್ತದೆ. ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈ ಸ್ವಲ್ಪ ಮಾತ್ರ ನನಗೆ ತಿಳಿದದೆ. ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು. ಹೀಗಿರುವದರಿಂದ ನಂಬಿಕೆ, ನಿರೀಕ್ಷೆ, ಪ್ರೀತಿ ಈ ಮೂರೇ ನಿಲ್ಲುತ್ತವೆ. ಇವುಗಳಲ್ಲಿ ದೊಡ್ಡದು ಪ್ರೀತಿಯೇ.**

**1 ಕೊರಿಂಥದವರಿಗೆ 14:1**

**ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ. ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.**

ಅಪೊಸ್ತಲನಾದ ಪೌಲನು 1 ಕೊರಿಂಥದವರಿಗೆ 12ರಲ್ಲಿ ಆತ್ಮನ ವರಗಳು ಮತ್ತು ಸದಸ್ಯತ್ವದ ಕಾರ್ಯಗಳನ್ನು (ನಡೆಸುವುದು, ಬೋಧಿಸುವುದು, ಆಡಳಿತ ನಿರ್ವಹಿಸುವುದು ಮುಂತಾದವು) ವಿವರಿಸುವಾಗ ಇಂತಹವರಗಳನ್ನು ನಾವು ಅಪೇಕ್ಷಿಸಬೇಕೆಂಬುದಾಗಿ ಹೇಳುತ್ತಾನೆ. ಆದರೆ ಅವನು ನಮ್ಮನ್ನು "ಒಂದು ಅಧಿಕವಾದ ಉತ್ಕೃಷ್ಟವಾದ ಮಾರ್ಗ" ಅಥವಾ ಇನ್ನೂ ಉತ್ತಮವಾದ ಮಾರ್ಗ ಅಥವಾ ಅತ್ಯಂತ ಉನ್ನತವಾದ ಮಾರ್ಗದೆಡೆಗೆ ನಮ್ಮನ್ನು ಪ್ರತಿಬಿಂಬಿಸುವಂತೆ ವ್ಯಾಖ್ಯಾನಿಸುತ್ತಾನೆ. ಸದಸ್ಯತ್ವದ ಕ್ರಿಯೆಗಳ ಅಭ್ಯಾಸ ಮತ್ತು ಆತ್ಮನ ವರಗಳಿಗಿಂತ ಇನ್ನೂ ಅತ್ಯಂತ ಉತ್ತಮವಾದ ಮಾರ್ಗದಲ್ಲಿ ಕ್ರಿಸ್ತನ ಅಂಗದಲ್ಲಿ ಸೇವೆ ಮಾಡಲೂ ಮತ್ತು ಜನರಿಗೆ ಅತ್ಯುತ್ತಮವಾದ ಮಾರ್ಗದಲ್ಲಿ ಸೇವೆ ಸಲ್ಲಿಸುವಂತಹ ಸೂಚ್ಯಾಂಶವು ಇಲ್ಲಿದೆ. ದೇವರ ಬಗೆಯ ಪ್ರೀತಿಯಲ್ಲಿ ನಾವು ನಡೆಯಬೇಕೆಂದು ನಮಗೆ ತಿಳಿಸುತ್ತಾನೆ.

1 ಕೊರಿಂಥದವರಿಗೆ 13ನೇ ಅಧ್ಯಾಯದ ಮೊದಲ ಭಾಗದಲ್ಲಿ ಪೌಲನು ನಾವುಗಳು ಆತ್ಮನ ವರಗಳನ್ನು ಅಭ್ಯಸಿಸಿದರೂ, ಸದಸ್ಯತ್ವದ ಕಾರ್ಯಗಳನ್ನು ಮಾಡಿದರೂ ಮತ್ತು ನಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಸಮರ್ಪಿಸುವುದನ್ನು ತೋರಿಸುವಂತಹ ದೊಡ್ಡದಾದ ದಾನಶೀಲ ಕ್ರಿಯೆಗಳನ್ನು ಮಾಡಿದರೂ, ಇವೆಲ್ಲವೂ ದೇವರ-ಬಗೆಯ ಪ್ರೀತಿಯಿಂದ ಮಾರ್ಗದರ್ಶಿಸದಿದ್ದರೆ ಮತ್ತು ಪ್ರೇರಿಪಿಸಲ್ಪಡದೇ ಇದ್ದರೆ ಇವೆಲ್ಲವು ವ್ಯರ್ಥವಾದವು ಅಥವಾ ಖಾಲಿಯಾದವುಗಳಾಗಿವೆ. ಏನು ಅಲ್ಲದವುಗಳಾಗಿವೆ ಮತ್ತು ಯಾವುದೇ ಲಾಭದಾಯಕವಾಗಿರುವದಿಲ್ಲ. ಸೇವೆ ಮಾಡುವಾಗ ಮತ್ತು ಸೇವಾ ಕಾರ್ಯ ಸಲ್ಲಿಸುವಾಗ ಪ್ರೀತಿಯಲ್ಲಿ ನೆಲೆಗೊಂಡಿರುವುದರ ಪ್ರಾಮುಖ್ಯತೆಯನ್ನು ಇದು ತೋರಿಸುತ್ತದೆ.

ನಾವು ಮಾಡುವಂತಹದೆಲ್ಲವು ದೇವರ ಬಗೆಯ ಪ್ರೀತಿಯಿಂದ ಪ್ರೇರಿತವಾಗಿರಬೇಕು, ಮಾರ್ಗದರ್ಶಿಸಿರಬೇಕು ಮತ್ತು ನಿರ್ಣಯಿಸಲ್ಪಟ್ಟಿರಬೇಕು. ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವುದರಲ್ಲಿ ಮತ್ತು ವಾಸಿಸುವುದರಲ್ಲಿ

ಇದನ್ನು ಮಾಡಿರಿ. ವಚನಗಳು 4-8ರಲ್ಲಿ ಪೌಲನು ವ್ಯಾಖ್ಯಾನಿಸಿರುವಂತೆ ನಾವು ತಾಳ್ಮೆಯಿಲ್ಲದವರಾದರೆ, ದಯೆ ತೋರಿಸದಿದ್ದರೆ, ಹೊಟ್ಟೆಕಿಚ್ಚುಪಟ್ಟರೆ, ಹೊಗಳಿಕೊಂಡರೆ, ಗರ್ವಪಟ್ಟರೆ, ಮರ್ಯಾದೆಗೆಟ್ಟು ನಡೆದರೆ, ಸ್ವ-ಪ್ರಯೋಜನ ಚಿಂತಿಸಿದರೆ, ಸ್ವ-ಪ್ರಚಾರ ಮಾಡಿಕೊಂಡರೆ, ಸ್ವ-ಕೇಂದ್ರೀಕೃತವಾಗಿದ್ದರೆ, ಕೋಪಗೊಂಡರೆ, ಕೆರಳಿಸುವವನಾಗಿದ್ದರೆ, ಕೆಟ್ಟ ಆಲೋಚನೆ ಹೊಂದಿದ್ದರೆ ಅಥವಾ ಉದ್ದೇಶ ಹೊಂದಿದ್ದರೆ ಅಸತ್ಯ ಅಥವಾ ಅಪಕಾರ ಇಟ್ಟುಕೊಂಡಿರುವವನಾದರೆ, ಆಗ ನಾವು ಪ್ರೀತಿಯಿಂದ ಪ್ರೇರಿತರೂ, ಮಾರ್ಗದರ್ಶಿಸಿದವರು ಮತ್ತು ನಡೆಸುವವರು ಆಗಿರುವುದಿಲ್ಲ. ಅಕ್ರಮವಾದ ಪ್ರೇರಣೆಯೊಡನೆ ಆತ್ಮನ ವರಗಳನ್ನು ಅಭ್ಯಸಿಸಿದರೆ ಅದರ ಅರ್ಥವು ಏನಾಗಿರುವುದಿಲ್ಲ, ಖಾಲಿಯಾದದು, ವ್ಯರ್ಥವಾದವು ಮತ್ತು ಲಾಭಕರವಾಗಿರುವುದಿಲ್ಲ.

ಆತ್ಮನ ವರಗಳನ್ನು ಅಭ್ಯಸಿಸಲೂ, ಸೇವಾ ಕಾರ್ಯಗಳು, ದಾನಶೀಲ ಕ್ರಿಯೆಗಳು ಮತ್ತು ನಂಬಿಕೆ ಮತ್ತು ನಿರೀಕ್ಷೆಯನ್ನು ತೋರಿಸಲೂ, ಪ್ರೀತಿಯು ಅತ್ಯುತ್ತಮವಾದದ್ದೆಂಬುದಕ್ಕೆ ಕಾರಣವೇನೆಂದರೆ ಪ್ರೀತಿಯು ಶಾಶ್ವತವಾದದ್ದು. ಒಂದೇ ಒಂದು ವಿಷಯ ಕಾರ್ಯರೂಪದಲ್ಲಿರುವ ಒಂದು ಸಮಯ ಬರುತ್ತದೆ. ಅದು ಪ್ರೀತಿಯಾಗಿದೆ – ಇತರೆ ಯಾವುದು ಉಪಯೋಗದಲ್ಲಿರುವುದಿಲ್ಲ, ಅವುಗಳು ನಿಷ್ಕ್ರಿಯವಾಗಿರುತ್ತವೆ.

ಆತ್ಮನ ವರಗಳನ್ನು ಅಥವಾ ನಮ್ಮ ಸದಸ್ಯತ್ವದ ಕ್ರಿಯೆಗಳನ್ನು ಅಭ್ಯಾಸಿಸಬಾರದೆಂಬುದಾಗಿ ನಾವು ಹೇಳುವುದಕ್ಕೆ ಅಲ್ಲ. ಪ್ರೀತಿಯಲ್ಲಿ ನಡೆಯುವುದರ ನಮ್ಮ ಸರಿಯಾದ ಆದ್ಯತೆ ಹೊಂದಿದವರಾಗಿ ಆತ್ಮನ ವರಗಳು ಮತ್ತು ಸದಸ್ಯತ್ವದ ಕ್ರಿಯೆಗಳನ್ನು ಅಭ್ಯಾಸಿಸುತ್ತಾ ಮುಂದುವರೆದರೆ ಪೌಲನು 1 ಕೊರಿಂಥದವರಿಗೆ 14:1ರಲ್ಲಿ ಇರುವ ವಿಷಯಗಳನ್ನು ಒಟ್ಟುಗೂಡಿಸುತ್ತದೆ.

ಪ್ರೀತಿಯು ಮೂಲಕವಾಗಿ ನಂಬಿಕೆ ಕಾರ್ಯ ಮಾಡುತ್ತದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ (ಗಲಾತ್ಯದವರಿಗೆ 5:6)

(ಗಮನಿಸಿ: ವಚನ 8ರಲ್ಲಿ, ಪ್ರವಾದನೆಗಳ ಸನ್ನಿವೇಶದಲ್ಲಿ (''ಪ್ರವಾದನೆಗಳು ಇಲ್ಲದಂತಾಗುವವು'') ಮತ್ತು ಜ್ಞಾನ (ಜ್ಞಾನವು ಇಲ್ಲದಂತಾಗುವದು). ಗ್ರೀಕ್ ಪದದಲ್ಲಿ ''ಕಟಾರ್ಜಿಯೋ'' ಎಂಬುದು ''ಅವರು ವಿಫಲರಾಗುತ್ತಾರೆ'' ಮತ್ತು ''ಅದು ಇಲ್ಲದಂತಾಗುತ್ತದೆ'' ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಇದರ ಅರ್ಥವು ಇಂತಹ ವರಗಳು ಕಾರ್ಯರೂಪದಲ್ಲಿ ಇರುವುದಿಲ್ಲ. ನಿಷ್ಕ್ರಿಯವಾಗಿರುವಂತವುಗಳಾಗಿರುತ್ತವೆ.

## ಪ್ರೀತಿಯು ಬಿದ್ದುಹೋಗುವುದಿಲ್ಲ

**1 ಕೊರಿಂಥದವರಿಗೆ 13:8**
**ಪ್ರೀತಿಯು ಬಿದ್ದುಹೋಗುವುದಿಲ್ಲ**

ಪ್ರೀತಿಯ ಸಂಬಂಧದಲ್ಲಿ "ಬಿದ್ದು ಹೋಗುವುದು" ಎಂಬುದಕ್ಕೆ ಗ್ರೀಕ್‌ನಲ್ಲಿ "ಎಕ್‌ಪಿಪ್ಟೋಟೋ" ಎಂಬುದು ಭಾಷಾಂತರಿಸಲ್ಪಟ್ಟಿದೆ. ಇದರ ಅರ್ಥವು "ಒಬ್ಬರ ಚಲನೆಯಿಂದ ಹೊರಹಾಕಿರುವುದು ಎಂಬುದಾಗಿ ಸ್ಟ್ರಾಂಗ್ಸ್ ಇಬ್ರಿಯ ಮತ್ತು ಗ್ರೀಕ್ ಡಿಕ್ಷನರಿಯಲ್ಲಿರುವ ಅರ್ಥವಾಗಿದೆ. ಥಾಯರ್ಸ್ ಗ್ರೀಕ್ ವ್ಯಾಖ್ಯಾನದಲ್ಲಿ "ಒಬ್ಬ *ಇರಿಸಿಕೊಳ್ಳಲಾಗದಂತಹ ಸ್ಥಳದಿಂದ ಬಿದ್ದು ಹೋಗುವುದು, ಒಂದು ಸ್ಥಾನದಿಂದ ಬಿದ್ದು ಹೋಗುವುದು, ಬಲರಹಿತವಾಗಿ ಬಿದ್ದು ಹೋಗುವದು, ನೆಲಕ್ಕೆ ಬಿದ್ದು ಹೋಗುವದು, ಯಾವುದೇ ಪರಿಣಾಮ ಇಲ್ಲದಿರುವುದು"* ಎಂಬುದಾಗಿ ಅರ್ಥವಿದೆ.

ಇವೆಲ್ಲವನ್ನು ಒಟ್ಟಾಗಿ ಸೇರಿಸುವುದಾದರೆ, ನಾವು ಪ್ರೀತಿಯಲ್ಲಿ ನಡೆಯುವಾಗ, ನಾವು ಸಹಜವಾಗಿ ಹೊರಬರುವುದಿಲ್ಲ ಎಂಬ ಅರ್ಥವನ್ನು ಹೊಂದುತ್ತೇವೆ. ಪ್ರೀತಿಯಲ್ಲಿ ನಡೆಯುವುದೆಂದರೆ ಸರಿಯಾದ ಮಾರ್ಗದಲ್ಲಿ, ಸರಿಯಾದ ಚಲನೆಯಲ್ಲಿರುವುದಾಗಿದೆ. ಜೊತೆಗೆ ನಾವು ಪ್ರೀತಿಯಲ್ಲಿ ನಡೆಯುವಾಗ ನಾವು ಬಲವಿಲ್ಲದವರಾಗಿ ಬಿದ್ದು ಹೋಗುವದಿಲ್ಲ. ಬದಲಿಗೆ ನಾವು ಪರಿಣಾಮ ಮತ್ತು ಪ್ರಭಾವಗಳನ್ನು ಹೊಂದಿರುತ್ತೇವೆ.

ಆದ್ದರಿಂದ ನಾವು ಪ್ರೀತಿಯಲ್ಲಿ ನಡೆಯುವಾಗ, ನಾವು ಬಿದ್ದು ಹೋಗದಂತಹ ಒಂದು ಮಾರ್ಗವನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಅರ್ಥ ಮಾಡಿಕೊಳ್ಳೋಣ. ದೇವರ – ವಿಧದ ಪ್ರೀತಿಯಿಂದ ನಡೆಸಿಕೊಂಡು, ಮಾರ್ಗದರ್ಶಿಸಿಕೊಂಡು, ಪ್ರೇರಿತರಾಗಿರುವುದರಿಂದ ಯಾವುದನ್ನು ಮಾಡಿದರು ಅದು ನೆರವೇರುತ್ತದೆ ಅಥವಾ ಫಲಿಸುತ್ತದೆ.

ತಂದೆಯ ಪ್ರೀತಿಯಲ್ಲಿ ನೆಲೆಸಿರುವುದು ಮತ್ತು ಜೀವಿಸುವುದು ಯಾವಾಗಲೂ ನಿಮ್ಮನ್ನು ಸರಿಯಾದ ಚಲನೆಯಲ್ಲಿರಿಸುತ್ತದೆ

## ಆತನ ಪ್ರೀತಿಯನ್ನು ಪಡೆದುಕೊಳ್ಳುವುದು ನಮ್ಮ ಪ್ರೀತಿಸುವ ಸಾಮರ್ಥ್ಯವನ್ನು ವಿಸ್ತರಿಸುತ್ತದೆ.

**ರೋಮಾಪುರದವರಿಗೆ 5:3–5**

**ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕಂದರೆ, ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ. ತಾಳ್ಮೆಯಿಂದ ಅನುಭವ ಸಿದ್ಧಿ ಹುಟ್ಟುತ್ತದೆ. ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು. ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವುದಿಲ್ಲ. ನಮಗೆ ಕೊಟ್ಟಿರುವ ಪವಿತ್ರಾತ್ಮತ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ.**

ನಾವು ತೊಂದರೆಗಳ ಮೂಲಕವಾಗಿ ಹಾದು ಹೋಗುವಂತಹ ವಿಶ್ವಾಸಿಗಳಾದ ನಮ್ಮ ಪ್ರಸ್ತುತ ಜೀವಿತದ ಕುರಿತು ಅಪೊಸ್ತಲನಾದ ಪೌಲನು ಬರೆಯುತ್ತಾನೆ. ಇದರಿಂದ ನಮಗೆ ಪರಿಶ್ರಮ (ತಾಳ್ಮೆಯು) ವೃದ್ಧಿಯಾಗುತ್ತದೆಂದು ತಿಳಿದವರಾಗಿ ಮಾಡುತ್ತೇವೆ. ನಮ್ಮ ಗುಣನಡತೆ ಬದಲಿಸುತ್ತದೆ ಮತ್ತು ನಮ್ಮ ನಿರೀಕ್ಷೆ – ನಮ್ಮ ಭರವಸೆ ಅಥವಾ ಅನುಭವ ಸಿದ್ಧಿ ಮುಂದೆ ಬರಬೇಕಾಗಿರುವವುಗಳಿನ್ನು ಬಲಪಡಿಸುತ್ತದೆ.

ಈಗ ನಿರೀಕ್ಷಣ ಅಥವಾ ನಿರೀಕ್ಷೆಗಳು ನಮಗೆ ನಿರಾಶೆಯನ್ನುಂಟು ಮಾಡುವುದಿಲ್ಲ. ವಾಸ್ತವವಾಗಿ ಇಂತಹ ನಿರೀಕ್ಷೆಯು ನಾಚಿಕೆಯಲ್ಲಿ ನಮ್ಮನ್ನು ಬಿಡುವುದಿಲ್ಲ ಅಥವಾ ನಮ್ಮಲ್ಲಿರುವಂತಹ ನಿರೀಕ್ಷೆಯಲ್ಲಿ ಭಂಗಪಡಿಸಿಕೊಳ್ಳುವುದಿಲ್ಲ. ಯಾಕಂದರೆ, ಈಗ ಮತ್ತು ಇಲ್ಲಿ ನಾವು ತಂದೆಯ ಅಪರಿಮಿತವಾದ ಮತ್ತು ಅಗಾಧವಾದ ಪ್ರೀತಿಯನ್ನು ದೇವರ ಪ್ರೀತಿಯನ್ನು ನಾವು ಅನುಭವಿಸುತ್ತಿದ್ದೇವೆ. ಇಂತಹ ಪ್ರೀತಿಯು ನಮಗೆ ಪವಿತ್ರಾತ್ಮನಿಂದ ಧಾರಾಳವಾಗಿ ಸುರಿಸುವಿಕೆಯಿಂದ ನಮ್ಮ ಹೃದಯಗಳಿಗೆ ಸುರಿಸಲ್ಪಟ್ಟಿದೆ.

ಇಂತಹ ಪ್ರೀತಿ – ತಂದೆಯ ಪ್ರೀತಿ – ಸಮೃದ್ಧವಾಗಿದೆ ಮತ್ತು ನಾವು ಅನುಭವಿಸಲೂ ಮತ್ತು ಸಂತೋಷಿಸಲೂ ಮತ್ತು ಇದನ್ನು ನಾವು ಇತರರಿಗೂ ಹೊರಸೂಸಲೂ ನಮ್ಮ ಹೃದಯದಲ್ಲಿ ತುಂಬಿ ಹೊರಸೂಸಲ್ಪಟ್ಟಿದೆ.

ನಮ್ಮ ಹೃದಯದಲ್ಲಿ ತಂದೆಯ ಪ್ರೀತಿಯು ಧಾರಾಳವಾಗಿರುವುದರಿಂದ ನಮ್ಮ ನಿರೀಕ್ಷೆಯಲ್ಲಿ ಭಂಗಪಡುವುದಿಲ್ಲ ಮತ್ತು ಉಪದ್ರವದಲ್ಲಿಯು ನಾವು ಸಂತೋಷವಾಗಿರುತ್ತೇವೆ.

ನಮ್ಮ ಹೃದಯದಲ್ಲಿ ತಂದೆಯ ಪ್ರೀತಿಯು ತಂಬಿ ಹರಿಯುವುದರಿಂದ ಇಂತಹ ಪ್ರೀತಿಯಿಂದ ಇತರರನ್ನು ಪ್ರೀತಿಸುವ ನಮ್ಮ ಸಾಮರ್ಥ್ಯವು ಸ್ಫೋಟಗೊಳ್ಳುತ್ತದೆ

ಅಥವಾ ಹುಟ್ಟುತ್ತದೆ. ಆತನ ಪ್ರೀತಿಸಿದ ಪ್ರಕಾರವಾಗಿ ಇತರರನ್ನು ಪ್ರೀತಿಸಲೂ ನಾವು ಬಲಗೊಳ್ಳುತ್ತೇವೆ. ದೇವರು ಪ್ರೀತಿಸುವ ಪ್ರಕಾರವಾಗಿ, ನಾವು ಪ್ರೀತಿಸುತ್ತೇವೆ! ಪ್ರೀತಿಯು ಮಾಡುವುದನ್ನೆಲ್ಲಾ ನಾವು ಮಾಡುತ್ತೇವೆ. ನ್ಯಾಯತೀರ್ಪು ಮಾಡುವುದು (ನಕಾರಾತ್ಮಕ ರೀತಿಯಲ್ಲಿ) ಟೀಕಿಸುವುದು ಮತ್ತು ಜನರನ್ನು ಖಂಡಿಸುವವುಗಳನ್ನು ನಿಲ್ಲಿಸುತ್ತೇವೆ. ನಾವು ಸತ್ಯ ಮಾತಾಡುತ್ತೇವೆ. ತಿದ್ದುತ್ತೇವೆ ಮತ್ತು ಪ್ರೀತಿಯಲ್ಲಿ ಮಾರ್ಗದರ್ಶಿಸುತ್ತೇವೆ. ತೊಂದರೆಯ ಪರಿಸ್ಥಿತಿಗಳಲ್ಲಿಯು ಜನರನ್ನು ಎತ್ತಿ ಹಿಡಿಯುತೇವೆ. ನಿರೀಕ್ಷಿಸುತ್ತೇವೆ ಮತ್ತು ನಂಬುತ್ತೇವೆ.

ಈ ಒಂದು ಪ್ರೀತಿಯು ಗಂಡ-ಹೆಂಡತಿಯ ಸಂಬಂಧದಲ್ಲಿರುವದನ್ನು ಕಲ್ಪಿಸಿಕೊಳ್ಳಿರಿ. ಕ್ರಿಸ್ತನು ಪ್ರೀತಿಸಿದ ಪ್ರಕಾರವಾಗಿ ಮತ್ತು ತಂದೆಯ ಪ್ರೀತಿಯ ಪ್ರೀತಿಯೊಡನೆ ಇದನ್ನು ಮಾಡಬೇಕೆಂಬುದಾಗಿ ದೇವರ ವಾಕ್ಯದಲ್ಲಿ ನಾವು ಉಪದೇಶಿಸಲ್ಪಟ್ಟಿದ್ದೇವೆ.

**ಎಫೆಸದವರಿಗೆ 5:25**

**ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ.**

ನಮ್ಮ ಮದುವೆಗಳು ಮತ್ತು ಕುಟುಂಬಗಳು ಒಂದು ನೋವುಂಟು ಮಾಡುವ ಲೋಕದಲ್ಲಿ ಪ್ರೀತಿಯ ಚಿಲುಮೆಗಳಾಗಿವೆ. ಗಂಡ, ಹೆಂಡತಿ ಮತ್ತು ಮಕ್ಕಳು ಮನೆಯಲ್ಲಿರಲು ಬಯಸುತ್ತಾರೆ. ಒಟ್ಟಾಗಿರುತ್ತಾರೆ. ಯಾಕೆಂದರೆ, ತಂದೆಯ ಪ್ರೀತಿಯು ತುಂಬಿ ಹೊರಸೂಸುವಂತೆ ಅಲ್ಲಿರುತ್ತದೆ. ಮನೆಯು ಆಶ್ರಯದ, ಸಂತೈಸುವಿಕೆಯ, ಬಲದ ಮತ್ತು ಸ್ವಸ್ಥತೆಯ ಸ್ಥಳವಾಗಿರುತ್ತದೆ.

## ದೇವರು ಪ್ರೀತಿಸಿದ ಪ್ರಕಾರ ಪ್ರೀತಿಸುವುದು ದೇವರನ್ನು ಪ್ರಕಟಿಸುತ್ತದೆ.

**1 ಯೋಹಾನ 4:12**

**ದೇವರನ್ನು ಯಾರೂ ಎಂದೂ ನೋಡಿಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬಂತು.**

ಯಾವುದೇ ಸಮಯದಲ್ಲಿ ಯಾರೂ ದೇವರನ್ನು ನೋಡಿಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸುವಾಗ ದೇವರು ನಮ್ಮಲ್ಲಿ ನೆಲೆಗೊಂಡಿರುತ್ತಾನೆ ಮತ್ತು ನಮ್ಮ ಮೂಲಕ ತೋರಿಸಲ್ಪಡುತ್ತಾನೆ. ಆತನ ಪ್ರೀತಿಯೊಡನೆ ನಾವು ಇತರರನ್ನು ಪ್ರೀತಿಸುವಾಗ, ದೇವರು ನಮ್ಮ ಮೂಲಕವಾಗಿ ಪ್ರಕಟಗೊಳ್ಳುತ್ತಾನೆ. ದೇವರು ನಮ್ಮ ಮೂಲಕವಾಗಿ ಪ್ರಕಟಗೊಳ್ಳುತ್ತಾನೆ. ದೇವರು ಪ್ರೀತಿಸಿದ ಪ್ರಕಾರ ನಾವು ಪ್ರೀತಿಸಿದರೆ ಅದು ದೇವರನ್ನು

ತೋರಿಸುತ್ತದೆ. ಇದು ತಂದೆಯ ಪ್ರೀತಿಯ ಸ್ಪಷ್ಟವಾದ ತೋರಿಸುವಿಕೆಯ ಮೂಲಕವಾಗಿ ದೇವರ ಪ್ರಕಟನೆಯ ಒಂದು ಆಳತೆಯನ್ನು ತರುತ್ತದೆ.

**ಮಲಾಕಿಯ 4:5–6**

**ನಾನು ಒಂದು ದೇಶವನ್ನು ಶಾಪದಿಂದ ಹತ ಮಾಡದಂತೆ ಯೆಹೋವನ ಆಗಮನದ ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು. ಅವನು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೆ ತಿರುಗಿಸುವನು.**

ಕರ್ತನ ಮಹಾದಿನವು ಬರುವದಕ್ಕೆ ಮುಂಚೆಯೇ ಒಂದು ಚಲನೆಯೆಂದರೆ, ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಹೃದಯವನ್ನು ತಂದೆಗಳ ಕಡೆಗೂ ತಿರುಗಿಸುವುದಾಗಿದೆ. ಇದು ಬಹಳ ಪ್ರಾಮುಖ್ಯವಾದುದು. ಇದು ಜರುಗಲು ವಿಫಲವಾದರೆ ಭೂಮಿಯು ಒಂದು ಶಾಪದಿದಂದ ಹತಗೊಳ್ಳುತ್ತದೆ. ಇದನ್ನು ಸ್ವಾಭಾವಿಕ ಕುಟುಂಬ ಮತ್ತು ಸ್ಥಳೀಯ ಸಭಾ ಕುಟುಂಬದ ಸನ್ನಿವೇಶದಲ್ಲಿ ಇದನ್ನು ಪರಿಗಣಿಸೋಣ. ನಮ್ಮ ಪರಲೋಕದ ತಂದೆಯ ಅಗಾಧವಾದ ಪರಿಪಾಲನೆಯ, ವಾತ್ಸಲ್ಯದ ದೇವರ ಪ್ರೀತಿಯ ಒಂದು ನೋಟವನ್ನು ಮೊದಲ ಬಾರಿಗೆ ಹೊಂದಿಕೊಳ್ಳುವಂತಹ ಅವಕಾಶವು ಅವರ ಸ್ವಂತ ತಂದೆ–ತಾಯಿಯಿಂದ ಹೊಂದಿಕೊಂಡದ್ದಾಗಿರುತ್ತದೆ. ಇದು ಸಿಗದಿದ್ದಾಗ, ಇಂತಹ ಬಗೆಯ ಪ್ರೀತಿಯನ್ನು ಎಲ್ಲಿ ಹೊಂದಬೇಕೆಂಬುದಾಗಿ ಸ್ಪಷ್ಟತೆಯಿರುವುದಿಲ್ಲ. ತಂದೆ–ತಾಯಿಗಳಾಗಿ ಕೆಲವು ಬಾರಿ ನಮ್ಮ ಮಕ್ಕಳಿಗೆ ಆತನ ಪ್ರೀತಿಯು ಯಾವುದೇ ಸೂಚನೆಯನ್ನು ಕೊಟ್ಟಿರುವುದಿಲ್ಲ ಅಥವಾ ಪರಲೋಕದ ತಂದೆಯ ಪ್ರೀತಿಯನ್ನು ತಪ್ಪಾಗಿ ನಿರೂಪಿಸಿರುತ್ತಾರೆ. ತಂದೆಯಂದಿರಾಗಿ ನಮ್ಮಲ್ಲಿ ಹಲವರು, ವಾತ್ಸಲ್ಯ ಅಥವಾ ಭಾವನೆ ತೋರಿಸುವುದು ಬಲಹೀನತೆಯ ಒಂದು ಸೂಚನೆ ಮತ್ತು ಇದು "ಒಬ್ಬ ಮನುಷ್ಯನಾಗಿರುವುದರಲ್ಲವೆಂದು," ತಪ್ಪಾಗಿ ಆಲೋಚಿಸುತ್ತೇವೆ. ಇದು ಸತ್ಯವಲ್ಲ!

ತಂದೆಯ ಪ್ರೀತಿಯ ಪ್ರಕಟನೆಯನ್ನು ನಮ್ಮ ಕುಟುಂಬಗಳು ನೋಡಬೇಕು. ಆತನ ಮೃದುತ್ವ, ಆತನ ಸೌಮ್ಯತೆ, ಆತನ ಒಳ್ಳೆಯತನ, ಆತನ ಕೃಪೆ, ಆತನ ತಾಳ್ಮೆ, ಆತನ ಕನಿಕರವನ್ನು ತಂದೆಯಂದಿರಾಗಿ ನಮ್ಮಲ್ಲಿರಬೇಕು. ಯಾಕೆಂದರೆ, ಅವರು ನಮ್ಮಲ್ಲಿ ನೋಡುವಂತದ್ದು ನಮ್ಮ ಪರಲೋಕದ ತಂದೆಯಾದ ದೇವರ ಪ್ರೀತಿಯಲ್ಲಿ ಅವರು ಆಳವಾಗಿ ಸೆಳೆಯಲ್ಪಡಬಹುದು.

ಇದು ಸಭೆಯ ಕುಟುಂಬದಲ್ಲಿಯ ಸಹ ಸತ್ಯವಾಗಿದೆ. ರಕ್ಷಿಸಲ್ಪಡದಿರುವವರು, ದಾರಿತಪ್ಪಿ ಹೋದವರು, ತಪ್ಪಿ ಹೋದವರು, ತಂದೆಯ ಪ್ರೀತಿಯನ್ನು ನೋಡಲೂ ಸಭಾ ಸಮುದಾಯದಲ್ಲಿರುವ "ತಂದೆಯರು" (ಮತ್ತು ತಾಯಂದಿರು) ಬಳಿಗೆ

ಅವರು ಮನೆಗೆ ಬರುತ್ತಾರೆ. ಸ್ಥಳೀಯ ಸಭೆಯು, ನೊಂದವರು, ಕಳೆದು ಹೋದವರ, ಹಾನಿಗೊಳಗಾದವರಿಗೆ ಆಹ್ವಾನ ನೀಡುವ ಸ್ಥಳಗಳಾಗಿರಬೇಕು ಮತ್ತು ಸಂಪೂರ್ಣತೆಯ ಸ್ಥಳಕ್ಕೆ ತಂದೆಯ ಪ್ರೀತಿಯ ಮೂಲಕವಾಗಿ ಅವರು ಪೋಷಿಸಲ್ಪಡಬೇಕು.

## ದೇವರು ಪ್ರೀತಿಸಿದ ಪ್ರಕಾರ ಪ್ರೀತಿಸುವುದು ಆತನ ಪ್ರೀತಿಯ ನಮ್ಮ ಪ್ರಕಟನೆಯ್ನನು ವಿಸ್ತರಿಸುತ್ತದೆ.

**1 ಯೋಹಾನ 4:12**

**ದೇವರನ್ನು ಯಾರೂ ಎಂದೂ ನೋಡಿಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ.**

ನಾವು ಆತನ ಪ್ರೀತಿಯೊಡನೆ ಇತರರನ್ನು ಪ್ರೀತಿಸುವಾಗ ಆತನ ಪ್ರೀತಿಯು ಪರಿಪೂರ್ಣವಾಗುತ್ತದೆ, ಪೂರ್ಣವಾಗುತ್ತದೆ, ಇದರ ಸಂಪೂರ್ಣತೆ ತಲುಪುತ್ತದೆ ಮತ್ತು ನಮ್ಮಲಿ ಆದರ ನಿರೂಪಿತ ಉದ್ದೇಶಗಳನ್ನು ನೆರವೇರಿಸುತ್ತವೆ. ನಮಗಾಗಿ ಇರುವ ತಂದೆಯ ಪ್ರೀತಿಯ ಒಂದು ಮಹತ್ತಾದ ತಿಳುವಳಿಕೆಗೆ ನಾವು ಬೆಳೆಯುತ್ತೇವೆ ಮತ್ತು ನಮ್ಮಲ್ಲಿ ಆತನ ಪ್ರೀತಿಯು ಉದ್ದೇಶಿಸಿದ ಕಾರ್ಯವನ್ನು ಮಾಡಲೂ ಶಕ್ತವಾಗುತ್ತದೆ.

ನಮ್ಮ ತಿಳಿವಳಿಕೆ ಮತ್ತು ತಂದೆಯ ಪ್ರೀತಿಯ ಪ್ರಕಟನೆಯಲ್ಲಿ ಬೆಳೆಯುವಂತಹ ಉತ್ತಮವಾದ ಮಾರ್ಗವು ಆತನು ಪ್ರೀತಿಸಿದಂತೆಯೇ ಪ್ರೀತಿಸುವುದಾಗಿದೆ. ದೇವರು ಪ್ರೀತಿಸುವ ಪ್ರಕಾರ ಪ್ರೀತಿಸುವ ಆಯ್ಕೆ ಮಾಡಿದಾಗ, ಕಠಿಣ ತೊಂದರೆಗಳ ಪರಿಸ್ಥಿತಿಯಲ್ಲಿಯು ಇದ್ದನು ಪ್ರಾಯೋಗಿಕವಾಗಿ ಮಾಡುವಾಗ, ಆತನ ಪ್ರೀತಿಯ ನಮ್ಮ ವೈಯಕ್ತಿಕ ಪ್ರಕಟನೆಯು ಬೆಳೆಯುತ್ತಿರುತ್ತದೆ. ಇತರರನ್ನು ಪ್ರೀತಿಸುವ ನಮ್ಮ ಸಾಮರ್ಥ್ಯವು ವಿಸ್ತಾರಗೊಳ್ಳುವಾಗ ನಮಗಾಗಿರುವ ಆತನ ಪ್ರೀತಿಯ ಮಹತ್ತತೆಯನ್ನು ಅಧಿಕವಾಗಿ ತಿಳಿಯಲು ನಾವು ಪ್ರಾರಂಭಿಸುತ್ತೇವೆ. ಇತರರಿಗಾಗಿ ನಮ್ಮ ಪ್ರೀತಿಯನ್ನು ದೇವರು ಅಧಿಕವಾಗಿ ವಿಸ್ತರಿಸುವಾಗ ನಮಗಾಗಿ ಇರುವ ಆತನ ಪ್ರೀತಿಯ ನಮ್ಮ ಪ್ರಕಟನೆಯು ಅಧಿಕಗೊಳ್ಳುತ್ತದೆ. ನಾವು ಆತನ ಪ್ರೀತಿಯನ್ನು ಸುರಿಸುವಾಗ, ಆತನ ಪ್ರೀತಿಯು ಅಧಿಕವಾದ ಸುರಿಸುವಿಕೆಯನ್ನು ನಾವು ಅನುಭವಿಸುತ್ತೇವೆ. ಆತನ ಪ್ರೀತಿಯ ಒಂದು ದೊಡ್ಡದಾದ ಪ್ರಕಟನೆಯು ನಮ್ಮದಾಗುತ್ತದೆ.

## ಪ್ರೀತಿಯಲ್ಲಿ ನಡೆಯುವುದು, ದೇವರೊಡನೆ ಐಕ್ಯತೆಯಲ್ಲಿ ನಡೆಯುವುದಾಗಿದೆ

**1 ಯೋಹಾನ 4:16**
**ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ. ಆದನ್ನು ನಂಬಿದ್ದೇವೆ.**

**1 ಯೋಹಾನ 4:16 (ಗುಡ್‌ನ್ಯೂಸ್ ಬೈಬಲ್)**
**ದೇವರು ನಮಗಾಗಿ ಇಟ್ಟಿರುವ ಪ್ರೀತಿಯನ್ನು ನಾವುಗಳು ನಂಬಿದ್ದೇವೆ ಮತ್ತು ತಿಳಿದುಕೊಂಡಿದ್ದೇವೆ. ದೇವರು ಪ್ರೀತಿಸ್ವರೂಪಿಯು, ಪ್ರೀತಿಯಲ್ಲಿ ಜೀವಿಸುವವರು ದೇವರೊಡನೆ ಐಕ್ಯತೆಯಲ್ಲಿ ಜೀವಿಸುತ್ತಾರೆ ಮತ್ತು ದೇವರು ಅವರೊಡನೆ ಐಕ್ಯತೆಯಲ್ಲಿ ಜೀವಿಸುತ್ತಾನೆ.**

ನಾವು ತಂದೆಯ ಪ್ರೀತಿಯಲ್ಲಿ ಜೀವಿಸುವಾಗ ಮತ್ತು ನೆಲೆಸುವಾಗ, ನಾವು ದೇವರಲ್ಲಿ ಮತ್ತು ದೇವರು ನಮ್ಮಲ್ಲಿ ನೆಲೆಗೊಂಡಿರುತ್ತಾನೆ. ತಂದೆಯ ಪ್ರೀತಿಯಲ್ಲಿ ನಾವು ನೆಲೆಗೊಂಡಿರುವಾಗ, ನಾವು ದೇವರೊಡನೆ ಐಕ್ಯತೆಗೆ ಬರುತ್ತೇವೆ. ನಾವು ಸಾಮಾನ್ಯವಾಗಿ ದೇವರಲ್ಲಿ ಮತ್ತು ದೇವರ ಮೂಲಕವಾಗಿ ಚಲಿಸುತ್ತೇವೆ, ಮತ್ತು ದೇವರು ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ಚಲಿಸುತ್ತಾನೆ. ನಾವು ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುವಾಗ ಮತ್ತು ಜೀವಿಸುವಾಗ ದೇವರೊಂದಿಗೆ ಐಕ್ಯತೆಗೆ ಚಲಿಸುತ್ತೇವೆಂಬದು ಅತ್ಯಂತ ಬಲವಾದ ಸತ್ಯವಾಗಿದೆ. ನಾವು ಪ್ರೀತಿಯಲ್ಲಿ ಚಲಿಸುವಾಗ ದೇವರು ನಮ್ಮೊಂದಿಗೆ ಚಲಿಸುತ್ತಾನೆ. ನಾವು ದೇವರ ಪ್ರೀತಿಯಲ್ಲಿ ಕ್ರಿಯೆ ಮಾಡಿದರೆ ದೇವರು ನಮೊಂದಿಗೆ ದೇವರು ಕಾರ್ಯ ಮಾಡುತ್ತಾನೆ. ಪ್ರೀತಿಯಲ್ಲಿ ನಾವು ಮುಟ್ಟಿದಾಗ ಆತನು ಮುಟ್ಟುತ್ತಾನೆ. ಪ್ರೀತಿಯಲ್ಲಿ ನಾವು ಮಾತಾಡುವಾಗ ದೇವರು ಮಾತಾಡುತ್ತಾನೆ. ನಾವು ದೇವರ ಬಗೆಯ ಪ್ರೀತಿಯಲ್ಲಿ ನಾವು ನಡೆಯುವಾಗ ನಾವು ದೇವರೊಂದಿಗೆ ಐಕ್ಯತೆಯಲ್ಲಿ ನಡೆಯುತ್ತೇವೆ. ಆದ್ದರಿಂದ ನಾವು ಅಜೇಯರಾಗಿದ್ದೇವೆ. ವೈರಿಯು ನಮ್ಮನ್ನು ನಿಲ್ಲಿಸಲೂ, ಹಿಂದೆ ಎಳೆಯಲು ಅಥವಾ ನಮ್ಮನ್ನು ಕೆಳಕ್ಕೆ ಎಳೆಯಲು ಸಾಧ್ಯವಾಗುವುದಿಲ್ಲ.

ಇದನ್ನು ನಮ್ಮ ಜೀವಿತದ ಮಾರ್ಗವಾಗಿ ಇದನ್ನು ಮಾಡೋಣ. ತಂದೆಯ ಪ್ರೀತಿಯಲ್ಲಿ ಜೀವಿಸೋಣ, ನೆಲೆಸೋಣ ಮತ್ತು ಕಾರ್ಯ ಮಾಡೋಣ. ನಾವು ಇದನ್ನು ಮಾಡುವಾಗ ನಾವು ದೇವರಲ್ಲಿ ಚಲಿಸುತ್ತೇವೆ ಮತ್ತು ದೇವರು ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ಚಲಿಸುತ್ತಾನೆ.

## ಪ್ರತಿಫಲನ

1. ಕರ್ತನು ನಿಮ್ಮಲ್ಲಿ ಮಾಡಲು ಬಯಸುವಂತಹ ಬದಲಾವಣೆಯನ್ನು ಬರೆದಿಟ್ಟುಕೊಳ್ಳಿರಿ. ಆದ್ದರಿಂದ ಆತನು ಪ್ರೀತಿಸಿದ ಪ್ರಕಾರವಾಗಿ ಪರಲೋಕದ ತಂದೆಯನ್ನು ನಾವು ಅನುಕರಣೆ ಮಾಡಬಹುದು.

..................................................................................................

..................................................................................................

..................................................................................................

..................................................................................................

..................................................................................................

..................................................................................................

..................................................................................................

..................................................................................................

..................................................................................................

..................................................................................................

2. ಪ್ರೀತಿಯಲ್ಲಿ ನಡೆಯುವುದರ ಅನೇಕ ಸೂಕ್ಷ್ಮ ಪರಿಜ್ಞಾನಗಳನ್ನು ನಾವು ಪರಿಗಣಿಸುತ್ತೇವೆ:

   ಪ್ರೀತಿಯಲ್ಲಿ ನಡೆಯುವುದು ಶ್ರೇಷ್ಟವಾದ ಮಾರ್ಗದಲ್ಲಿ ನಡೆಯುವುದಾಗಿದೆ.

   ಆತನ ಪ್ರೀತಿಯನ್ನು ಪಡೆದುಕೊಳ್ಳುವುದು ಪ್ರೀತಿಸುವ ನಮ್ಮ ಸಾಮರ್ಥ್ಯವನ್ನು ವಿಸ್ತರಿಸುತ್ತದೆ.

   ದೇವರು ಪ್ರೀತಿಸಿದ ಪ್ರಕಾರ ಪ್ರೀತಿಸುವುದು ದೇವರನ್ನು ಪ್ರಕಟಿಸುತ್ತದೆ.

ದೇವರು ಪ್ರೀತಿಸಿದ ಪ್ರಕಾರ ಪ್ರೀತಿಸುವುದು ಆತನ ಪ್ರೀತಿಯ ನಮ್ಮ ಪ್ರಕಟನೆಯನ್ನು ವಿಸ್ತರಿಸುತ್ತದೆ.

ಪ್ರೀತಿಯಲ್ಲಿ ನಡೆಯುವುದು ದೇವರೊಂದಿಗೆ ಐಕ್ಯತೆಯಲ್ಲಿ ನಡೆಸುವುದಾಗಿದೆ.

ಇಂತಹ ವ್ಯಾಖ್ಯಾನಗಳಲ್ಲಿ ಪ್ರತಿಯೊಂದನ್ನು ವೈಯಕ್ತೀಕರಣಗೊಳಿಸಿರಿ ಮತ್ತು ಒಂದು ವ್ಯಾಖ್ಯಾನ ಅಥವಾ ಎರಡನ್ನು ಬರೆಯಿರಿ, ಅವುಗಳನ್ನು ನಮ್ಮ ವೈಯಕ್ತಿಕ ಜೀವಿತದ ಪರಿಸ್ಥಿತಿಯನ್ನು ಅನ್ವಯಿಸಿಕೊಳ್ಳಿರಿ:

ಅ) ಯಾಕೆಂದರೆ, ಪ್ರೀತಿಯಲ್ಲಿ ನಡೆಯುವುದು ಒಂದು ಅಧಿಕವಾದ ಶ್ರೇಷ್ಠ ಮಾರ್ಗದಲ್ಲಿ ನಡೆಯುವುದು ನಾನು ಮಾಡುತ್ತೇನೆ.

..........................................................................................

..........................................................................................

..........................................................................................

ಆ) ಯಾಕೆಂದರೆ ಪ್ರೀತಿಯು ಬಿದ್ದು ಹೋಗುವುದಿಲ್ಲ. ನಾನು ಮಾಡುತ್ತೇನೆ. ನನಗೆ ಗೊತ್ತು...

..........................................................................................

..........................................................................................

..........................................................................................

ಇ) ಯಾಕೆಂದರೆ, ಆತನ ಪ್ರೀತಿಯನ್ನು ಪಡೆದುಕೊಳ್ಳುವುದು ಪ್ರೀತಿಸುವ ನಮ್ಮ ಸಾಮರ್ಥ್ಯವನ್ನು ವಿಸ್ತರಿಸುತ್ತದೆ. ನನಗೆ ಗೊತ್ತು...

..........................................................................................

..........................................................................................

..........................................................................................

ಈ) ಯಾಕೆಂದರೆ, ದೇವರು ಪ್ರೀತಿಸಿದಂತೆ ಪ್ರೀತಿಸುವುದು ದೇವರನ್ನು ಪ್ರಕಟಿಸುತ್ತದೆ. ನಾನು ಮಾಡುತ್ತೇನೆ...

..........................................................................................

..........................................................................................

..........................................................................................

ಉ) ಯಾಕೆಂದರೆ, ದೇವರು ಸ್ತುತಿಸಿದಂತೆ ಪ್ರೀತಿಸುವುದು. ಆತನ ಪ್ರೀತಿಯ ನಮ್ಮ ಪ್ರಕಟನೆಯನ್ನು ವಿಸ್ತರಿಸುತ್ತದೆ... ನಾನು ಮಾಡುತ್ತೇನೆ...

..........................................................................................

..........................................................................................

..........................................................................................

ಊ) ಯಾಕೆಂದರೆ, ಪ್ರೀತಿಯಲ್ಲಿ ನಡೆಯುವುದು ದೇವರೊಂದಿಗೆ ಐಕ್ಯತೆಯಲ್ಲಿ ನಡೆಯುವುದಾಗಿದೆ. ನಾನು ಮಾಡುತ್ತೇನೆ...

..........................................................................................

..........................................................................................

..........................................................................................

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಹುದು/ನಮ್ಮ ಕಛೇರಿಯ ವಿಳಾಸವಾದ ಆಲ್ ಪೀಪಲ್ಸ್ ಸಭೆ ಗೆ ಬ್ಯಾಂಕ್ ಡ್ರಾಫ್ಟ್‌ಗಳನ್ನು ಕೊಡಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಹುದು.

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 5, M.G. Road, Bengaluru, Karnataka 560 001

*ದಯವಿಟ್ಟು ಗಮನಿಸಿ:* ಆಲ್ ಪೀಪಲ್ಸ್ ಸಭೆಯು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಹುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ***apcwo.org/give***.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಆಶೀರ್ವಾದಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ–ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಒಂದು ವಾರಾಂತ್ಯದ ಶಾಲೆಗೆ ಹಾಜರಾಗಿರಿ

ವಾರಾಂತ್ಯದ ಶಾಲೆಗಳು ಬೆಂಗಳೂರಿನಲ್ಲಿ ಜರುಗುತ್ತವೆ. ಸೇವೆ ಮತ್ತು ನಿರ್ದಿಷ್ಟವಾದ ಜೀವಿತದ ಕ್ಷೇತ್ರಗಳಲ್ಲಿ ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಮತ್ತು ತರಬೇತಿ ನೀಡಲು ಸಜ್ಜಾಗಿಸುವುದಾಗಿದೆ. ಇವುಗಳು ಅನುಕೂಲಕರವಾಗಿ ಒಂದು ವಾರಾಂತ್ಯದಲ್ಲಿ ನಡೆಯುತ್ತವೆ. (ಶನಿವಾರ/ಭಾನುವಾರ) ಬೆಳಿಗ್ಗೆ 10:00ರಿಂದ ಸಂಜೆ 5:00ರವರೆಗೆ ವಾರಾಂತ್ಯದ ಶಾಲೆಗಳು ತರಬೇತಿ ಹೊಂದಲೂ ಆಸಕ್ತಿಯುಳ್ಳವರಿಗೆ ಮತ್ತು ಸಜ್ಜುಗೊಳ್ಳಲೂ ಆಸಕ್ತಿಯಿರುವ ಸಂಘಸಂಸ್ಥೆಗಳ ಮತ್ತು ಎಲ್ಲಾ ಸಭೆಗಳ ವಿಶ್ವಾಸಿಗಳಿಗೂ ಆಹ್ವಾನವಿರುತ್ತದೆ. ಪ್ರಸಕ್ತವಾಗಿ ಜರುಗುವಂತಹ ವಾರಾಂತ್ಯದ ಶಾಲೆಗಳ ಪಟ್ಟಿಯು ಕೆಳಕಂಡಂತಿದೆ.

ಪ್ರವಾದನಾ ಸೇವೆಯ ವಾರಾಂತ್ಯದ ಶಾಲೆ

ಸ್ವಸ್ಥತೆ ಮತ್ತು ಬಿಡುಗಡೆಯ ವಾರಾಂತ್ಯದ ಶಾಲೆ

ಆತ್ಮನ ವರಗಳನ್ನು ತೋರ್ಪಡಿಸುವುದರ ಮೇಲೆ ವಾರಾಂತ್ಯದ ಶಾಲೆ

ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯ ವಾರಾಂತ್ಯದ ಶಾಲೆ

ಆಂತರಿಕ ಸಂಪೂರ್ಣತೆಯ ಮೇಲೆ ವಾರಾಂತ್ಯದ ಶಾಲೆ

ಜೀವನ ಶೈಲಿ ಸುವಾರ್ತೆ ಸೇವೆಯ ಮೇಲೆ ವಾರಾಂತ್ಯದ ಶಾಲೆ

ದೇವರು ಕಾರ್ಯನಿರತನಾಗಿದ್ದಾನೆಂಬುದರ ಮೇಲೆ ವಾರಾಂತ್ಯದ ಶಾಲೆ

ನಗರ ಸೇವೆಗಳು ಮತ್ತು ಸಭಾ ಸ್ಥಾಪನೆಯ ವಾರಾಂತ್ಯದ ಶಾಲೆ

ಕ್ರೈಸ್ತ ಕ್ಷಮೆ ಶಾಸ್ತ್ರದ ವಾರಾಂತ್ಯದ ಶಾಲೆ

ದಯವಿಟ್ಟು apcwo.org/weekendschoolನ್ನು ಪ್ರಸಕ್ತವಾದ ವೇಳಾಪಟ್ಟಿ ಮತ್ತು ಆನ್ ಲೈನ್ ನೋಂದಣಿಗಾಗಿ ಸಂಪರ್ಕಿಸಿ.

# ಕ್ರೈಸ್ತ ನಾಯಕರ ಸಮಾವೇಶವನ್ನು ಏರ್ಪಡಿಸಿರಿ

ಆಲ್ ಪೀಪಲ್ಸ್ ಸಭೆಯು, ಸಭಾಪಾಲಕರು, ಸ್ಥಳೀಯ ಸಭಾ ನಾಯಕತ್ವದಲ್ಲಿರುವವರು, ಕ್ರೈಸ್ತ ಸೇವೆಯಲ್ಲಿ ತೊಡಗಿಸಿಕೊಂಡಿರುವ ಇತರರಿಗೆ ಆತ್ಮನ ಅಭಿಷೇಕದ ಸಜ್ಜುಗೊಳ್ಳುವಿಕೆ ಮತ್ತು ಪಾಲು ಕೊಡುವಿಕೆಯನ್ನು ಒದಗಿಸುತ್ತದೆ. ಅಭಿಷೇಕ ಹೊಂದಿದ ಬೋಧನೆ, ಆತಮನ ನಡೆಸುವಿಕೆಯ ಸೇವೆ ಮತ್ತು ಪಾಲು ಕೊಡುವಿಕೆಯ ಜೊತೆಗೆ ನಮ್ಮ ತಂಡವು ವೈಯಕ್ತಿಕವಾಗ ಸಂಭಾಷಣೆ ಮತ್ತು ಭಾಗವಹಿಸುವವರೊಡನೆ ಚರ್ಚೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಪ್ರತಿಯೊಂದು ಕ್ರೈಸ್ತ ಸಮಾವೇಶವು ಒಂದು ನಿರ್ದಿಷ್ಟ ವಿಷಯದ ಮೇಲೆ ಕೇಂದ್ರೀಕರಿಸಿ 2 ಅಥವಾ 3 ದಿವಸಗಳು ವಿಶಿಷ್ಟವಾಗಿ ಜರುಗುತ್ತದೆ. ಭಾಗವಹಿಸುವವರು ನವೀಕೃತಗೊಂಡವರಾಗಿ, ಅಧಿಕಾರ ಹೊಂದಿದವರಾಗಿ ಮತ್ತು ಮಹತ್ತಾದ ರೀತಿಯಲ್ಲಿ ಪರಿಣಾಮ ಬೀರಲೂ ಸಜ್ಜುಗೊಳ್ಳುತ್ತಾರೆ ಮತ್ತು ಅವರ ಸೇವೆಯಲ್ಲಿ ಬಹಳ ಪರಿಣಾಮಕಾರಿಯುಳ್ಳವರಾಗಿ ಹೋಗುತ್ತಾರೆ. ಕ್ರೈಸ್ತ ನಾಯಕರುಗಳ ಸಮಾವೇಶವು ವಿಶಿಷ್ಟವಾಗಿ ಒಂದು ಸ್ಥಳೀಯ ಸಭೆಯಿಂದ, ಒಂದು ಸೇವಾ ಸಂಘಸಂಸ್ಥೆ ಅಥವಾ ಸಂಘಸಂಸ್ಥೆಯ ಆ ಪ್ರದೇಶದ ಸಭಾಪಾಲಕರು, ಸಭೆಗಳ ಮುಖ್ಯ ಸಂಘಸಂಸ್ಥೆಯ ಕಛೇರಿ ಅಥವಾ ಸಂಘಸಂಸ್ಥೆ ಅಥವಾ ಅದರ ಸಂಕೀರ್ಣ ವ್ಯವಸ್ಥೆಯಲ್ಲಿ ಏರ್ಪಡಿಸುತ್ತಾರೆ. ಏರ್ಪಡಿಸುವಂತ ಸಂಘಸಂಸ್ಥೆಯು ಸಮಾವೇಶದ ಸಂಪೂರ್ಣ ವೆಚ್ಚವನ್ನು ನೋಡಿಕೊಳ್ಳುತ್ತಾರೆ. ಅದರ ಜೊತೆಗೆ ಭಾಗವಹಿಸುವವರನ್ನು ಆಹ್ವಾನಿಸುತ್ತಾರೆ. ಆಲ್ ಪೀಪಲ್ಸ್ ಸಭೆಯು ಕ್ರೈಸ್ತ ನಾಯಕರುಗಳ ಸಮಾವೇಶದಲ್ಲಿ ಭಾಗವಹಿಸುವವರಿಗಾಗಿ ಸೇವೆ ಸಲ್ಲಿಸಲು ತಂಡವನ್ನು ಕಳುಹಿಸಿಕೊಡುತ್ತದೆ.

ನಮ್ಮ ತಂಡವು ಸಾಮಾನ್ಯವಾಗಿ ಸೇವೆ ಸಲ್ಲಿಸುವ ಕೆಲವು ವಿಷಯಾಂಶಗಳು:

- ಉಜ್ಜೀವನಗಳು, ಸಂದರ್ಶನಗಳು ಮತ್ತು ದೇವರ ಚಲನೆಗಳು
- ಪ್ರಸನ್ನತೆ ಮತ್ತು ಮಹಿಮೆ
- ದೇವರ ರಾಜ್ಯ ಕಟ್ಟುವವರು
- ಸಮದಟ್ಟಾದ ನೆಲ
- ದೇವರ ಮನೆ
- ಅಪೋಸ್ತಲ ಮತ್ತು ಪ್ರವಾದನಾ ಸೇವೆ
- ಸ್ವಸ್ಥತೆ ಮತ್ತು ಬಿಡುಗಡೆಯ ಸೇವೆ
- ಆತ್ಮನ ವರಗಳು
- ಮದುವೆ ಮತ್ತು ಕುಟುಂಬ
- ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು ಮತ್ತು ಮಾರುಕಟ್ಟೆ ಕ್ಷೇತ್ರದ ರೂಪಾಂತರ

ಪ್ರಸಕ್ತವಾದ ಕ್ರೈಸ್ತ ನಾಯಕರುಗಳ ಸಮಾವೇಶದ ವಿಷಯಾಂಶಗಳ ಪಟ್ಟಿಗಾಗಿ: ದಯವಿಟ್ಟು apcwo.org/CLಯನ್ನು ಸಂಪರ್ಕಿಸಿರಿ

ಕ್ರೈಸ್ತ ನಾಯಕರುಗಳ ಸಮಾವೇಶದ ಯೋಜನೆ ಮತ್ತು ವೇಳಾಪಟ್ಟಿಗಾಗಿ ನಮಗೆ ದಯವಿಟ್ಟು contact@apcwo.orgಗೆ ಇ-ಮೇಲ್ ಕಳುಹಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನ್ನು, ಹಸಿದ ಜನರಿಗೆ ಐದುರೊಟ್ಟಿ ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ, ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನ್ನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಹುದು. ಸತ್ಯವೇದವು ಅಅಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು,

ಪಾಪದ ಶಾಶ್ವತ ದೋಷಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ, ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನ್ನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತಊ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ, ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ಊಊನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ''ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್*

ಟಿಪ್ಪಣಿಗಳು

ಟಿಪ್ಪಣಿಗಳು

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಅಧ್ಯಯನ ತರಬೇತಿ ನೀಡುತ್ತೇವೆ:
1 ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
2 ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
3 ವರ್ಷದ ಬ್ಯಾಚ್ಯುಲರ್ ಆಫ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು **apcwo.org/biblecollege** ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation (NATA).

ಸತ್ಯವೇದವು ದೇವರ ಅನೇಕ ರೂಪಗಳನ್ನು ಅನಾವರಣಗೊಳಿಸುತ್ತದೆ. ಇವುಗಳಲ್ಲಿ ತುಂಬಾ ಬಲಯುತವಾದ ದೇವರ ಪ್ರಕಟನೆಗಳಲ್ಲಿ ದೇವರು ಒಬ್ಬ ತಂದೆಯಾಗಿದ್ದಾನೆ ಎಂಬುದಾಗಿದೆ. ದೇವರು ನಮ್ಮ ಪರಲೋಕದ ತಂದೆಯಾಗಿದ್ದಾನೆ. ಕರ್ತನಾದ ಯೇಸುವು ದೇವರನ್ನು '' 'ನಮ್ಮ ತಂದೆ'' ಎಂಬುದಾಗಿ ಕರೆಯಲು ಕಲಿಸಿದ್ದಾನೆ. ನಮಗಾಗಿರುವ ತಂದೆಯ ಪ್ರೀತಿಯನ್ನು ಸತ್ಯವೇದವು ಪ್ರಕಟಿಸುತ್ತದೆ. ಈ ಪುಸ್ತಕವು ತಂದೆಯ ಪ್ರೀತಿಯ ಅಧ್ಯಯನವಾಗಿದೆ. ನಮಗಾಗಿರುವ ದೇವರ ಪ್ರೀತಿಯ ನಮ್ಮ ತಿಳುವಳಿಕೆಯು ನಾವು ದೇವರನ್ನು ಹೇಗೆ ಪ್ರೀತಿಸುತ್ತವೆ, ನಮ್ಮನ್ನು ಹೇಗೆ ಪ್ರೀತಿಸಿಕೊಳ್ಳುತ್ತೇವೆ ಮತ್ತು ಇತರರನ್ನು ಹೇಗೆ ಪ್ರೀತಿಸುತ್ತೇವೆಂಬುದರ ಮೇಲೆ ಪರಿಣಾಮ ಬೀರುತ್ತದೆ.

ದೇವರು, ಪರಲೋಕದಲ್ಲಿನ ನಮ್ಮ ತಂದೆಯಾಗಿದ್ದಾನೆ, ನಮ್ಮನ್ನು ಅಗಾಧವಾಗಿ ಮತ್ತು ಅಪರಿಮಿತವಾಗಿ ಪ್ರೀತಿಸುತ್ತಾನೆ. ತಂದೆಯ ಪ್ರೀತಿಯ ದೊಡ್ಡದಾದ ಅಭಿವ್ಯಕ್ತತೆ ಮತ್ತು ಪ್ರದರ್ಶನವೆಂದರೆ ಯೇಸುಕ್ರಿಸ್ತನ ಶಿಲುಬೆಯಾಗಿದೆ. ನಮಗಾಗಿರುವ ತಂದೆಯ ಪ್ರೀತಿಯನ್ನು ನಾವು ಅರಿತುಕೊಂಡಾಗ, ನಂಬಿದಾಗ, ಪಡೆದಾಗ, ಮತ್ತು ವಿಶ್ರಮಿಸುವಾಗ ಎಲ್ಲವೂ ಬದಲಾಗುತ್ತದೆ. ನಾವು ಸ್ವಸ್ಥರಾಗಿದ್ದೇವೆ, ಸಂಪೂರ್ಣರಾಗಿದ್ದೇವೆ ಮತ್ತು ನಮ್ಮ ಎಲ್ಲಾ ಬಂಧನಗಳು ಮತ್ತು ಮುರಿಯುವಿಕೆಗಳಿಂದ ಸ್ವತಂತ್ರರಾಗಿದ್ದೇವೆ.

ನಾವು ತಂದೆಯ ಪ್ರೀತಿಯಿಂದ ಜೀವಿಸುವಾಗ ನಾವು ಪ್ರೀತಿಸಲ್ಪಟ್ಟಂತೆ ನಾವು ಪ್ರೀತಿಸುತ್ತೇವೆ. ನಾವು ದೇವರನು ಉಚಿತವಾಗಿ ಪ್ರೀತಿಸುತ್ತೇವೆ. ಇತರರನ್ನು ಸಹ ಉಚಿತವಾಗಿ ಪ್ರೀತಿಸುತ್ತೇವೆ. ದೇವರ ಮುರಿಯಲಾಗದ ಪ್ರೀತಿಯ ಮೂಲಕವಾಗಿ ವಿಜಯಶಾಲಿಗಿಂತ ಅಧಿಕವಾಗಿ, ಎಲ್ಲಾ ಜೀವಿತದ ಸವಾಲುಗಳನ್ನು ಮತ್ತು ಕತ್ತಲೆಯ ದುಷ್ಟ ಬಲಗಳನ್ನು ವಶಪಡಿಸಿಕೊಂಡವರಿಗಿಂತ ಅಧಿಕವಾಗಿ ಜೀವಿಸುತ್ತೇವೆ. ಈ ಪುಸ್ತಕವು ನಿಮಗಾಗಿದೆ!

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: www.apcwo.org